# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಏಪ್ರಿಲ್, ೨೦೧೪ ಸಂಪುಟ: ೩ ಸಂಚಿಕೆ ೯

ಸಂಪಾದಕ : ಡಿ.ಎಸ್.ನಾಗಭೂಷಣ

ಚಂದಾ : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೨೦/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕನ ಟಿಪ್ಪಣಿಗಳು

ಪ್ರಿಯ ಓದುಗರೇ,

ಇದು ಚುನಾವಣೆಗೆ ಮುನ್ನ ಪ್ರಕಟವಾಗುತ್ತಿರುವ ನಮ್ಮ ಕೊನೆಯ ಸಂಚಿಕೆ. ಮುಂದಿನ ಐದು ವರ್ಷಗಳ ಕಾಲ ನಮ್ಮನ್ನಾಳುವ ಸರ್ಕಾರವನ್ನು ನಾವು ಆಯ್ಕೆ ಮಾಡಿಕೊಳ್ಳಬೇಕಿದೆ. ಇಂದು ನಮ್ಮ ಮುಂದೆ ನಾಲ್ಕು ಆಯ್ಕೆಗಳಿವೆ: ಕಾಂಗ್ರೆಸ್ ನೇತೃತ್ವದ ಯುಪಿಎ, ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಮೂರನೇ ಶಕ್ತಿಯೆಂದು ಕರೆಯಲಾಗುವ ನಾಲ್ಕಾರು ಪ್ರಾದೇಶಿಕ ಮತ್ತು ಎಡಪಕ್ಷಗಳ ಮೈತ್ರಿಕೂಟ ಮತ್ತು ಏಕಾಂಗಿಯಾದ ಆಂ ಆದ್ಮಿ ಪಕ್ಷ.

ಈಗ ಒಂದೊಂದನ್ನಾಗಿ ನೋಡಹೊರಟರೆ, ಕಳೆದ ಹತ್ತು ವರ್ಷಗಳ ಆಡಳಿತದ ವೈಖರಿಯ ಹಿನ್ನೆಲೆಯಲ್ಲಿ ಬುದ್ಧಿನೆಟ್ಟಗೆ ಇದ್ದವರು ಕಾಂಗ್ರೆಸ್ಸಿಗೆ ಮತ ಹಾಕಲು ಬಯಸಲಾರರು. ಕೈಹಾಕಿದ್ದಲ್ಲೆಲ್ಲ ಸಾವಿರ ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ಈ ಪಕ್ಷದ ನಾಯಕರಿಗೆ ತಾವು ನಡೆಸಿದ ಆಡಳಿತದ ರೀತಿ ನೀತಿಗಳಲ್ಲೇ ಭ್ರಷ್ಟಾಚಾರದ ಬೀಜಗಳು ಅಡಗಿವೆ ಎಂಬುದು ಗೊತ್ತಾಗಿಲ್ಲದಿರುವುದೇ ಈ ಪಕ್ಷದ ದುರಂತ. ನೆಹರೂ ಕುಟುಂಬದ ಸದಸ್ಯರೊಬ್ಬರ ನಾಯಕತ್ವವಿಲ್ಲದೇ ಕುಸಿದೇ ಹೋಗುವಷ್ಟು ಲಡ್ಡಾಗಿ ಹೋಗಿರುವ ಈ ಪಕ್ಷ ಸಹಜವಾಗಿಯೇ ದೇಶದ ಸಾಮಾನ್ಯ ಜನತೆಗೆ ಅಪರಿಚಿತನಾದ ಒಬ್ಬ ವ್ಯಕ್ತಿಯ ಕೈಗೆ ರಾಜಕೀಯ ಆಡಳಿತದ ಸೂತ್ರವನ್ನು ನೀಡುವ ಅನಿವಾರ್ಯತೆಗೆ ಸಿಕ್ಕಿಕೊಂಡಿತು. ಆ ವ್ಯಕ್ತಿಯೋ ವಿಶ್ವ ಬ್ಯಾಂಕಿನ ವಿಸ್ತರಣಾ ಕೌಂಟರ್‌ನಂತೆ ಭಾರತ ಸರ್ಕಾರವನ್ನು ನಡೆಸುತ್ತಾ ಹೊಸ ಮಜಭೂತಾದ ಮಧ್ಯಮ ವರ್ಗವೊಂದನ್ನು ಸೃಷ್ಟಿಸಿ ಅದರ ಶ್ಲಾಘನೆಯ ಸುರಿಮಳೆಯಲ್ಲಿ ತೇಲುತ್ತಾ ಹೋಗಿ ದಾರಿ ತಪ್ಪಿ ಕಕ್ಕಾವಿಕ್ಕಿಯಾಗುವ ವೇಳೆಗೆ ಎಲ್ಲ ಮುಗಿದಿತ್ತು. ಭ್ರಷ್ಟಾಚಾರ ಮುಗಿಲು ಮುಟ್ಟಿತ್ತು. ಅನ್ನಭಿಕ್ಷೆ, ಸಾಲಭಿಕ್ಷೆ ಉದ್ಯೋಗ ಭಿಕ್ಷೆ, ಹೊಸ ಹೊಸ ಮೀಸಲಾತಿ ಭಿಕ್ಷೆ ಇತ್ಯಾದಿ ಭಿಕ್ಷೆಗಳ ಮೂಲಕ ಅದರ ತೂತುಗಳನ್ನು ಮುಚ್ಚುವ ಪ್ರಯತ್ನ ಆತ್ಮಗೌರವವುಳ್ಳ ಯಾರಲ್ಲೂ ನಂಬಿಕೆ ಹುಟ್ಟಿಸಿಲ್ಲ. ಅದು ಈಗ ಆಯ್ಕೆ ಮಾಡಿಕೊಂಡಿರುವ ವಂಶಾಡಳಿತ ನಾಯಕತ್ವದ ಪರಿಯಂತೂ ಅದನ್ನು ಜನಸಾಮಾನ್ಯರ ಕಣ್ಣಿನಲ್ಲಿ ಮತ್ತಷ್ಟು ಹೀನಾಯಗೊಳಿಸಿದೆ. ಈ ಪಕ್ಷ, ಕಾಲದಲ್ಲಿ ಮರುಹುಟ್ಟು ಪಡೆಯದ ಹೊರತು ಅದಕ್ಕೆ ಭವಿಷ್ಯವಿದ್ದಂತಿಲ್ಲ.

ಇದೆಲ್ಲದರ ಪೂರ್ಣ ಲಾಭ ಪಡೆಯಲು ಸಜ್ಜಾಗಿರುವ ಪಕ್ಷವೆಂದರೆ ಬಿಜೆಪಿ. ಆದರೆ ಬಿಜೆಪಿ ನೋಡಿದರೆ ತನ್ನದು ಪಕ್ಷದ ಸರ್ಕಾರಕ್ಕಿಂತ ಹೆಚ್ಚಾಗಿ ಮೋದಿಯ ಸರ್ಕಾರ ಎಂದು ಘಂಟಾಘೋಷಾಗಿ ಹೇಳಿಬಿಟ್ಟಿದೆ. ಇಂತಹ ಅನಿವಾರ್ಯತೆ ಬಿಜೆಪಿಗೆ ಏಕೆ ಉಂಟಾಯಿತು? ಯೋಚಿಸಬೇಕಿದೆ. ಮೋದಿ ಮಾತ್ರ ಈ ದೇಶವನ್ನು ಈಗ ಆಳಬಲ್ಲ ಎಂಬ ಸಂದೇಶದ ಹಿಂದೆ ಯಾವ ಮತ್ತು ಎಂತಹ ರಾಜಕಾರಣದ ವಾಸನೆ ಇದೆ ಎಂಬುದನ್ನು ಮೋದಿಯ ಚರಿತ್ರೆಯ ಹಿನ್ನೆಲೆಯಲ್ಲಿ ಆಳವಾಗಿ ಯೋಚಿಸಬೇಕಿದೆ. ಬರಲಿರುವ ಮೋದಿಯ ರಾಜಕಾರಣ ಎಂತಹದಿರಬಹುದು ಎಂಬುದರ ಸೂಚನೆಗಳನ್ನು ಪಕ್ಷ ತನ್ನ ಚುನಾವಣಾ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯ ಪರಿಯಲ್ಲಿಯೇ ಕಾಣಬಹುದಾಗಿದೆ. ಇದನ್ನೇ ಮೋದಿವಾದಿಗಳು ದೃಢನಿಶ್ಚಯದ ಆಡಳಿತ ಎಂದು ಕರೆಯುವುದು ಎಂದು ಕಾಣುತ್ತದೆ. ಇದು ಕೋಮುವಾದಕ್ಕಿಂತ ಹೆಚ್ಚು ಭಯವನ್ನುಂಟುಮಾಡುವಂತಹ ವಿಷಯವಾಗಿದ್ದು ಬಿಜೆಪಿಯ ಸಾಂಪ್ರದಾಯಿಕ ಮತದಾರರೂ ಒಮ್ಮೆ ಯೋಚಿಸಿ ಮತ ಚಲಾಯಿಸುವಂತಹ ಪರಿಸ್ಥಿತಿ ಉಂಟಾಗಿದೆ. ಇನ್ನು ಇತರರ ಆಯ್ಕೆಯ ಪಾಡೇನು? ಇಲ್ಲಿ ಹೇಳಲೇಬೇಕಾದ ಇನ್ನೊಂದು ಮುಖ್ಯ ಸಂಗತಿ ಎಂದರೆ, ಕೆಳಜಾತಿಯೊಂದಕ್ಕೆ ಸೇರಿದ ಮೋದಿಯ ಈ ರಾಜಕಾರಣ, ಜಾತಿ ಪದ್ಧತಿಯನ್ನು ಕುರಿತ ನಮ್ಮ ಈವರೆಗಿನ ಜನಪ್ರಿಯ ಗ್ರಹಿಕೆಯ ನೆಲೆಗಳು ತುರ್ತಾಗಿ ಬದಲಾಗಬೇಕಾಗಿದೆ ಎಂಬುದು.

ಇನ್ನು ಮೂರನೇ ಶಕ್ತಿಯಲ್ಲಿರುವ ಎಡಪಕ್ಷಗಳು ಮತ್ತು ನಿತೀಶ್‌ರ ಸಂಯುಕ್ತ ಜನತಾದಳಗಳ ಹೊರತಾಗಿ ಮಿಕ್ಕ ಪಕ್ಷಗಳ ಚಾಲೂ-ಚಹರೆಗಳನ್ನು ನೋಡಿದರೇ ಭಯ ಉಂಟಾಗುವಂತಿದೆ. ಮಮತಾ, ಜಯಲಲಿತಾ, ಮಾಯಾವತಿ, ಮುಲಾಯಂ ಇವರನ್ನೊಮ್ಮೆ ಪ್ರಧಾನ ಮಂತ್ರಿಯಾಗಿ ಊಹಿಸಿಕೊಂಡರೇ ಸಾಕು ನನ್ನ ಮಾತು ಅರ್ಥವಾದೀತು. ಕೋಮುವಾದದ ಸೋಂಕೊಂದು ಇಲ್ಲವೆನ್ನುವುದನ್ನು ಬಿಟ್ಟರೆ ಇವರಿಗೂ ಮೋದಿಗೂ ಯಾವ ವ್ಯತ್ಯಾಸಗಳೂ ಇರಲಾರದು.

ಹೀಗಿರುವಾಗ ಯಾವ ಪಕ್ಷದ ಮೇಲೆ, ಭರವಸೆ ಇಟ್ಟು ಮತ ಹಾಕುವುದು? ಆ ಬಗ್ಗೆ ಯೋಚಿಸಲು ತೊಡಗಿದಾಗ ನಮಗೆ ಮೊದಲು ಹೊಳೆಯಬೇಕಾದದ್ದು, ಅವೆಲ್ಲ ಒಂದೇ ಪಡಿಯಚ್ಚಿನಲ್ಲಿ ಬೇರೆ ಬೇರೆ ಮಣ್ಣುಗಳಲ್ಲಿ ಮಾಡಲ್ಪಟ್ಟ ಆಕೃತಿಗಳು ಎಂಬುದು. ಇದನ್ನು ನಾವು ಅರಿಯಬಲ್ಲವರಾದರೆ ನಮ್ಮ ಈ ಅಸಹಾಯಕ ಪರಿಸ್ಥಿತಿಯಿಂದ ನಾವು ನಿಜವಾಗಿ ಪಾರಾಗಲು ಇಂದು ನಮಗಿರುವುದು ಒಂದೇ ಆಯ್ಕೆ;ಅದು ಆಂ ಆದ್ಮಿ ಪಕ್ಷ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಅದು ರಾಜಕಾರಣದ ಬಗ್ಗೆ ಹೊಚ್ಚ ಹೊಸ ಪರಿಭಾಷೆಯಲ್ಲಿ ಮಾತನಾಡುತ್ತಿದೆ. ನಮ್ಮ ಮುಂದೆ ಹೊಚ್ಚ ಹೊಸ ಜನರನ್ನು ಪ್ರಸ್ತುತಪಡಿಸುತ್ತಿದೆ. ಅಷ್ಟೇ ಅಲ್ಲ, ಅದರ ಹಿಂದೆ ನಿಂತಿರುವವರೂ ಈವರೆಗೆ ರಾಜಕಾರಣದಿಂದ ಸಂಕೋಚಪಟ್ಟು ಹೊರಗಿದ್ದ-ಹೊಚ್ಚ ಹೊಸ-ಜನರೇ.

ಹೌದು ಈ ಪಕ್ಷದ ಅಡಿಪಾಯವೇ ಇನ್ನೂ ಭದ್ರವಾಗಿ ಮೂಡಿಲ್ಲ. ಅದರ ರಾಜಕೀಯ ತಾತ್ವಿಕತೆ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇದರ ಚುನಾವಣಾ ಅಭ್ಯರ್ಥಿಗಳು-ಕನಿಷ್ಟ ಕರ್ನಾಟಕದಲ್ಲಿ-ಜನರಿಗೆ ಸುಪರಿಚಿತವಾದವರಲ್ಲ. ಅವರು ಗೆಲ್ಲುವ ಸಂಭವ ತೀರಾ ಕಡಿಮೆ. ಆದರೆ ಈ ಪಕ್ಷವನ್ನು ನಾವು ಪೋಷಿಸಬೇಕಾದದ್ದು ನಾಳೆಯ ಫಲಗಳಿಗಾಗಿ. ಅದಕ್ಕಾಗಿ ಇಂದಿನಿಂದಲೇ ಅದರ ಬುಡಕ್ಕೆ ನೀರೆಯಲಾರಂಭಿಸಬೇಕು. ಜನರ ಮಧ್ಯದಿಂದಲೇ, ಟೀಕೆ, ವ್ಯಂಗ್ಯ, ಪರಿಹಾಸ್ಯಗಳ ಎದುರಿನಲ್ಲೇ ಚಿಗುರೊಡೆದು ತನ್ನ ಕಚ್ಚಾ ಧೈರ್ಯ ಮತ್ತು ನೈತಿಕತೆಗಳೊಂದಿಗೆ ಹೊಸ ಆಸೆ ಹುಟ್ಟಿಸಿರುವ ಈ ಪಕ್ಷದಿಂದ ಈಗಲೇ ಎಲ್ಲವನ್ನೂ ನಿರೀಕ್ಷಿಸಲಾಗದು ಎಂಬ ಕನಿಷ್ಟ ಸಾಮಾನ್ಯ ಪರಿಜ್ಞಾನದೊಂದಿಗೆ ಮತ್ತು ಅದನ್ನು ಸರಿ ದಾರಿಯಲ್ಲಿ ನಡೆಸಬೇಕಾದ ಹೊಣೆ ನಮ್ಮದೇ ಎಂಬ ಅರಿವಿನೊಂದಿಗೆ ಸಾಧ್ಯವಾದೆಡೆಯಲ್ಲೆಲ್ಲ ನಾವು ಈ ಪಕ್ಷವನ್ನು ಬೆಂಬಲಿಸಬೇಕಿದೆ.

**-ಸಂಪಾದಕ**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಒಂದು ಕಾಲದಲ್ಲಿ 'ಲಂಕೇಶ್ ಪತ್ರಿಕೆ'ಗೆ ಕಾಯುತ್ತಿದ್ದ ಹಾಗೆ 'ಹೊಸ ಮನುಷ್ಯ'ಕ್ಕೆ ಕಾಯುವಂತೆ ಮಾಡಿದ್ದೀರಿ. ಆಂ ಆದ್ಮಿ ಪಕ್ಷದ ಬಗೆಗಿನ ಅನೇಕ ಗೊಂದಲಗಳನ್ನು ಈ ಬಾರಿಯ ಸಂಪಾದಕೀಯ ಪರಿಹರಿಸಿದೆ. ಆ ಪಕ್ಷದ ಸಮಗ್ರ ರಾಜಕೀಯ ನೀತಿಯ ಗೈರು ಹಾಜರಿಯಲ್ಲೂ, ಪಕ್ಷದ ಇದುವರೆಗಿನ ಕ್ರಿಯೆ ಹಾಗೂ ನಡವಳಿಕೆಯ ಮೂಲಕ ತಾನು ಮುಂದೆ ರೂಪಿಸಿಕೊಳ್ಳಬಹುದಾದಂತ ಸೈದ್ಧಾಂತಿಕ ನೀತಿಯ ಬಗ್ಗೆ ಭರವಸೆ ಮತ್ತು ಆಸೆಯನ್ನು ಹೊಂದಬಹುದಾಗಿದೆ ಎಂದು ನೀವು ಮನವರಿಕೆ ಮಾಡಿಕೊಟ್ಟಿದ್ದೀರಿ. ಧನ್ಯವಾದಗಳು

**–ಬಿ.ವಿ. ಸುರೇಂದ್ರ,** ಧಾರವಾಡ

ಮಾರ್ಚ್ ತಿಂಗಳ ಹೊಸ ಮನುಷ್ಯ ಮಾಸಿಕ ಪತ್ರಿಕೆಯಲ್ಲಿ 'ನಾವು ಆಗಬಯಸಿರುವ ಅಮೇರಿಕಾ ಹೀಗಿದೆ ನೋಡಿ...' ಡಾ.ಎ.ಎನ್.ನಾಗರಾಜ್‌ರವರ ಲೇಖನ ಅರ್ಥಪೂರ್ಣವಾಗಿದೆ. ಇಂದಿನ ಯುವ ಹಾಗೂ ಮಧ್ಯ ವಯಸ್ಸಿನ, ಅದರಲ್ಲೂ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನತೆ ಹುಚ್ಚು ಹುಚ್ಚಾಗಿ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಅನುಕರಿಸುತ್ತಿರುವುದು, ನೈತಿಕತೆ ಮರೆಯಾಗುತ್ತಿರುವುದು ವಿಷಾದನೀಯ. ಐಟಿ, ಬಿಟಿ ಕಂಪೆನಿಗಳು ಹಣದ ಹೊಳೆ ಹರಿಸುತ್ತಿರುವುದೂ, ಈ ದೇಶದ ಜನರಿಗೆ ದಿನಕ್ಕೊಂದು ಹೊತ್ತು ಊಟವೂ ಸಿಗದಿರುವಾಗ, ಸರ್ಕಾರೀ ನೌಕರರ ಬೆದರಿಕೆಗೆ ಮಣಿದು ವೇತನ ಹೆಚ್ಚಿಸುವುದೂ, ಅವರ ಕೈಯಲ್ಲಿ ಅಗತ್ಯಕ್ಕಿಂತ ಹೆಚ್ಚು ಹಣ ಸೇರುತ್ತಿರುವುದೂ ಕಾರಣ.

ಇನ್ನು ನಿಮ್ಮ ಈ ಸಂಚಿಕೆಯ ಬಹುಭಾಗ 'ಕ್ರೇಜಿ'ವಾಲರ ಆಂ ಆದ್ಮಿ ಪಕ್ಷವೇ ತುಂಬಿದೆ. ಸರಿಯಾದ ಅಡಿಪಾಯವಿಲ್ಲದೆ ಇಂತಹ ಬಹಳಷ್ಟು ಪಕ್ಷಗಳು ಹುಟ್ಟಿ ಸತ್ತಿವೆ ಎಂಬುದನ್ನು ನೀವು ಗಮನಿಸಬೇಕು

–ಡಾ.ಎಚ್.ಎಸ್. ರುದ್ರೇಶ್, ಶಿವಮೊಗ್ಗ

'ಹೊಸ ಮನುಷ್ಯ' ಪತ್ರಿಕೆಯಲ್ಲಿ ಲೇಖನಗಳು ಅತ್ಯುತ್ತಮವಾಗಿರುತ್ತವೆ. ಆದರೆ ಇತ್ತೀಚಿನ ಸಂಚಿಕೆಗಳಲ್ಲಿ ಪತ್ರಿಕೆ ಆಂ ಆದ್ಮಿ ಪಕ್ಷವನ್ನು ಬೆಂಬಲಿಸಿ ಬರೆಯುತ್ತಿರುವುದನ್ನು ನಾನು ಒಪ್ಪುದಿಲ್ಲ. ಈ ಪಕ್ಷ ಮತ್ತು ಇದರ ನಾಯಕ ಕೇಜ್ರಿವಾಲ್, ಅತಿಯಾದ ಮಾಧ್ಯಮ ಪ್ರಚಾರದ ಮೂಲಕ ದೆಹಲಿ ಜನರಿಗೆ ಹಳೆಯ ಪಕ್ಷಗಳ ಬಗ್ಗೆ ಸುಳ್ಳು ಹೇಳಿ ಮತ್ತು ಸುಳ್ಳು ಆಶ್ವಾಸನೆಗಳನ್ನು ನೀಡಿ ಮತ ಪಡೆದು ಈಗ ಇಲ್ಲಿಂದ ಓಡಿ ಹೋಗಿ ಅದೇ ಕೆಲಸವನ್ನು ರಾಷ್ಟ್ರೀಯ ಮಟ್ಟದಲ್ಲಿ ಮಾಡತೊಡಗಿದ್ದಾರೆ. 15 ವರ್ಷಗಳಿಂದ ದೆಹಲಿಯಲ್ಲಿ ವಾಸ ಮಾಡುತ್ತಿರುವ ನಾನು ಅತಿ ಹೆಚ್ಚು ಮೊತ್ತದ ವಿದ್ಯುತ್ ಬಿಲ್ ಕಟ್ಟಿರುವುದು ಇವರ ಆಡಳಿತ ಕಾಲದಲ್ಲೇ. ಇಂತಹವರನ್ನು ಪತ್ರಿಕೆ ಬೆಂಬಲಿಸಕೂಡದು.

**–ಸಿ.ಎಂ. ಅಂಗಡಿ,** ದೆಹಲಿ

ಗಾಂಧಿಯವರಿಗೆ ಒಬ್ಬಾತ, ತನ್ನಿಂದ ಲೋಕಕ್ಕೆ ಏನೂ ಪ್ರಯೋಜನವಿಲ್ಲವೆನಿಸುತ್ತಿದೆ, ಹಾಗಾಗಿ ತಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದೇನೆ, ಅದಕ್ಕೆ ತಮ್ಮ ಅಭಿಪ್ರಾಯ ತಿಳಿಸಿ ಎಂದು ಪತ್ರ ಬರೆಯುತ್ತಾನೆ!

ಅದಕ್ಕೆ ಗಾಂಧೀಜಿ 'ನಿಜಕ್ಕೂ ಒಬ್ಬನಿಂದ ಲೋಕಕ್ಕೆ ಏನೂ ಪ್ರಯೋಜನವಿಲ್ಲವೆಂದಾದರೆ ಅಂಥವನು ಆತ್ಮಹತ್ಯೆ ಮಾಡಿಕೊಂಡರೆ ತಪ್ಪಿಲ್ಲ; ಆದರೆ ನೀನು ಮೂರು ದಿನ ಏಕಾಂತದಲ್ಲಿದ್ದು, ಆಗ ನಿನ್ನಿಂದ ಒಂದೂ ಒಳ್ಳೆಯ ಕೆಲಸ ನಡೆಯದಿದ್ದರೆ, ಅಥವಾ ಲೋಕದ ಬಗ್ಗೆ ಒಂದು ಒಳ್ಳೆಯ ಯೋಚನೆಯೂ ಬಾರದಿದ್ದರೆ, ಆಗ ನೀನು ತೀರ್ಮಾನಿಸಬಹುದು' ಎಂದು ಉತ್ತರಿಸುತ್ತಾರೆ.

ನನಗೆ ಬಹಳ ಇಷ್ಟವಾದ್ದು ಈ ಪ್ರಸಂಗ. ನಮ್ಮನ್ನು ಪ್ರಾಮಾಣಿಕ ಮತ್ತು ಮೃದುಗೊಳಿಸುವ ಒಂದು ಒಳ್ಳೆ ಯೋಚನೆ ದೊಡ್ಡ ಕ್ರಿಯೆಯಷ್ಟೇ ಅರ್ಥಪೂರ್ಣ. ಕೆಲವೊಮ್ಮೆ ಅನಿಸುವುದು–ಅದೊಂದೇ ಅರ್ಥಪೂರ್ಣ ಎಂದು. ಈ ಹಿನ್ನೆಲೆಯಲ್ಲಿ 'ಹೊಸ ಮನುಷ್ಯ' ಪತ್ರಿಕೆಯನ್ನು ನಾನು ನೋಡುವುದು. ಹುಂಬ ಧೈರ್ಯ, ಅಳುಕು, ತಾನೇ ಸರಿ ಎಂಬ ಮನೋಭಾವ ಅಥವಾ ತನ್ನ ಕುರಿತೇ ಅವಿಶ್ವಾಸ–ಒಂದು ಸಣ್ಣ ಅಭಿಪ್ರಾಯ ತಳೆಯಬೇಕಾದರೂ ಈ ಎಲ್ಲ ಅಪಾಯಗಳ ವಿರುದ್ಧ ಸೆಣೆಸಬೇಕಾಗುತ್ತದೆ. ಅದರ ಮೂಲಕ ಬರುವ ಖಚಿತತೆ ಪತ್ರಿಕೆಯಲ್ಲಿನ ನಿಮ್ಮ ವಾದಗಳಲ್ಲಿ ನನಗೆ ಕಾಣುತ್ತದೆ.

**–ಎಸ್. ಮಂಜುನಾಥ್,** ಕೆ.ಆರ್. ನಗರ

## 'ನಾವು ಆಗಬಯಸಿರುವ ಅಮೇರಿಕಾ ಹೀಗಿದೆ ನೋಡಿ...' : ಒಂದು ಪ್ರತಿಕ್ರಿಯೆ

**ಕ**ಳೆದ ಸಂಚಿಕೆಯಲ್ಲಿನ 'ನಾವು ಆಗಬಯಸಿರುವ ಅಮೇರಿಕಾ ಹೀಗಿದೆ ನೋಡಿ...' ಎಂಬ ತಮ್ಮ ಲೇಖನದಲ್ಲಿ ಡಾ.ಎ.ಎನ್.ನಾಗರಾಜ್ ಅವರು, ಸಂಪಾದಕರು ತಮ್ಮ 'ಇಂಟ್ರೋ'ದಲ್ಲಿ ಸೂಚಿಸಿರುವಂತೆ, ನಮಗೆ ಅಮೆರಿಕನ್ ಸಮಾಜದ ಬಗ್ಗೆ ಈಗಾಗಲೇ ತಿಳಿದಿರುವ ವಿಚಾರಗಳನ್ನೇ ಹೇಳಿದ್ದಾರೆ. ವ್ಯಾಪಾರೋದ್ಯಮ ಕೇಂದ್ರಿತ ಅಲ್ಲಿನ ಬದುಕು, ಅವರನ್ನು ಆರೋಗ್ಯಪೂರ್ಣ ಮನುಷ್ಯ ಸಂಬಂಧಗಳಿಂದ ದೂರ ಮಾಡಿದೆ ಮತ್ತು ಅಲ್ಲಿನ ಪರಿಸರವನ್ನು ಮಲಿನಗೊಳಿಸಿದೆ ಎಂಬುದು ನಾಗರಾಜ್ ಅವರ ಮುಖ್ಯ ಆರೋಪ. ಇದೆಲ್ಲಾ ನಿಜವಿರಬಹುದು. ಆದರೆ ಕಳೆದ ಐವತ್ತು ವರ್ಷಗಳಲ್ಲಿ ಅಲ್ಲಿಗೇ ವಲಸೆ ಹೋಗಿ ನೆಲೆಸಿರುವ ಭಾರತೀಯರಲ್ಲಿ ಭಾರತಕ್ಕೆ ವಾಪಸ್ಸು ಬಂದಿರಲು ಇಚ್ಛಿಸುವವರ ಸಂಖ್ಯೆ ನಗಣ್ಯ ಪ್ರಮಾಣದಲ್ಲಿರುವುದಕ್ಕೆ ಕಾರಣವೇನು? ಅಲ್ಲಿ ನಿವೃತ್ತರಾದ ಮೇಲೂ ಅವರು ಅಲ್ಲೇ ವಾಸಿಸಲು ಇಚ್ಛಿಸಿದ್ದಾರಲ್ಲ ಯಾಕೆ? ಇಂತಹವರೆಲ್ಲರಿಗೂ ಅಲ್ಲಿನ ಬದುಕಿನಲ್ಲಿ ಒಳಿತಿನ ಅಂಶಗಳೇ ಹೆಚ್ಚಾಗಿವೆ ಎಂದು ಕಂಡಿದೆ ಎಂಬುದು ಇದರಿಂದ ಸಾಬೀತಾಗುತ್ತದೆ ಎಂದು ನನ್ನ ಅನಿಸಿಕೆ.

ಇನ್ನು ಕಳೆದ ಎರಡು ದಶಕಗಳ ಆರ್ಥಿಕ ಉದಾರೀಕರಣ ಭಾರತೀಯ ಸಮಾಜ ಮತ್ತು ಬದುಕನ್ನು ಅಮೆರಿಕನ್ ಜೀವನ ವಿಧಾನ ಮತ್ತು ಮೌಲ್ಯಗಳ ಕಡೆಗೆ ಕೊಂಡೊಯ್ದಿದೆಯೆ? ನಮ್ಮ ನಗರಗಳಲ್ಲಿ ಕಂಡುಬಂದಿರುವ ಕಾರುಗಳ ಓಡಾಟದ ಭರಾಟೆಯನ್ನು ನೋಡಿದರೆ ಇದು ನಿಜ ಎನಿಸುತ್ತದೆ. ಆದರೆ ನಮ್ಮ ಜನರಲ್ಲಿ ಇಂದಿಗೂ ಚಿನ್ನದ ಬಗ್ಗೆ ಇರುವ ವ್ಯಾಮೋಹ ಒಂದಿನಿತೂ ಕಡಿಮೆಯಾಗದೆ, ವಿದೇಶದಿಂದ ವಿದೇಶಿ ವಿನಿಮಯದಿಂದ ಕೊಂಡುಕೊಳ್ಳಬೇಕಾದ ಈ ಚಿನ್ನದ ವ್ಯವಹಾರ ಭಾರತ ಸರ್ಕಾರಕ್ಕೆ ದೊಡ್ಡ ತಲೆ ನೋವಾಗಿರುವುದು ನಮಗೆಲ್ಲಾ ಗೊತ್ತಿದೆ. ಶೇರು ಪೇಟೆಯಲ್ಲಿ ಶೇಕಡ ಐದರಷ್ಟು ಭಾರತೀಯರು ಹಣ ಹೂಡುತ್ತಾರೆ. ಅಮೆರಿಕಾದಲ್ಲಿ ಈ ಪ್ರಮಾಣ ಶೇಕಡ ಐವತ್ತರಷ್ಟಿದೆ. ಭಾರತದ ಒಟ್ಟು ಕೈಗಾರಿಕಾ ಉತ್ಪಾದನೆಯಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಪಾಲು ಶೇಕಡ ಹದಿನೆಂಟರಷ್ಟು ಮಾತ್ರ. ಇತ್ತೀಚೆಗೆ ಪ್ರಕಟವಾಗಿರುವ, ಬೆಂಗಳೂರಿನ ಐಐಎಂನ ಪ್ರೊ. ವೈದ್ಯನಾಥನ್ ಅವರ 'ಇಂಡಿಯಾ ಅನ್‌ಇನ್‌ಕಾರ್ಪೊರೇಟೆಡ್' (India uninc, 2014) ಕೃತಿಯಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಇಂದಿಗೂ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಮಟ್ಟದ ಪ್ರೊಪ್ರೈಟರ್‌ಶಿಪ್ ಮತ್ತು ಪಾರ್ಟನರ್‌ಶಿಪ್ ರೂಪದ ಘಟಕಗಳ ಪಾತ್ರವೇ ನಿರ್ಣಾಯಕವಾದದ್ದು ಎಂಬುದನ್ನು ತೋರಿಸಿಕೊಡಲಾಗಿದೆ.

ನಾವು ಅಮೆರಿಕಾ ಬಗ್ಗೆ ಮಾತನಾಡುವಾಗ ಅಲ್ಲಿನ ಒಂದು ವಿದ್ಯಮಾನವನ್ನು ಗಮನಿಸಲೇ ಬೇಕು. ಅಲ್ಲಿನ ಜನರಲ್ಲಿ ಶೇ.೭೫ಕ್ಕೂ ಹೆಚ್ಚಿನ ಜನರು ಕ್ರಿಶ್ಚಿಯನ್ ರಿಲಿಜನ್‌ಗೆ ನಿಷ್ಠರಾಗಿದ್ದಾರೆ. ಅಲ್ಲಿ ಇಂದು ಐನೂರಕ್ಕೂ ಹೆಚ್ಚು ಕ್ರಿಶ್ಚಿಯನ್ ಪಂಗಡಗಳು ಕ್ರಿಯಾಶೀಲವಾಗಿವೆ. ವಾಸ್ತವವಾಗಿ ನಾವು ಕಳೆದ ಮೂರು ದಶಕಗಳಿಂದ ಕೇಳುತ್ತಾ ಬಂದಿರುವ 'ರಿಲಿಜಸ್ ಫಂಡಮೆಂಟಲಿಸಂ' ಎಂಬುದು ಮೊದಲು ಶುರುವಾದದ್ದು ಅಮೆರಿಕಾದಲ್ಲಿ, ಕಳೆದ ಶತಮಾನದ ಇಪ್ಪತ್ತರ ದಶಕದಲ್ಲಿ.

**–ಗಿರೀಶ. ವಿ. ವಾಘ್,** ಬೆಂಗಳೂರು

## ನಮ್ಮ ಸಮಾಜವಾದಿಗಳು

# ಪಕ್ಷದ ಆಶ್ರಯದಾತರಾಗಿದ್ದ ಕೆ.ಜಿ. ಮಹೇಶ್ವರಪ್ಪ



**ಡಾ.** ರಾಮಮನೋಹರ ಲೋಹಿಯಾ ಹಾಗೂ ಮಲೆನಾಡ ಗರ್ಭದಲ್ಲಿ ಗೇಣಿದಾರರ ಪರವಾಗಿ ಹೋರಾಟದ ನಾಯಕತ್ವ ವಹಿಸಿದ್ದ ಶಾಂತವೇರಿ ಗೋಪಾಲ ಗೌಡರ ಸಿದ್ಧಾಂತಗಳಿಗೆ ಮತ್ತು ಅವರುಗಳ ವ್ಯಕ್ತಿತ್ವಗಳ ಸೆಳೆತಕ್ಕೆ ಒಳಗಾಗಿ ಕಾಗೋಡು ಸತ್ಯಾಗ್ರಹದಲ್ಲಿ ಧುಮುಕಿದ ಕಾರಿಗನೂರು ಗೌಡರ ಮನೆತನದ ಜೆ.ಹೆಚ್. ಪಟೇಲ್ ಹಾಗೂ ಕುರ್ಕಿ ಗೌಡರ ಮನೆತನದ ಕೆ.ಜಿ. ಮಹೇಶ್ವರಪ್ಪ ಅವರುಗಳು ಕರ್ನಾಟಕ ಕಂಡ ಬಯಲುಸೀಮೆಯ ಅಪರೂಪದ ಸಮಾಜವಾದಿ ರಾಜಕಾರಣಿಗಳು. ಬೆಚ್ಚನೆಯ ಮನೆ, ವೆಚ್ಚಕ್ಕೆ ಧನ □ ಧಾನ್ಯಗಳೆಲ್ಲವೂ ಇದ್ದು, ನೂರಾರು ಎಕರೆಗಳ ಜಮೀನ್ದಾರರಾಗಿದ್ದು; ಕಾರ್ಮಿಕರ □ ಗೇಣಿದಾರರ ಪರವಾದ ಹೋರಾಟ ಹಾಗೂ ಸಂಘಟನೆಗೆ ಇಳಿದದ್ದು ಅವರುಗಳಲ್ಲಿ ಸೆಲೆಯೊಡೆದ ಸಮಾಜವಾದಿ ಸಿದ್ಧಾಂತದಿಂದಾಗಿ. ಪಟೇಲ್ □ ಕೆ.ಜಿ.ಎಂ, ಇಬ್ಬರೂ ಲವ-ಕುಶರಂತೆ ಜೊತೆ ಜೊತೆಯಾಗಿ ಹೆಜ್ಜೆ ಹಾಕಿದವರು.

ಕೆ.ಜಿ. ಮಹೇಶ್ವರಪ್ಪ ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲೇ ಭಾರತ ಸ್ವಾತಂತ್ರ್ಯ ಪರವಾದ ಹಾಗೂ ಪ್ರಗತಿಪರ ನಿಲುವುಗಳನ್ನು ಮೈಗೂಡಿಸಿಕೊಂಡು ಬಂದವರು. ಗಾಂಧೀಜಿಯವರ ಕರೆಯಂತೆ ಊರಲ್ಲಿ ಹರಿಜನರೊಡನೆ ಬಹಿರಂಗ ಸಹ ಭೋಜನದಲ್ಲಿ ಭಾಗಿಯಾದವರು. ಅವರ ತಂದೆ ಮಹದೇವಪ್ಪ ಗೌಡರು ಕಾಂಗ್ರೆಸ್ ಪಕ್ಷದ ಅನುಯಾಯಿಯಾಗಿದ್ದವರು.

ನಲವತ್ತರ ದಶಕದಲ್ಲಿ ಕೆ.ಜಿ.ಎಂ. ವಿದ್ಯಾರ್ಥಿಯಾಗಿದ್ದಾಗ, ಸ್ವಾತಂತ್ರ್ಯ ಚಳುವಳಿ ಜೋರಾಗಿತ್ತು. ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಸೆಟೆದು ನಿಂತಿದ್ದ ಮಹೇಶ್ವರಪ್ಪ ತನ್ನ ಸಹೋದರ ಮುರಿಗೇಂದ್ರಪ್ಪ ಅವರ ಜೊತೆಗೂಡಿ ಕುರ್ಕಿ ಗ್ರಾಮದ ಪಕ್ಕದಲ್ಲಿ ಹಾದು ಹೋಗುವ ರೈಲ್ವೆ ಹಳಿಯ ಪಕ್ಕದ ಟೆಲಿಫೋನ್ ತಂತಿಗಳನ್ನು ಕತ್ತರಿಸಿ, ಹಳಿಗಳ ಮೇಲೆ ಕಲ್ಲುಗಳನ್ನಿಡುವ ಸರ್ಕಾರ ವಿರೋಧಿ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದರು. ಆಗ ಇವರ ತಂದೆಯವರು ಇವರನ್ನು ಕೊಟ್ಟಿಗೆಯಲ್ಲಿ ಕೂಡಿ ಹಾಕಿ ಬಾಗಿಲಿಗೆ ಅಪಶಕುನದ ಪರಿಗಿ ಮುಳ್ಳು ಎಳೆದು ತಮ್ಮ ಮಕ್ಕಳನ್ನು ಪೋಲೀಸರಿಂದ ರಕ್ಷಿಸುತ್ತಿದ್ದರು. ನಂತರ ಕೆ.ಜಿ.ಎಂ. ತನ್ನ ಸ್ನೇಹಿತರನ್ನು ಸೇರಿಸಿಕೊಂಡು ಕುರ್ಕಿ-ಕೊಗ್ಗನೂರು ಸುತ್ತ ಮುತ್ತಣವಿದ್ದ ಈಚಲ ಮರಗಳನ್ನು ಕಡಿದಿದ್ದಲ್ಲದೇ, ಸೇಂದಿ ಕಟ್ಟುವ ಚರ್ಮದ ಚೀಲಗಳನ್ನು ಕತ್ತರಿಸಿ ಹಾಕುವ ಮೂಲಕ ಸರ್ಕಾರದ ಆದಾಯ ಮೂಲಕ್ಕೆ ನಷ್ಟ ಮಾಡತೊಡಗಿದರು.

ಇದೆಲ್ಲದರ ಮಧ್ಯೆಯೇ ದಾವಣಗೆರೆಯಲ್ಲಿ ಇಂಟರ್‌ಮೀಡಿಯೆಟ್ ಮುಗಿಸಿದ ಮಹೇಶ್ವರಪ್ಪ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ ಪಡೆದು, ತಮ್ಮ ಮದುವೆಯ ನಂತರ ಬೆಳಗಾವಿಯಲ್ಲಿ ಕಾನೂನು ಪದವಿ ಪಡೆದರು. ಅನತಿ ಕಾಲದಲ್ಲೇ ಅವರು ಐವತ್ತರ ದಶಕದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಶಾಂತವೇರಿ ಗೋಪಾಲ ಗೌಡರ ನೇತೃತ್ವದಲ್ಲಿ ನಡೆದ ಕಾಗೋಡು ಸತ್ಯಾಗ್ರಹದಲ್ಲಿ ಗೆಳೆಯ ಜೆ.ಹೆಚ್. ಪಟೇಲರ ಜೊತೆಗೂಡಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸಮಾಜವಾದಿ ಚಳುವಳಿಯನ್ನು ಪ್ರವೇಶಿಸಿದರು. ಡಾ. ಲೋಹಿಯಾ ಮತ್ತು ಗೋಪಾಲ ಗೌಡರ ಅಚ್ಚುಮೆಚ್ಚಿನ ಶಿಷ್ಯರಾದರು. ಆ ಮೂಲಕ ಕುರ್ಕಿ ಗೌಡರ ಕುಟುಂಬ ತೋರುತ್ತಿದ್ದ ಕಾಂಗ್ರೆಸ್ ನಿಷ್ಠೆಯನ್ನು ಧಿಕ್ಕರಿಸಿದರು.

ಈ ಮಧ್ಯೆ ಬೆಂಗಳೂರು ಸೇರಿ ವಕೀಲಿಕೆ ಶುರುಮಾಡಿದ್ದ ಮಹೇಶ್ವರಪ್ಪನವರು ತಮ್ಮ ಶ್ರದ್ಧೆ ಹಾಗೂ ಬುದ್ಧಿವಂತಿಕೆಗಳಿಂದ ಬಹು ಬೇಗನೆ ಬೆಂಗಳೂರು ನಗರದಲ್ಲಿ ಪ್ರಮುಖ ಅಡ್ವೊಕೇಟ್ ಆಗಿ ಹೊರಹೊಮ್ಮಿದರು. ಈ ಸಂದರ್ಭದಲ್ಲಿ ಕರ್ನಾಟಕದ ಸಮಾಜವಾದಿ ಪಕ್ಷಕ್ಕೆ ಇವರು ಒಂದರ್ಥದಲ್ಲಿ ಆಶ್ರಯದಾತರಾಗಿದ್ದರು. ಅವರು ತಮ್ಮ ವಕೀಲ ವೃತ್ತಿಯಿಂದ ಬರುವ ಬಹುಪಾಲು ದುಡಿಮೆಯನ್ನು ಪಕ್ಷದ ಸಂಘಟನೆಗೇ ವ್ಯಯ ಮಾಡುತ್ತಿದ್ದರು. ಕರ್ನಾಟಕಕ್ಕೆ ಡಾ. ಲೋಹಿಯಾ ಬರಲಿ, ಮಧುಲಿಮಯೆ, ಜಾರ್ಜ್ ಫರ್ನಾಂಡೀಸ್, ರಬಿರಾಯ್... ಹೀಗೆ ಯಾರೇ ಬರಲಿ ಅವರ ಆತಿಥ್ಯವನ್ನು ಬಹುಪಾಲು ಕೆ.ಜಿ.ಎಂ. ಅವರೇ ನೋಡಿಕೊಳ್ಳುತ್ತಿದ್ದರು. ಆ ಅವಧಿಯಲ್ಲಿ ಕೊಂಡಿದ್ದ ಇವರ ಮಾರಿಷ್ ಕಾರು ಬಹುತೇಕ ಪಕ್ಷದ ಕೆಲಸಕ್ಕೆಂದೇ ಮೀಸಲಾಗಿರುತ್ತಿತ್ತು.

ಕೆ.ಜಿ.ಎಂ. ೧೯೬೦ರಲ್ಲಿ ರಾಜ್ಯ ಸಮಾಜವಾದಿ ಪಕ್ಷದ ಅಧ್ಯಕ್ಷರಾದಾಗ ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಜೆ.ಹೆಚ್. ಪಟೇಲ್ ಸ್ಪರ್ಧಿಸಿ ಜಯಗಳಿಸಿದರು. ಅಷ್ಟೇ ಅಲ್ಲ, ತೀರ್ಥಹಳ್ಳಿಯಿಂದ ಗೋಪಾಲ ಗೌಡರಲ್ಲದೆ ಚನ್ನಗಿರಿಯಿಂದ ಎನ್.ಜಿ. ಹಾಲಪ್ಪ, ಭದ್ರಾವತಿಯಿಂದ ಅನ್ವರ್‌ಖುದ್ದೂಸ್, ಸೊರಬದಿಂದ ಬಂಗಾರಪ್ಪ, ರಾಯಚೂರಿನಿಂದ ನಾಗಪ್ಪ ಮುಂತಾಗಿ ರಾಜ್ಯ ವಿಧಾನ ಸಭೆಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜವಾದಿಗಳು ಗೆದ್ದು ಬಂದರು. ಇವರ ಅಧ್ಯಕ್ಷತೆಯ ಅವಧಿಯ ಪಕ್ಷದ ಇನ್ನೊಂದು ಸಾಧನೆ ಎಂದರೆ ೧೯೭೩ರಲ್ಲಿ ೪೬ ದಿನಗಳ ಕಾಲ ನಡೆದ ಸಂಡೂರು ಭೂ ಸತ್ಯಾಗ್ರಹ ಸಂಡೂರು ರಾಜಮನೆತನದ ಅಕ್ರಮ ವಶದಲ್ಲಿದ್ದ ೮೦೨೯ ಎಕರೆ ಸರ್ಕಾರಿ ಭೂಮಿಯನ್ನು ರೈತರಿಗೆ ಕೊಡಿಸುವಲ್ಲಿ ಯಶಸ್ವಿಯಾದ ಈ ಸತ್ಯಾಗ್ರಹದಲ್ಲಿ ಮಹೇಶ್ವರಪ್ಪನವರೊಂದಿಗೆ ವಿವಿಧ ರಾಜ್ಯಗಳಿಂದ ಬಂದಿದ್ದ ಸಮಾಜವಾದಿ ಪಕ್ಷದ ಕಾರ್ಯಕರ್ತರೂ ಸೇರಿದಂತೆ ಜೆ.ಎಚ್. ಪಟೇಲ್, ಎಸ್. ವೆಂಕಟರಾಂ, ಎಸ್.ಎಸ್. ಕುಮುಟಾ, ಕಾಗೋಡು ತಿಮ್ಮಪ್ಪ ಮುಂತಾದವರು ಭಾಗವಹಿಸಿ ಸೆರೆಮನೆವಾಸವನ್ನೂ ಅನುಭವಿಸಿದರು. ಈ ಸತ್ಯಾಗ್ರಹದ ಹುಮ್ಮಸ್ಸಿನಲ್ಲಿ, ಅವರೆಗೆ ಮಾರ್ಕ್ಸ್‌ವಾದಿಯಾಗಿದ್ದ ಎಂ.ಪಿ. ಪ್ರಕಾಶ್ ಸಮಾಜವಾದಿ ಪಕ್ಷ ಸೇರಿಕೊಂಡರು.

ಕೆ.ಜಿ.ಎಂ., ಅಧ್ಯಕ್ಷ ಪದವಿಯವರೆಗೆ ಸಾಗಿ ಪಕ್ಷದಲ್ಲಿ ಅನೇಕರ ಚುನಾವಣಾ ಯಶಸ್ಸಿಗೆ ದುಡಿದರಾದರೂ ಸ್ವತಃ ಅವರು ಚುನಾವಣೆಗಳಲ್ಲಿ ಯಶಸ್ಸು ಕಂಡದ್ದು ಕಡಿಮೆಯೆಂದೇ ಹೇಳಬೇಕು. ಬೆಂಗಳೂರು ನಗರ ಪಾಲಿಕೆಗೆ ನಾಲ್ಕು ಬಾರಿ ಸ್ಪರ್ಧಿಸಿ ಸೋತಿದ್ದಲ್ಲದೆ ತಮ್ಮ ರಾಜಕಾರಣದ ಗುರಿ ಕಂಡುಕೊಳ್ಳಲು ತಮ್ಮ ಕಾರ್ಯಕ್ಷೇತ್ರವನ್ನು ತವರು ದಾವಣಗೆರೆಗೆ ಸ್ಥಳಾಂತರಿಸಿದ ಮೇಲೂ ಅವರು ವಿಧಾನ ಸಭೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಸೋಲಿನ ಸರಮಾಲೆಯನ್ನು ಎದುರಿಸಬೇಕಾಯಿತು. ಕಾಂಗ್ರೆಸ್ ಇಬ್ಭಾಗವಾಗಿ ಗಾಂಜಿ ವೀರಪ್ಪ -ಸಿದ್ದವೀರಪ್ಪನವರಂತಹ ಘಟಾನುಘಟಿಗಳು ದಾವಣಗೆರೆ ಹರಿಹರ ರಾಜಕಾರಣವನ್ನು ಆಳುತ್ತಿದ್ದ ಕಾಲವದು. ಇದರ ಮಧ್ಯೆ ಗೋಪಾಲಗೌಡರು ಅಕಾಲಿಕವಾಗಿ ನಿಧನರಾಗಿ ಎನ್.ಜಿ. ಹಾಲಪ್ಪ, ಬಂಗಾರಪ್ಪ ಮುಂತಾದ ಗೆಳೆಯರು ಕಾಂಗ್ರೆಸ್ ಸೇರಿ ಪಕ್ಷ ಸಂಕಟಕ್ಕೀಡಾದಾಗ ಅವರು ಎದೆಗುಂದದೆ ಜೆ.ಹೆಚ್. ಪಟೇಲರೊಂದಿಗೆ ಸಮಾಜವಾದಿ ಪಕ್ಷವನ್ನು ಮುನ್ನಡೆಸಿದರು.

ಅವರು ಬರಿ ಚುನಾವಣೆ ರಾಜಕಾರಣದಲ್ಲಿ ಮಾತ್ರ ಸಕ್ರಿಯರಾಗಿರದೆ, ಅಂದಿನ ಕಬ್ಬು ಬೆಳೆಗಾರರ ಸಮಸ್ಯೆಗೆ ಸ್ಪಂದಿಸಿ, ಬೆಳೆಗಾರರನ್ನು ಒಂದುಗೂಡಿಸಿ ಹೋರಾಟಕ್ಕಿಳಿದರು. ಅಂದಿನ ಸರ್ಕಾರ ಅಕ್ಕಿ ಗಿರಿಣಿ ಮಾಲೀಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಭತ್ತದ ಲೆವಿಯನ್ನು ರೈತರ ಮೇಲೆ ಹೇರಿತು.. ಮತ್ತೆ ಅವರು ಭತ್ತ ಬೆಳೆಯುವ ರೈತರನ್ನು, ಅದರಲ್ಲೂ ಯುವ ರೈತರನ್ನು ಸಂಘಟಿಸಿ ಹೋರಾಟಕ್ಕಿಳಿದರು. ಆಗ ವಿದ್ಯಾರ್ಥಿ ಆಗಿದ್ದ ನಾನು, ನನ್ನಂತಹ ಅನೇಕ ಯುವಕರು ಅವರು ಆರಂಭಿಸಿದೆ ಕೊಟ್ಟ 'ಜೈಲು ಭರೋ' ಚಳುವಳಿಗೆ ಧುಮುಕಿ ಪೊಲೀಸರ ಲಾಠಿ ರುಚಿ ಕಾಣಬೇಕಾಯಿತು..

ತವರು ದಾವಣಗೆರೆಯೂ ಕೆ.ಜಿ.ಎಂ. ಅವರ ಹೋರಾಟಕ್ಕೆ ತಕ್ಕ ಫಲ ನೀಡಲಿಲ್ಲ ಎಂದೇ ಹೇಳಬೇಕು. ೧೯೭೧ರಲ್ಲಿ ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಸೋತರು. ನಂತರದಲ್ಲಿ ಹೊಸದಾಗಿ ಮಾಯಕೊಂಡ ಕ್ಷೇತ್ರ ರಚನೆಯಾಗುತ್ತದೆ. ಆ ವೇಳೆಗಾಗಲೇ ಜೆ.ಪಿ.ಯವರ 'ಸಂಪೂರ್ಣ ಕ್ರಾಂತಿ' ಹೋರಾಟ ಆರಂಭವಾಗಿ ಅದರ ಮುಂಚೂಣಿಯಲ್ಲಿದ್ದ ಕೆ.ಜಿ.ಎಂ., ನಂತರ ಜನತಾ ಪಕ್ಷದ ನೇತಾರರಾಗಿರುತ್ತಾರೆ. ೧೯೭೭ ರಲ್ಲಿ ನಡೆದ ಲೋಕಸಭಾ ಚುನಾವಣೆಗೆ ದಾವಣಗೆರೆಯಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ಎದುರು ಪುನಃ ಸೋಲುತ್ತಾರೆ. ಅವರ ಹುಟ್ಟೂರು ಕುರ್ಕಿ ಒಳಗೊಂಡಂತೆ ಹೊಸದಾಗಿ ರಚನೆಯಾದ ಮಾಯಕೊಂಡ ಕ್ಷೇತ್ರದಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಕಾಂಗ್ರೆಸ್ ಎದುರು ಮತ್ತೆ ಸೋಲುತ್ತಾರೆ.

ಸಾಲು ಸಾಲು ಸೋಲುಗಳಿಂದ ಮಹೇಶ್ವರಪ್ಪ ನಿರಾಶರಾಗಲಿಲ್ಲ. ಆ ಮಧ್ಯೆ ರಾಜಕೀಯದ ಕ್ಷಿಪ್ರ ಬೆಳವಣಿಗೆಯಲ್ಲಿ ದೇವರಾಜ್ ಅರಸ್ ಇಂದಿರಾಗಾಂಧಿಯವರಿಂದ ದೂರ ಸರಿದು ಸ್ಥಾಪಿಸಿದ 'ಕ್ರಾಂತಿರಂಗ' ಪಕ್ಷದಲ್ಲಿ ತಮ್ಮ ಮೂಲ ಸಮಾಜವಾದಿ ಆಶಯಗಳನ್ನು ಕಂಡುಕೊಂಡ ಅವರು ತಮ್ಮ ಸಮಾಜವಾದಿ ಗೆಳೆಯ ಜೆ.ಹೆಚ್. ಪಟೇಲ್‌ರೊಂದಿಗೆ ಆ ಪಕ್ಷವನ್ನು ಸೇರಿ ತಮ್ಮ ಮೊದಲ ಚುನಾವಣಾ ವಿಜಯವನ್ನು ಮಾಯಕೊಂಡ ಕ್ಷೇತ್ರದಲ್ಲಿ ಸಾಧಿಸಿದರು. ಆದರೆ ಸರ್ಕಾರದ ಮುಖ್ಯ ಸಚೇತಕರಾಗಿ ಕೆಲಸ ಮಾಡುತ್ತಿರುವಾಗಲೇ ೧೯೮೪ರ ಲೋಕಸಭೆ ಚುನಾವಣೆಗೆ, ದಾವಣಗೆರೆ ಕ್ಷೇತ್ರದ ಅಭ್ಯರ್ಥಿಯಾಗುವ ಒತ್ತಡಕ್ಕೆ ಸಿಕ್ಕಿ, ಆ ಚುನಾವಣೆಯಲ್ಲಿ ಸೋಲನುಭವಿಸುತ್ತಾರೆ. ಇದರಿಂದ ಹತಾಶರಾದ ಅವರು ೧೯೮೫ರ ವಿಧಾನಸಭಾ ಚುನಾವಣೆಗಳಲ್ಲಿ ಗೆಲುವಿನ ಸಾಧ್ಯತೆ ಇದ್ದರೂ ಚುನಾವಣೆಗೆ ನಿಲ್ಲಬಯಸಲಿಲ್ಲ.

ಅಷ್ಟೇ ಅಲ್ಲ, ಮಹೇಶ್ವರಪ್ಪ ಮುಂದೆ ಎಂದೂ ನೇರ ಚುನಾವಣೆಗೆ ನಿಲ್ಲಲಿಲ್ಲ. ನಿಜ, ಸಮಾಜವಾದಿಯಾಗಿ ಜನನಾಯಕನೊಬ್ಬ ನೇರ ಚುನಾವಣೆಗಳ ಮೂಲಕವೇ ಶಾಸನ ಸಭೆಯನ್ನು ಪ್ರವೇಶಿಸಬೇಕು ಎಂದು ಹೇಳುತ್ತಿದ್ದ ಮಹೇಶ್ವರಪ್ಪ ಅವರನ್ನು ಅವರ ಹಳೆಯ ಸಮಾಜವಾದಿ ಮತ್ತು ಹೊಸ ಜನತಾ ಪಕ್ಷದ ಗೆಳೆಯರೂ ಸೇರಿ ಸಾರ್ವಜನಿಕ ಜೀವನದಲ್ಲಿನ ಅವರ ನಿಸ್ವಾರ್ಥ ಸೇವೆಯನ್ನು 'ಗೌರವಿಸುವವರಂತೆ ೧೯೮೬–೮೭ರಲ್ಲಿ ವಿಧಾನಸಭೆಯಿಂದ ರಾಜ್ಯಸಭೆಗೆ ಆರಿಸಿ ಕಳಿಸಿದರು. ಕೆ.ಜಿ.ಎಂ. ಸಂಸತ್ ಸದಸ್ಯರಾಗಿದ್ದ ೬ ವರ್ಷಗಳ ಕಾಲ ಉತ್ತಮ ಸಂಸದೀಯ ಪಟು ಎಂಬ ಹೆಸರು ಪಡೆದರು. ಪ್ರಶ್ನೋತ್ತರ ಕಲಾಪಗಳಲ್ಲಿ ಜನತೆಯ ಸಮಸ್ಯೆಗಳಗಳನ್ನೆತ್ತಿ ಪರಿಹಾರದ ಪ್ರಯತ್ನ ಮಾಡುತ್ತಿದ್ದರು.

ತೊಂಭತ್ತರ ದಶಕದಿಂದ ಹೆಚ್ಚುಕಮ್ಮಿ ರಾಜಕಾರಣದ ಬಗ್ಗೆ ಸಕ್ರಿಯ ಆಸಕ್ತಿಯನ್ನು ಕಳೆದುಕೊಂಡ ಮಹೇಶ್ವರಪ್ಪ ಒಮ್ಮೆ ಕಾಂಗ್ರೆಸ್, ಮತ್ತೊಮ್ಮೆ ಜನತಾ ಎಂದು ತಮ್ಮ ಒಲವುಗಳನ್ನು ಬದಲಾಯಿಸುತ್ತಾ ತಮ್ಮ ಸಮಾಜವಾದಿ ಸಿದ್ಧಾಂತದ ಮೆರುಗಿಗೆ ಚ್ಯುತಿ ತಂದುಕೊಂಡರೆಂದೇ ಹೇಳಬೇಕು. ಚಿತ್ರದುರ್ಗ–ದಾವಣಗೆರೆ ಬಯಲುಸೀಮೆ ನಾಡಿನಲ್ಲಿ ಸಮಾಜವಾದಿ ಚಳುವಳಿಗೆ ಜೀವ ತುಂಬಿ ಅನೇಕ ಯುವಕರ ಪಾಲಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಅವರು ತಮ್ಮ ಕೊನೆಯ ದಿನಗಳಲ್ಲಿ ವಯೋಸಹಜವಾದ ಮರೆಗುಳಿತನಕ್ಕೆ ಒಳಗಾಗಿದ್ದರು. ಹೀಗಾಗಿ ಅವರ ಹೋರಾಟ ಕುರಿತ ಪುಸ್ತಕ ಹೊರತರಬೇಕೆಂಬ ಅವರ ಗೆಳೆಯರ ಪ್ರಯತ್ನಕ್ಕೆ ಹಾಗೂ ಸ್ವತಃ ಅವರೇ ತಮ್ಮ ಆತ್ಮ ಚರಿತ್ರೆ ಬರೆದಿಡಬೇಕೆಂಬ ಬಯಕೆ ಈಡೇರಲೇ ಇಲ್ಲ.

**–ಬಾ.ಮ. ಬಸವರಾಜಯ್ಯ**

---

# ಬೆಂಗಳೂರಿನಲ್ಲಿ ಲೋಹಿಯಾ ಸ್ಮರಣೆ: ಎರಡು ಕೃತಿಗಳ ಲೋಕಾರ್ಪಣೆ




'ದಿನಕ್ಕೆರಡು ಬಾರಿ ಕ್ರಾಂತಿಯಾದರೆ ಮಾತ್ರ ಈ ದೇಶ ಸರಿಹೋಗುವುದು ಎಂದಿದ್ದ ಸಮಾಜವಾದಿ ಚಿಂತಕ ಮತ್ತು ಹೋರಾಟಗಾರ ಡಾ. ರಾಮಮನೋಹರ ಲೋಹಿಯಾ ಅವರ ಕ್ರಾಂತಿಕಾರಿ ವಿಚಾರಗಳು ಇಂದಿನ ಜಾಗತೀಕರಣದ ಸಂದರ್ಭದಲ್ಲಿ ದೇಶದ ಯುವಜನತೆಯ ಗಮನ ಸೆಳೆಯಬೇಕಾಗಿದೆ ಎಂದು ಹಿರಿಯ ಚಿಂತಕ ಪ್ರೊ. ಜಿ. ಕೆ. ಗೋವಿಂದರಾವ್ ಅಭಿಪ್ರಾಯಪಟ್ಟರು. ಅವರು ಮಾರ್ಚ್ ೨೩ರಂದು ಡಾ॥ ರಾಮ ಮನೋಹರ ಲೋಹಿಯಾ ಸಮತಾ ವಿಚಾರ ಟ್ರಸ್ಟ್ (ರಿ.) ಬೆಂಗಳೂರು ಇವರ ವತಿಯಿಂದ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ನಡೆದ ಲೋಹಿಯಾರವರ ೧೦೪ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಹಸನ್ ನಯೀಂ ಸುರಕೋಡ್ ಅನುವಾದಿಸಿರುವ ಲೋಹಿಯಾ ಅವರ ಹತ್ತು ಬಿಡಿ ಬರಹಗಳ ಸಂಗ್ರಹ 'ಸಪ್ತಕ್ರಾಂತಿ, ಕಾಂಚನ ಮುಕ್ತಿ ಇತ್ಯಾದಿ' ಮತ್ತು ಡಿ.ಎಸ್. ನಾಗಭೂಷಣ ಅವರ 'ಲೋಹಿಯಾ ಜೊತೆಯಲ್ಲಿ,,,' ಎಂಬ ಎರಡು ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡುತ್ತಿದ್ದರು

ಲೋಹಿಯಾರವರನ್ನು ಇಂದೇಕೆ ನೆನಪಿಸಿಕೊಳ್ಳಬೇಕು? ಎಂಬ ವಿಷಯ ಕುರಿತು ಮಾತನಾಡಿದ ಸಮಾಜವಾದಿ ಚಿಂತಕ ಮತ್ತು 'ಹೊಸ ಮನುಷ್ಯ' ಪತ್ರಿಕೆಯ ಸಂಪಾದಕರಾದ ಡಿ. ಎಸ್. ನಾಗಭೂಷಣ ಅವರು ಇಂದಿನ ಜಾಗತೀಕರಣ ಸೃಷ್ಟಿಸಿರುವ ಹಲವು ತೆರನ ಸಂದಿಗ್ಧತೆಗಳ ಹಿನ್ನಲೆಯಲ್ಲಿ ಆಧುನಿಕ ನಾಗರೀಕತೆ ಕುರಿತು ಲೋಹಿಯಾ ಮಾಡಿದ ವ್ಯಾಖ್ಯಾನ ಅರ್ಥಪೂರ್ಣವೆನ್ನಿಸುತ್ತದೆ ಎಂದರು. ಪಶ್ಚಿಮದ ಆಧುನಿನಕ ನಾಗರೀಕತೆ ಕೊಟ್ಟ ಮಿತಿಯಿಲ್ಲದ ಸುಖಗಳ ಕಲ್ಪನೆಯಲ್ಲಿ ಬದುಕು ಕಟ್ಟಿಕೊಳ್ಳತೊಡಗಿರುವ ಭಾರತ ಇಂದು ಹಿಂಸಾತ್ಮಕ ಭಾರತವಾಗಿ ಮಾರ್ಪಾಡುಗೊಳ್ಳುತ್ತಾ ಬಹು ನೆಲೆಗಳ ಸಂಕಟಕ್ಕೆ ಸಿಕ್ಕಿದ್ದು, ಗಾಂಧಿ ಪ್ರಭಾವದಲ್ಲಿ ಲೋಹಿಯಾ ಪ್ರತಿಪಾದಿಸಿದ ಮಿತಿಗಳುಳ್ಳ ಬದುಕಿನ ಕಡೆ ನಾವಿಂದು ತುರ್ತು ಗಮನ ಕೊಡಬೇಕಿದೆ ಎಂದು ಅವರು ಸೂಚಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷರು ಹಾಗೂ ಚನ್ನಪಟ್ಟಣದ ಬಳಿಯ ಅರಳಾಳುಸಂದ್ರದ ಡಾ॥ ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯ ಟ್ರಸ್ಟಿ ಅನಸೂಯಮ್ಮ ಅವರನ್ನು ಅವರ ರೈತಪರ ಮತ್ತು ಮಹಿಳಾಪರ ಹೋರಾಟಗಳಿಗಾಗಿ ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಖ್ಯಾತ ಕವಿ ಸಿದ್ದಲಿಂಗಯ್ಯನವರು ಲೋಹಿಯಾ ಮತ್ತು ಬಾಬಾ ಸಾಹೇಬ್ ಅಂಬೇಡ್ಕರರ ನಡುವೆ ಆರಂಭವಾಗಿದ್ದ ಮಾತುಕತೆ ಅಂಬೇಡ್ಕರರ ಅಕಾಲಿಕ ಮರಣದಿಂದಾಗಿ ನಿಲ್ಲದೇ ಹೋಗಿದ್ದರೆ ಭಾರತದ ರಾಜಕಾರಣದ ದಿಕ್ಕೇ ಬದಲಾಗಿರುತ್ತಿತ್ತು ಎಂದರು.

ಅನೇಕ ಹಿರಿಯ ಸಮಾಜವಾದಿಗಳು, ಹೋರಾಟಗಾರರು, ದಲಿತ ಮತ್ತು ಮಹಿಳಾ ಪರ ಚಿಂತಕರು, ಯುವ ಜನತೆ ಭಾಗವಹಿಸಿದ್ದ ಸಮಾರಂಭದ ಅಧ್ಯಕ್ಷತೆಯನ್ನು ಆತಿಥೇಯ ಟ್ರಸ್ಟ್‌ನ ಅಧ್ಯಕ್ಷರಾದ ಎಂ. ಎಸ್. ರಂಗನಾಥ್ ವಹಿಸಿ ಅತಿಥಿಗಳನ್ನು ಸ್ವಾಗತಿಸಿದರು. ರಾಘವೇಂದ್ರ ಎಸ್.ಆರ್. ಕಾರ್ಯಕ್ರಮ ನಿರೂಪಿಸಿದರು ' ರಾಮಮನೋಹರ ಶಾಂತವೇರಿ ಮತ್ತು ಮಾಲಿನಿ ಅವರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ಆರ್. ಕೆ. ಸೀತಾರಾಂ ವಂದನೆ ಸಲ್ಲಿಸಿದರು.

(ವರದಿ: **ರಾಘವೇಂದ್ರ ಎಸ್. ಆರ್**)

# ಪ್ರೊ. ಬಿ. ಕೃಷಪ್ಪ ನೆನಪಿನ ಮಾಲೆ–೧೭

–ಇಂದಿರಾ ಬಿ.ಕೃಷ್ಣಪ್ಪ

## ಕೃಷ್ಣಪ್ಪನವರೊಂದಿಗೆ ಸ್ಕೂಟರ್ ಸವಾರಿ!

ಪ್ರತಿವರ್ಷ, ಮೇ–ಜೂನ್ ತಿಂಗಳಲ್ಲಿ ಪೇಪರ್ ವ್ಯಾಲ್ಯುಯೇಶನ್‌ಗಾಗಿ ಕೃಷ್ಣಪ್ಪ ಮೈಸೂರಿಗೆ ಹೋಗಿ ೨೦–೨೫ ದಿನಗಳಿರಬೇಕಾಗುತ್ತಿತ್ತು. ಆಗ ಈಗಿರುವ ಹಾಗೆ ಮೊಬೈಲ್ ಸಂಪರ್ಕಗಳಿಲ್ಲದ್ದರಿಂದ, ಬರೆಯುವ ಪತ್ರವೇ ಕ್ಷೇಮ ಸಮಾಚಾರ ವಾಹಕವಾಗಿತ್ತು. ಮೈಸೂರಿಂದ ಅವರು ವಾರಕ್ಕೊಂದು ಪತ್ರ ಬರೆಯುತ್ತಿದ್ದರು. ನಾನೂ ಮಾರುತ್ತರ ಬರೆಯುತ್ತಿದ್ದೆ. ಹಾಗೆ ಮಾರುತ್ತರ ಬರೆಯುವಾಗೊಮ್ಮೆ "ನೀವು ಪ್ರತಿಬಾರಿ, ವ್ಯಾಲ್ಯೂಯೇಶನ್ ನಿಂದ ಬರುವಾಗ, ನಿಮಗೆ ಮಕ್ಕಳು ಮಾತ್ರ ಜ್ಞಾಪಕಕ್ಕೆ ಬರುತ್ತಾರೆ. ಅವರಿಗೆ ಬಟ್ಟೆ ಆಟಿಕೆ ತರುತ್ತೀರಿ. ನನ್ನ ಜ್ಞಾಪಕ ನಿಮಗೆ ಒಮ್ಮೆಯಾದರೂ ಬರಲಾರದೇ? ಒಂದು ಸಣ್ಣ ವಾಚು, ಒಂದು ಪರ್ಸ್–ಅಂಥಾದ್ದು ಏನಾದರೂ ತರಬೇಕು ಅನ್ನಿಸಲಿಲ್ಲವೇ? ಹೆಂಡತಿ ಆದಾಕ್ಷಣ ಅಷ್ಟೇನೆಯೇ ನಿಮಗೆ." ಎಂದು ಬರೆದೆ. ಅವರು ವಾಪಸ್ಸು ಬಂದಾಗ, ಮುದ್ದಾದ ವಾಚು, ಪರ್ಸ್ ತಂದಿದ್ದರು. ಮನಸ್ಸು ಮುದಗೊಂಡಿತ್ತು.

ನಾನು, ಗಾಯಿತ್ರಿ, ರುದ್ರಪ್ಪ ಮೂರು ಜನ ಸೇರಿ ಕೆ.ಎ.ಎಸ್ ಪರೀಕ್ಷೆ ಬರೆಯಬೇಕೆಂದು ಓದಲಾರಂಭಿಸಿದೆವು. ಆಗ ಮೈಸೂರು, ಬೆಂಗಳೂರುಗಳಲ್ಲಿ ಮಾತ್ರ ಪರೀಕ್ಷಾ ಕೇಂದ್ರಗಳಿದ್ದುವು. ಈ ಪರೀಕ್ಷೆಯ ವೇಳಾಪಟ್ಟಿ ಹಾಗೂ ಕೃಷ್ಣಪ್ಪನವರ ವ್ಯಾಲ್ಯೂಯೇಶನ್ ವೇಳಾಪಟ್ಟಿಯೂ ಮೇ–ಜೂನ್‌ನಲ್ಲಿಯೇ ಬಂದಿದ್ದರಿಂದ, ನಾವೆಲ್ಲ ಮೈಸೂರಿಗೆ ಹೊರಟೆವು. ದೇವಯ್ಯ ಹರವೆಯವರ ಮಕ್ಕಳೊಂದಿಗೆ, ನಮ್ಮ ಮಕ್ಕಳಾದ ಶಾಲಿನಿ–ಸೀಮಾ ಆಡಿಕೊಂಡಿರುತ್ತಿದ್ದರು. ಎಲ್ಲರೂ ಬೆಳಗೆದ್ದು ಕೆಲಸದ ಮೇಲೆ ಹೋಗುವುದರಿಂದ ನನಗೆ ಓದಿಕೊಳ್ಳಲು ಸಮಯ ಸಿಗುತ್ತಿತ್ತು.

ಹೀಗೆ ಆರಂಭವಾದ ಪುಷ್ಪ–ದೇವಯ್ಯ ಹರವೆಯವರ ಸ್ನೇಹ ಸಂಪರ್ಕ ಹಾಲು ಜೇನಿನಂತಿತ್ತು. ದೇವಯ್ಯ ಹರವೆ ದಸಂಸದ ಹೃದಯವಂತ ಚಿಂತಕರಾಗಿದ್ದರು. ಮುಂದೆ ನಾನು ಇತಿಹಾಸದಲ್ಲಿ ಎಂ.ಎ ವ್ಯಾಸಂಗವನ್ನು ಮೈಸೂರು ವಿ.ವಿ.ದಲ್ಲಿ ತೆಗೆದುಕೊಂಡಂತಹ ಸಂದರ್ಭದಲ್ಲಿ ಅವರ ಮನೆಯೇ ನನ್ನ ಮೈಸೂರಿನ ತಂಗುದಾಣವಾಗಿತ್ತು. ಅಲ್ಲಿದ್ದ ಸಂದರ್ಭದಲ್ಲಿ ಡಾ. ರಾಮಲಿಂಗಂ, ಪ್ರೊ. ರಾಮದಾಸ್, ರಾಜಶೇಖರಕೋಠಿ, ರಂಜಾನ್ ದರ್ಗಾ, ಕೆ. ರಾಮಯ್ಯ, ಗೋವಿಂದಯ್ಯ–ಗೋಪಿಕಾ, ಇನ್ನೂ ಮುಂತಾದ ದಸಂಸದ ಚಿಂತಕರು, ವಿಚಾರ ವೇದಿಕೆಯ ಬಳಗದವರು ಪರಿಚಯವಾದರು. ಆಗ ಒಮ್ಮೆ ದೇವನೂರು ಮಹಾದೇವರವರ ಮನೆಗೆ ಕೃಷ್ಣಪ್ಪ ನನ್ನನ್ನು ಕರೆದುಕೊಂಡು ಹೋಗಿದ್ದರು. ದೇಮರವರ ಪತ್ನಿ ಸುಮಿತ್ರಾಬಾಯಿ, ಮಗಳು ಉಜ್ವಲಾ, ಸಣ್ಣ ಮಗು ಮಿತಾರೊಡನೆ ಬೆರೆತೆವು. ಬಿಡುವಿನ ಒಂದು ದಿನ ಹರವೆ–ಪುಷ್ಪ, ನಾನು – ಕೃಷ್ಣಪ್ಪ ಸೇರಿ ಎಲ್ಲಾ ಮಕ್ಕಳಿಗೂ ಕೆ.ಆರ್.ಎಸ್ ತೋರಿಸಿಕೊಂಡು ಬಂದೆವು.

ಕಾಲೇಜು ಗೆಳೆಯರ ಒತ್ತಾಯದ ಮೇರೆಗೆ ಕೃಷ್ಣಪ್ಪ, ಬಜಾಜ್ ಸ್ಕೂಟರ್‌ವೊಂದನ್ನು ಮಾಸಿಕ ಕಂತಿನ ಮೇಲೆ ಖರೀದಿಸಿದ್ದರು. ಅದೊಂದು ದಿನ ಜ್ಯೂನಿಯರ್ ಪಾಲಿಟೆಕ್ನಿಕ್ ಸಭಾಂಗಣದಲ್ಲಿ 'ಫತೇರ್ ಪಾಂಚಾಲಿ' ಫಿಲಂ ಷೋವನ್ನು ನಮ್ಮ ಬಳಗದವರದ್ದೇ ಆದ ಒಂದು ವೇದಿಕೆಯಿಂದ ತೋರಿಸುತ್ತಿದ್ದರು. ಕೃಷ್ಣಪ್ಪ ಕಾಲೇಜಿಂದ ಅಲ್ಲಿಗೆ ಸೀದಾ ಬರುವುದು, ನಾನು ಕಛೇರಿಯಿಂದ ಬರುವುದು, ಮಕ್ಕಳನ್ನು ಶಿವಮೂರ್ತಿಯು ಫಿಲಂ ಷೋ ಬಳಿ ಕರೆತರುವುದು ಎಂದು ನಿಗದಿ ಮಾಡಿಕೊಂಡಿದ್ದೆವು. ಎಲ್ಲರೂ ಸೇರಿ ಸಿನಿಮಾ ನೋಡಿ ಆಯಿತು. ಕೃಷ್ಣಪ್ಪ ನಮ್ಮನ್ನು ರಸ್ತೆ ಬದಿ ನಿಂತಿರಲು ಹೇಳಿ ಪಕ್ಕದಲ್ಲಿದ್ದ ಸ್ಕೂಟರ್ ತಂದರು. ಮಕ್ಕಳನ್ನು ಮುಂದೆ ಹತ್ತಿಸಿಕೊಂಡು, ನನ್ನನ್ನು ಹಿಂದೆ ಕುಳಿತುಕೊಳ್ಳಲು ಹೇಳಿದರು. ನಾನು ಹತ್ತಿದೆ ಸ್ಕೂಟರ್ ಚಾಲು ಮಾಡಿದರು.



**ಕೃಷ್ಣಪ್ಪ ಸಮಾರಂಭವೊಂದರಲ್ಲಿ ಚಿಂತಕ ದಿ. ಮುರಾರಿ ಬಲ್ಲಾಳರೊಂದಿಗೆ**

ಒಂದೆರಡು ಹೆಜ್ಜೆ ಹೋಗಿತ್ತೊ ಇಲ್ಲವೋ, ಬ್ಯಾಲೆನ್ಸ್ ತಪ್ಪಿ, ನಾವೆಲ್ಲರೂ ಬಿದ್ದೇಬಿಟ್ಟೆವು. ಅಕ್ಕಪಕ್ಕದವರು ಬಂದು ಎತ್ತಿದರು. ಮಕ್ಕಳಿಗೂ–ನನಗೂ ಏನೂ ಆಗಿರಲಿಲ್ಲ, ಅವರ ಕಾಲಿನ ಮೇಲೆ ಸ್ಕೂಟರ್ ಬಿದ್ದಿದ್ದರಿಂದ, ಅವರಿಗೆ ಕಾಲು ಊದಿಕೊಂಡಿತ್ತು. ನಡೆದೇ ಮನೆ ಸೇರಿದೆವು. ಹೀಗಿತ್ತು ನಮ್ಮ ಮೊದಲ ಸ್ಕೂಟರ್ ಸವಾರಿ. ಇಷ್ಟರಲ್ಲಾಗಲೇ ಕೆಲವರು "ಕೃಷ್ಣಪ್ಪ ಸ್ಕೂಟರ್ ತೆಗೆದುಕೊಂಡು ಅಭ್ಯಾಸ ಮಾಡ್ತಾ ಇದ್ದಾರೆ. ಹೋರಾಟಗಾರರಾದವರು ಹೀಗೆಲ್ಲಾ ಐಷಾರಾಮಕ್ಕೆ, ಆಸೆ ಬೀಳಬಾರದು. ಈವತ್ತು ಸ್ಕೂಟರ್, ನಾಳೆ ಕಾರು – ಹೋರಾಟ ಇನ್ನೆಲ್ಲಿಯದು"–ಅನ್ನೋ ಗುಲ್ಲು ಹಬ್ಬಿಸಿದ್ದರು. ಸ್ಕೂಟರ್‌ನಿಂದಾಗಿ ಹೋರಾಟದ ತೀವ್ರತೆ ಹೆಚ್ಚಿತೇ ವಿನಹ ಕಾವು ಕಡಿಮೆ ಆಗದ್ದನ್ನು ಮುಂದಿನ ದಿನಗಳಲ್ಲಿ ಅವರೇ ಕಂಡುಕೊಂಡರು.

ಇನ್ನೊಂದು ದಿನ, ಕೃಷ್ಣಪ್ಪ ಬೆಳಿಗ್ಗೆ ಒಂದು ಸಭೆಗೆ ಹೋಗಬೇಕಾದ್ದರಿಂದ, ನನ್ನನ್ನು ಕಛೇರಿಗೆ ಬಿಟ್ಟು ಹೋಗ್ತೇನೆ ಎಂದು ಸಿದ್ಧರಾದರು. ನನಗೋ ಎದೆಯಲ್ಲಿ ಢವಢವ. ಆದರೂ ಬೇಗ ಕಚೇರಿ ಸೇರಬಹುದೆಂಬ ಆಸೆಯಿಂದ ಹೊರಟೆ. ಸ್ಕೂಟರ್ ಭದ್ರಾನದಿ ಸೇತುವೆ ಮೇಲೆ ಹೋಗ್ತಾ ಇತ್ತು. ತರೀಕೆರೆ ರಸ್ತೆ ಕಡೆಯಿಂದ ಒಂದು ಲಾರಿ ಬಂತು. ಬಿಟ್ಟಕಣ್ಣು ಬಿಟ್ಟಂತೆ ಎದುರುಗಡೆಯ ವಾಹನಗಳನ್ನೇ ನೋಡುತ್ತಿದ್ದ ನನಗೆ, ಲಾರಿ ಸ್ಕೂಟರ್‌ಗೆ ಡಿಕ್ಕಿ ಹೊಡೆಯುತ್ತೆ ಅನ್ನಿಸಿ ಸ್ಕೂಟರ್‌ನಿಂದ ತಕ್ಷಣ ಧುಮುಕಿಬಿಟ್ಟೆ ಸ್ಕೂಟರ್ ಕೃಷ್ಣಪ್ಪ ಹಿಡಿತ ಮೀರಿ ಆಚೀಚೆ ಓಲಾಡಿ, ಸೇತುವೆ ಗೋಡೆಗೆ ಬಂದು ನಿಂತಿತು. ಭಯಮಿಶ್ರಿತಳಾದ ನನ್ನನ್ನು ಸೇರಿದ್ದ ಜನ ಸಂತೈಸಿ ಕಳುಹಿಸಿದರು. ಕೃಷ್ಣಪ್ಪ ಏನೂ ಮಾತನಾಡದೆ, ಮತ್ತೆ ಸ್ಕೂಟರ್ ಚಲಾಯಿಸಿದರು.

ಮತ್ತೊಂದು ದಿನ ನಮ್ಮ ತಾಲ್ಲೂಕು ಕಛೇರಿ ಪಕ್ಕದ ನಿರ್ಮಲಾ ಆಸ್ಪತ್ರೆಯಲ್ಲಿ ವೇದಾವತಿಗೆ ಹೆರಿಗೆ ಆಗಿತ್ತು. ನಾನು, ತಾಯಿ ಮಗುವಿಗೆ ಊಟ, ನೀರು, ಬಟ್ಟೆ ಇತ್ಯಾದಿಗಳನ್ನು ಬ್ಯಾಸ್ಕೆಟ್‌ನಲ್ಲಿ ಹೊತ್ತುಕೊಂಡೆ. ಇನ್ನೊಂದು ಕೈಲಿ ಕಛೇರಿ ಬ್ಯಾಗ್. ಊಟದ ಬ್ಯಾಗ್ ಕಾಲು ಮೇಲೆ ಇಟ್ಟುಕೊಂಡು ಸ್ಕೂಟರ್‌ನಲ್ಲಿ ಕುಳಿತಿದ್ದೆ. ಭದ್ರಾವತಿಯ ಬಿ.ಹೆಚ್. ರಸ್ತೆಯ ದಟ್ಟ ಜನಸಂದಣಿಯ ಪದ್ಮ ನಿಲಯದ ಎದುರಿಗೆ ಸ್ಕೂಟರ್ ಹೋಗ್ತಾ ಇತ್ತು. ಮುಂಭಾಗದಲ್ಲಿ ಏನಾಯ್ತೋ ಗೊತ್ತಿಲ್ಲ. ಸಂದಿ ರಸ್ತೆಯಿಂದ ಇನ್ನೊಂದು ಸ್ಕೂಟರ್ ಬಂತು. ನಮ್ಮ ಸ್ಕೂಟರ್ ಒಂದು ಕಡೆ ವಾಲಿತು. ನಾನು ಬ್ಯಾಗ್ ಸಮೇತ ಬಿದ್ದೆ .ಲೆಗ್ ಸ್ಟಾಂಡ್‌ಗೆ ನನ್ನ ಸೀರೆ ಸಿಕ್ಕಿ ಹಾಕಿಕೊಂಡಿತ್ತು. ನಾನು ಬಿದ್ದ ಸ್ಥಿತಿಯಲ್ಲೇ ಸ್ಕೂಟರ್ ನಿಲುಗಡೆಯಾಗುವವರೆಗೂ ನನ್ನನ್ನು ಎಳೆದುಕೊಂಡು ಹೋಗಿತ್ತು. ನಿಂತ ನಂತರ ನಡುಗುವ ಕೈಕಾಲುಗಳಿಂದ ಕುಂಟುತ್ತಾ, ಬೀದೀಲಿ ಬಿದ್ದಿದ್ದ

**(೯ನೇ ಪುಟಕ್ಕೆ**

# ನಿಮ್ಮ ಈಶಾನ್ಯದತ್ತ ಒಮ್ಮೆ ನೋಡಿ...

**–ಎಲ್.ಕೆ. ಪೂರ್ಣಿಮಾ**

**ಎರಡು ಸಂಚಿಕೆಗಳ ಹಿಂದೆ ಪೂರ್ಣಿಮಾ ಅವರು 'ಮ್ಯೂಸಿಯಂವೊಂದರ ಕಥೆ ವ್ಯಥೆ' ಶೀರ್ಷಿಕೆಯಲ್ಲಿ ಭೂಪಾಲದ ಮಾನವ ಸಂಗ್ರಹಾಲಯದಲ್ಲಿನ ತಮ್ಮ ಅನುಭವಗಳನ್ನು ಮುಂದಿಟ್ಟುಕೊಂಡು, ಈ ವಸ್ತು ಸಂಗ್ರಹಾಲಯದ ಕಲ್ಪನೆಯೇ ಹೇಗೆ ಒಂದು ವಸಾಹತುಶಾಹಿ ತತ್ವವಾಗಿದೆ ಎಂಬುದನ್ನು ನಿರೂಪಿಸಿದ್ದರು. ಅದರ ಮುಂದುವರಿದ ಭಾಗವಾದ ಈ ಲೇಖನದಲ್ಲಿ ಅವರು ನಮ್ಮ ಈಶಾನ್ಯ ರಾಜ್ಯಗಳನ್ನೂ ಒಂದು ವಸ್ತು ಸಂಗ್ರಹಾಲಯದಂತೆಯೇ ನಿರ್ವಹಿಸುತ್ತಾ ಬಂದಿರುವ ಚರಿತ್ರೆಯನ್ನು ಇಂದಿನ ಕಾಲಘಟ್ಟದವರೆಗೂ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಭಾರತ ಎಂದರೇನು? ಎಂಬ ಪ್ರಶ್ನೆ ಮತ್ತೆ ಮತ್ತೆ ಚರ್ಚೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಈ ಲೇಖನ ಅರ್ಥಪೂರ್ಣತೆಯನ್ನು ಗಳಿಸಿಕೊಳ್ಳುತ್ತದೆ,** –ಸಂಪಾದಕ



**ಯಾ**ರೀ ಜನರು, ಎಲ್ಲಿಂದಲೋ ಬಂದು ಯಕ್ಷಲೋಕದವರೇನೋ ಎನ್ನುವಂತೆ ಕಾಣಿಸಿಕೊಳ್ಳುವವರು? ಮುಖ್ಯ ಭೂಖಂಡದವರು ಇವರನ್ನು ಹೇಗೆ ಕಾಣುತ್ತಾರೆ?

ಬಿಹಾರ ಮತ್ತು ಪಶ್ಚಿಮ ಬಂಗಾಳದ ಜನರನ್ನು ಬಿಟ್ಟು – ಇತಿಹಾಸದುದ್ದಕ್ಕೂ ಈ ಎರಡೇ ರಾಜ್ಯಗಳು ಈಶಾನ್ಯ ಭಾಗದೊಟ್ಟಿಗೆ ಸಂಪರ್ಕವನ್ನು ಹೊಂದಿದ್ದವರು – ಬಾಕಿ ಉಳಿದ ಎಲ್ಲಾ ಮುಖ್ಯ ಭೂಖಂಡದವರಿಗೆ ಈಶಾನ್ಯ ಪ್ರದೇಶವು ಯಾವತ್ತೂ ಅಸ್ತಿತ್ವದಲ್ಲಿರಲಿಲ್ಲ. ಇದ್ದಿತ್ತಾದರೂ ಪಠ್ಯಪುಸ್ತಕಗಳಲ್ಲಿ ಎಲ್ಲೋ ಅಲ್ಪ ಸ್ವಲ್ಪ ಪ್ರಸ್ತಾಪವಾಗಿರುತ್ತಿದ್ದ ರೂಪದಲ್ಲಿ ಮಾತ್ರವೇ ಆಗಿತ್ತು. ೧೯೪೭ರ ಹೊತ್ತಿಗೂ ಅದರ ಭೌಗೋಳಿಕ ಸ್ಥಾನಮಾನದ ಬಗ್ಗೆ ಪ್ರಮುಖ ರಾಜಕೀಯ ಮುಖಂಡರಲ್ಲೂ ಅನೇಕರಿಗೆ ತಪ್ಪು ತಿಳುವಳಿಕೆಗಳಿದ್ದವು. ಇನ್ನು ಸಾಮಾನ್ಯ ಜನರಿಗೆ ಅದು ಅಸ್ತಿತ್ವದಲ್ಲಿದ್ದುದೇ ಮಂಗೋಲಿಯನ್ ಚಹರೆಯ ರಾತ್ರಿ ಪಹರೆಗೆ ಬರುವ ಗೂರ್ಖಾ ಎಂದು ಕರೆಸಿಕೊಳ್ಳುವ ಜನರ ಮುಖಾಂತರ, ಇದರ ಜೊತೆಗೆ ಸರ್ಕಾರದ ಸಾಂಸ್ಕೃತಿಕ ಕಾರ್ಯಕ್ರಮಗಳ ಋತುವಿನಲ್ಲಿ ಯಾವ ಲೋಕದವರಪ್ಪಾ ಇವರು ಎನ್ನುವಂತೆ ಬಂದಿಳಿದು ತಮ್ಮ ನೃತ್ಯಗಳಿಂದಲೂ, ಹಾಡುಗಳಿಂದಲೂ, ಬಿಲ್ವಿದ್ಯೆಗಳಿಂದಲೂ ಎಲ್ಲರ ಮನಸೂರೆ ಮಾಡಿ ಮತ್ತೆ ಕಣ್ಮರೆಯಾಗಿ ಹೋಗುತ್ತಿದ್ದ ಜನರ ಮುಖಾಂತರ. ಆದರೆ ಈಗ ಪ್ರತಿಯೊಂದೂ ಬದಲಾಗಿ ಹೋದಂತೆ ಕಾಣುತ್ತದೆ.

ಒಂದು ಸಣ್ಣ ಓಣಿಯಂತಿರುವ ನೆಲಭಾಗದಿಂದ ಮುಖ್ಯ ಭೂಖಂಡಕ್ಕೆ ಕೂಡಿಕೊಂಡಿರುವ, ಅದ್ಭುತವಾಗಿಯೂ, ಸಂಭ್ರಮಿಸುತ್ತಿರುವಂತೆಯೂ ಕಾಣಿಸುವ ಈ ಪ್ರದೇಶವು, ತನ್ನಾತ್ಮದಲ್ಲಾಗಿರುವ ಗಾಯವು ಬರುಬರುತ್ತಾ ಮತ್ತಷ್ಟು ಗಂಭೀರ ಸ್ವರೂಪದ್ದಾಗಿ ಹೋಗುತ್ತಿರುವಂತೆ ಕಾಣುವ ತನ್ನ ಚಿತ್ರಗಳನ್ನು ಹೆಚ್ಚೆಚ್ಚಿಗೆ ಹೊರಗೆಡವಲಾರಂಭಿಸಿದೆ. ಕಳೆದ ಒಂದೆರಡು ದಶಕಗಳಿಂದೀಚೆಗೆ ದಿನಪತ್ರಿಕೆಗಳಲ್ಲೂ, ಟಿವಿಗಳಲ್ಲೂ ನಾವು ಅವರನ್ನು ಮೇಲಿಂದ ಮೇಲೆ ಕಾಣುತ್ತಿದ್ದೇವೆ. ನಾನಿದನ್ನು ಬರೆಯುತ್ತಿದ್ದಂತೆಯೇ ಅಲ್ಲೇ ಟೇಬಲ್ಲಿನ ಮೇಲಿರುವ ೨೦೧೦ರ ಫೆಬ್ರವರಿ ೭ರ 'ಹಿಂದು' ಪತ್ರಿಕೆಯ ಮುಖಪುಟದಲ್ಲಿರುವ ಒಂದು ಸಣ್ಣ ವರದಿಯು ನನ್ನ ಕಣ್ಣಿಗೆ ಬಿತ್ತು– "ಅಸ್ಸಾಂನಲ್ಲಿ ಇಬ್ಬರು ಮಿಲಿಟಂಟ್ಸ್‌ಗಳ ಹತ್ಯೆ". ಇನ್ನು ಸ್ವಲ್ಪ ಮುಂದುವರೆದರೆ ಅದು ಹೇಳುತ್ತದೆ, ಈ ಹತರಾದ ಮಿಲಿಟಂಟ್ಸ್‌ಗಳಲ್ಲಿ ಒಬ್ಬನನ್ನು ULFAದ ೧೯ನೇ ಬೆಟಾಲಿಯನ್‌ಗೆ ಸೇರಿದ ಸಾರ್ಜಂಟ್ ದಿಲೀಪ್ ರಭಾ ಎಂದೂ ಮತ್ತು ಛಿರಾಂಗ್ ಜಿಲ್ಲೆಯ ಬಿಜ್ನಿಯಲ್ಲಿ ರಕ್ಷಣಾ ಪಡೆಗಳೊಟ್ಟಿಗಿನ ಮುಖಾಮುಖಿಯಲ್ಲಿ ಹತ್ಯೆಗೀಡಾದವನು, NDEF ಗೆ ಸೇರಿದವನೆಂದು ಗುರುತಿಸಲಾಗಿದೆ ಎಂದು.



ಈ ದಿನಗಳಲ್ಲಂತೂ ಎಲ್ಲ ಮೆಟ್ರೊಪಾಲಿಟನ್ ನಗರಗಳಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ನಾವಿವರನ್ನು ಕಾಣುತ್ತಿದ್ದೇವೆ– ಒಳ್ಳೇ ಶಿಕ್ಷಣವನ್ನು ಆರಿಸಿಬರುವ ವಿದ್ಯಾರ್ಥಿಗಳ ರೂಪದಲ್ಲಿಯೂ ಮತ್ತು ಕೆಲಸವನ್ನು ಹುಡುಕಿ ಬರುವ ವಲಸಿಗರ ರೂಪದಲ್ಲಿಯೂ. ಯಕ್ಷ ಲೋಕದವರ ಕುರುಹುಗಳೆಲ್ಲ ಮಾಸಿ ಬಸವಳಿದ ಮುಖ ಹೊತ್ತ ಇವರನ್ನು. ಹಿಂದೆ ತಿರುಗಿ ನೋಡಿದರೆ, ಮುಖ್ಯ ಭೂಖಂಡವು ಈ ಅಪೂರ್ವವೂ, ದುರ್ಗಮವೂ ಆದ ಭೂಮಿಯ ಜೊತೆ ಮಹಾಕಾವ್ಯಗಳ ಕಾಲದಲ್ಲಿ ಒಂದು ಸಣ್ಣ **ಮಧ್ಯಂತರದ ಕೊಂಡಿಯಲ್ಲಿ** ಬೆಸೆದುಕೊಂಡಿತ್ತು ಎಂದು ಕಾಣುತ್ತದೆ. ತನ್ನ ಅನೇಕ ಅಲೆದಾಟಗಳೊಂದರಲ್ಲಿ ಅರ್ಜುನನು ಒಬ್ಬ ನಾಗ ಮುಖಂಡನ ಮಗಳಾದ ಉಲೂಪಿಯನ್ನು ನಂತರ ಮಣಿಪುರದ ರಾಜಕುಮಾರಿಯೊಬ್ಬಳನ್ನು ಮದುವೆಯಾಗಿ ಅವರೀರ್ವರಿಂದಲೂ ಇರಾವಂತ್ ಮತ್ತು ಬಬ್ರುವಾಹನ ಎಂಬ ಪುತ್ರರನ್ನು ಪಡೆಯುತ್ತಾನೆ. ಬಬ್ರುವಾಹನನೊಟ್ಟಿಗೆ ಹೋರಾಡಬೇಕಾಗಿ ಬಂದ ಸಂದರ್ಭದಲ್ಲಿ ಹೀನಾಯವಾಗಿ ಹೊಡೆಸಿಕೊಂಡ ಅರ್ಜುನನನ್ನು ಉಲೂಪಿಯೇ ತನ್ನೆಲ್ಲ ಗಿಡಮೂಲಿಕೆಗಳ ಜ್ಞಾನದಿಂದ ಗುಣಪಡಿಸುತ್ತಾಳೆ.

ಮುಂದೆ ಮಧ್ಯಯುಗದವರೆಗೂ ನಮಗೆ ಈ ಪ್ರದೇಶವು ಕತ್ತಲೆಯಲ್ಲಿ ಇದ್ದಂತೆಯೇ ಇದೆ. ಮಹಾನ್ ರಾಜ ಅಹೋಮನ ಕಾಲದಲ್ಲಿ ಮತ್ತೆ ನಮಗೆ ೧೨ನೇ ಶತಮಾನದ ಇದರ ಇತಿಹಾಸವು ಓದಲು ಸಿಕ್ಕುತ್ತದೆ. ಈ ಭೂಮಿಯು ಮೊದಲು ಕಾಮರೂಪ ಎಂಬ ಹೆಸರಿನ ಅಸ್ಸಾಂ ಮತ್ತು ಇನ್ನೆರೆಡು ದೇಸೀ ರಾಜ್ಯಗಳಾದ ಮಣಿಪುರ ಮತ್ತು ತ್ರಿಪುರಾಗಳು ಸೇರಿ ಆದದ್ದೆಂದೂ ನಂತರ ಈ ಇಡೀ ಪ್ರದೇಶದಲ್ಲಿ ಹಸನಾಗಿ ಬೆಳೆದು ರೂಪುಗೊಂಡಿದ್ದ ಅನೇಕ ಬುಡಕಟ್ಟು ಜನಾಂಗಗಳಾದ ಮಿರಿ, ಭುಟಿಯಾ, ಕೋಚ್, ಕಛಾರಿ, ಮಿಕಿರ್, ಬೋರಾ ಇವರನ್ನೆಲ್ಲಾ ಬರ್ಮಾದಿಂದ ದಂಡೆತ್ತಿ ಬಂದ ರಾಜ ಅಹೋಮನು ಮಣಿಸಿ ಅಲ್ಲಿ ತನ್ನ ಬಲಿಷ್ಠ ರಾಜಪ್ರಭುತ್ವವನ್ನು ಸ್ಥಾಪಿಸುತ್ತಾನೆ ಎಂದೂ ನಾವು ಓದುತ್ತೇವೆ. ಮುಂದೆ ಬ್ರಿಟಿಷರ ಆಗಮನದ ಕಾಲದವರೆಗೂ ೬೦೦ ವರ್ಷಗಳ ಕಾಲ ಸತತವಾಗಿ ಅವನ ರಾಜಪ್ರಭುತ್ವವೇ ಆ ನೆಲದಲ್ಲಿ ಆಳ್ವಿಕೆ ನಡೆಸಿತ್ತು.

ಈ ಸಮಯದಲ್ಲಿ ಪರ್ವತಶ್ರೇಣಿಗಳಿಂದ ಸುತ್ತುವರೆದುಕೊಂಡಿರುವ ಸಮೃದ್ಧ ಬ್ರಹ್ಮಪುತ್ರ ಕಣಿವೆಯಲ್ಲಿ ಜೀವನವು ತನ್ನದೇ ಗತಿಯಲ್ಲಿ ಸಾಗುತ್ತಾ ಬಿಹಾರ, ಪ.ಬಂಗಾಳ ಮತ್ತು ಬರ್ಮಾದ ಮೂಲದಿಂದ ವಲಸೆ ಬಂದವರ ಪ್ರಭಾವಗಳಿಂದಾದ ಒಂದು ದೊಡ್ಡ ಮಂಥನಕ್ಕೆ ತನ್ನನ್ನೇ ತಾನು ಒಡ್ಡಿಕೊಂಡು, ಹಿಂದೂ ಮುಂಗೋಲಿಯನ್ ಜನರ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯಲ್ಲಿ ಅಸ್ಸಾಮೀ ಸಂಸ್ಕೃತಿಯು ಅರಳುವುದಕ್ಕೆ ಪ್ರಶಸ್ತವಾದ ಭೂಮಿಕೆಯಾಗಿತ್ತು. ಸುಂದರ ಸಂಸ್ಕೃತಿಯು ಅರಳುವುದಕ್ಕೆ ಇಲ್ಲಿ ಪ್ರಕೃತಿಯ ಕೊಡುಗೆ ಧಾರಾಳವಾಗಿತ್ತು ಎಂದು ಕಾಣುತ್ತದೆ. ಒಂದು ಬುಡಕಟ್ಟು ತನ್ನ ಬದುಕಿನ ಪ್ರತ್ಯೇಕತೆಯಲ್ಲಿ ಸುತ್ತಮುತ್ತಲಿನ ಪರಿಸರಕ್ಕೆ ತಾದ್ಯಾತ್ಮಕವಾದ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತಾ, ಕೆಲವೊಂದು ಮಿತಿಗಳಲ್ಲಿಯೂ ಒಂದು ಪರಿಪೂರ್ಣತೆಯ ಸ್ಥಿತಿಗೆ ತಲುಪಿಬಿಡುತ್ತದೆ. ಇಂಥ ಸ್ಥಿತಿಯನ್ನು

ತಲುಪಲು ಶತಮಾನಗಳೇ ಬೇಕಾಗಿರಬಹುದು.... ಮತ್ತು ಇಂಥ ಸ್ಥಿತಿಗೆ ಧಕ್ಕೆಯೇನಾದರೂ ಆದಲ್ಲಿ ಅದು ಆ ಬುಡಕಟ್ಟಿನ ವಿನಾಶಕ್ಕೂ ದಾರಿ ಮಾಡಿಕೊಡಬಹುದು.

ಸ್ಪಷ್ಟವಾಗಿಯೇ ಅಂಥ ಒಂದು ವಿನಾಶದ ಮೊದಲನೇ ಘಟ್ಟವು ಬ್ರಿಟಿಷರು ಈ ನೆಲಕ್ಕೆ ಕಾಲಿಟ್ಟಾಗಿನಿಂದ ಶುರುವಾಗಿತ್ತು ಮತ್ತು ಅವರು ನಿರ್ಗಮಿಸಿ ಏಳು ದಶಕಗಳೇ ಕಳೆದರೂ ಯಾವ ಬದಲಾವಣೆಯೂ ಇಲ್ಲದೇ ಅದು ಮುಂದುವರಿದೇ ಇದೆ. ಮುಖ್ಯ ಭೂಖಂಡವನ್ನೆಲ್ಲಾ ಆಕ್ರಮಿಸಿಕೊಂಡ ಮೇಲೆ ಬ್ರಿಟಿಷರು ಬರ್ಮಾದವರೊಂದಿಗೆ ೧೮೨೬ರಲ್ಲಿ ಮಾಡಿಕೊಂಡ 'ಯಾಂಡುಬಾ ಒಪ್ಪಂದ'ದಲ್ಲಿ ಈ ಪೂರ್ವ ಪ್ರದೇಶವನ್ನು ತಮ್ಮ ಸಾಮ್ರಾಜ್ಯದ ತೆಕ್ಕೆಗೆ ಸೇರಿಸಿಕೊಳ್ಳುತ್ತಾರೆ.

ಪ್ರಾಚೀನ ಬುಡಕಟ್ಟು ಸಮುದಾಯಗಳಲ್ಲಿ 'ನಾವು' ಎಂಬ ಅಂಶವೇ ಬಲವಾಗಿದ್ದು 'ನಾನು' ಎನ್ನುವುದು ಗೌಣವಾಗಿರುತ್ತದೆ. ಹಾಗೇ ಕೆಲವು ಭಾಷೆಗಳಲ್ಲಿ 'ನಾನು' ಎಂಬ ಪದವೇ ಇಲ್ಲವೆಂದು ಹೇಳಲಾಗಿದೆ. ಜೀವನವು ಸಂಪೂರ್ಣವಾಗಿ ಜನಸಮುದಾಯ ಕೇಂದ್ರಿತವಾಗಿರುವಾಗ 'ನಾವು' ಎಂಬ ಭಾಷೆಯಲ್ಲೇ ಸಂವಹನವು ಬೆಳೆದು ಬಂದಿರುತ್ತದೆ. ಸುತ್ತಮುತ್ತಲಿನ ಪ್ರಕೃತಿಯ ಒಡಲಿನಲ್ಲಿ ಈ 'ನಾವು' ಎಂಬ ಪ್ರಪಂಚವು ಹಸನಾಗಿ ರೂಪುಗೊಂಡು ಅದರಾಚೆಗಿನ ಯಾವುದೂ ಮುಖ್ಯವಾಗುವುದೂ ಇಲ್ಲ, ಆಕರ್ಷಣೀಯವಾಗಿಯೂ ಇರುವುದಿಲ್ಲ. ಹೀಗಿದ್ದಾಗ ಆದಿವಾಸಿಗಳ ಈ ಮನಃಸ್ಥಿತಿಗೆ ವ್ಯಾಪಾರಿ ಆಸಕ್ತಿಗಳಿಂದ ಒಳಬಂದು ಸಾಮ್ರಾಜ್ಯ ಕಟ್ಟಲು ಹೊರಟ ಜನರ ನಿರ್ದಯವಾದ ಮನಃಸ್ಥಿತಿಯು ಮುಖಾಮುಖಿಯಾಗಬೇಕಾದ ವಿಧಿಯು ಹಠಾತ್ತಾಗಿ ಎದುರು ಬಂದಿತ್ತು.

ಬಲಿಷ್ಠವಾದ ಮತ್ತು ಕುಟಿಲೋಪಾಯದ ಅತಿಕ್ರಮಗಳೊಟ್ಟಿಗೆ ಮುಖಾಮುಖಿಯಾಗಬೇಕಾದ ಈ ಸರಳ ಆದಿವಾಸಿ ಮನಸ್ಸಿಗೆ ಯಾವ ರೀತಿ ಧಕ್ಕೆಯಾಗಿರಬಹುದೆಂದು ಊಹಿಸಲೂ ಅಸಾಧ್ಯವಾದ ಸಂಗತಿ. ಹಲವಾರು ಸಾಂಸ್ಕೃತಿಕ ತೊರೆಗಳ ಸಂಗಮಕ್ಕೆ ನೆಲವಾಗಿದ್ದ ಈ ಪ್ರದೇಶದಲ್ಲಿ ಹಲವಾರು ಬುಡಕಟ್ಟುಗಳು ತಮ್ಮದೇ ವಿಶಿಷ್ಟ ಜೀವನದ ರೀತಿ ನೀತಿಗಳಲ್ಲಿ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುತ್ತಲೇ ಸಹಬಾಳ್ವೆಯನ್ನು ನಡೆಸುತ್ತಿದ್ದರು. ಇಂಥಾ ನೆಲದಲ್ಲಿ ಒಮ್ಮೆ ಅಧಿಕಾರವನ್ನು ಕೈಗೆತ್ತಿಕೊಂಡ ಬ್ರಿಟಿಷರು ಗುಡ್ಡಗಾಡು ಪ್ರದೇಶವನ್ನು ಇತರೆ ಎಲ್ಲಾ ಭಾಗಗಳಿಂದ ಪ್ರತ್ಯೇಕವಾಗೇ ಇರಿಸುವಂತೆ ಅನೇಕ ನೀತಿಗಳನ್ನು ಹುಟ್ಟುಹಾಕಿದರು. ೧೯೩೫ರ 'ದಿ ಗೌವರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟ್' ಎಂಬುದು ಪ್ರತ್ಯೇಕವಾಗಿರುವ ಮತ್ತು ಅರೆ ಪ್ರತ್ಯೇಕವಾಗಿರುವ ಪ್ರದೇಶಗಳ ಗಡಿ ಎಲ್ಲೆಗಳನ್ನು ಗುರುತು ಮಾಡಿ ಅವುಗಳನ್ನು ಹದ್ದುಬಸ್ತಿನಲ್ಲಿಡಲು ಒಂದು ರಚನೆಯನ್ನು ಜಾರಿಗೊಳಿಸಿತು. ಬಯಲುನಾಡಿನ ಮತ್ತು ಗುಡ್ಡಗಾಡು ಜನರ ನಡುವಿನ ಎಲ್ಲ ಸಂಪರ್ಕಗಳನ್ನು ಕಡಿದು ಹಾಕುವಂಥ 'ಇನ್ನರ್ ಲೈನ್' ಎಂಬಂಥ ರಚನೆಗಳನ್ನು ಜಾರಿಗೆ ತಂದಿತು. ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಯ್ದಿರಿಸಿಕೊಳ್ಳುವ ಸಲುವಾಗಿಯೇ ಇವುಗಳನ್ನು ಹುಟ್ಟುಹಾಕಿರುವುದು ಸ್ಪಷ್ಟವಾಗಿದ್ದರೂ ಈ ತಂತ್ರವು ಗುಡ್ಡಗಾಡು ಜನ ಮತ್ತು ಉಳಿದವರ ನಡುವೆ ಒಂದು ಅಭೇದ್ಯವಾದ ತಡೆಗೋಡೆಯಾಗಿ ಬೆಳೆದು ನಿಂತಿತು.

ಅಷ್ಟೊತ್ತಿಗಾಗಲೇ ಧರ್ಮಪ್ರಚಾರಕರು ಈ ಪ್ರಾಂತ್ಯದ ಮೂಲೆಮೂಲೆಗೂ ನುಸುಳಿ ಉಂಟುಮಾಡಿದ ಒಳದಾರಿಯಲ್ಲಿ ಸಾಮ್ರಾಜ್ಯದ ವಾಣಿಜ್ಯಾಸಕ್ತಿಯೂ ಒಳನುಗ್ಗಿ ಇಡೀ ಪ್ರದೇಶದ ಸಂಪನ್ಮೂಲಗಳ ಮೇಲೆ ತಮ್ಮ ಏಕಸ್ವಾಮ್ಯವನ್ನು ಸಾಧಿಸಿತು. ಚಹಾ, ಎಣ್ಣೆ ಮತ್ತು ಕಲ್ಲಿದ್ದಲು ಉದ್ದಿಮೆಗಳನ್ನು ಪೂರ್ತಿ ತನ್ನದಾಗಿಸಿಕೊಂಡಿತು.ಸುತ್ತಮುತ್ತಲಿನ ದುರ್ಗಮವಾದ ಬೆಟ್ಟ ಪ್ರದೇಶಗಳಲ್ಲಿಯೂ ಸಹ ಇದೇ ಕಾಲದಲ್ಲಿ ಜೀವನವು ಒಂದು ಪರಿಪೂರ್ಣತೆಯ ಹಂತಕ್ಕೆ ತಲುಪಿದ್ದಂತೆಯೇ ಕಾಣುತ್ತದೆ. ಈ ಜನರ ಜೀವನದ ಪ್ರತಿಯೊಂದು ರೀತಿ ನೀತಿಗಳಲ್ಲಿಯೂ ತನ್ನ ವಿಶಿಷ್ಟ ಛಾಪನ್ನು ಮೂಡಿಸಿರುವ ಈ ನದಿ ಸಂಪರ್ಕ ಸಾಧನಗಳನ್ನು ತನ್ನ ಹಿಡಿತಕ್ಕೆ ತಂದುಕೊಂಡಿತು. ಜೊತೆಗೆ ರೈಲ್ವೆಯನ್ನು ನಿರ್ಮಿಸಿ ಇಡೀ ಪ್ರದೇಶದ ಸಂಪನ್ಮೂಲಗಳನ್ನು ದೋಚಿಕೊಳ್ಳಲು ವ್ಯವಸ್ಥಿತವಾದ ಜಾಲವನ್ನು ರೂಪಿಸಿಕೊಂಡಿತು.



ಗುಡ್ಡಗಾಡು ಜನರನ್ನು ಇತರರಿಂದ ಪ್ರತ್ಯೇಕವಾಗಿಯೇ ಇಡಬೇಕೆಂದು ರೂಪಿಸಿದ ಆಳುವವರ ಎಲ್ಲ ನೀತಿಗಳ ಹೊರತಾಗಿಯೂ ಈ ದುರ್ಗಮ ಪ್ರದೇಶದ ಅಲ್ಲಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹಬ್ಬಿಕೊಂಡಿತ್ತು. ಇದು ನಾಗಾ ಗುಡ್ಡಗಾಡಿನ ದಟ್ಟ ಕಾಡುಗಳಲ್ಲಿ ರಾಣಿ ಗೈಡಿಲು ಹಮ್ಮಿಕೊಂಡಿದ್ದಂತಹ ಬ್ರಿಟಿಷ್ ವಿರೋಧಿ ಚಳುವಳಿಯಿಂದ ಸಾಬೀತಾಗುತ್ತದೆ. ಈಶಾನ್ಯ ಪ್ರದೇಶದ ಭೌಗೋಳಿಕ–ರಾಜಕೀಯ ಪ್ರಾಮುಖ್ಯತೆಯು ಬ್ರಿಟಿಷರಿಗೆ ಚೆನ್ನಾಗಿಯೇ ಮನವರಿಕೆಯಾಗಿತ್ತು. ಅಧಿಕಾರ ಹಸ್ತಾಂತರದ ಕಾಲವು ಸನ್ನಿಹಿತವಾಗಿದ್ದಾಗಲೂ ಈ ಪ್ರದೇಶವನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂಬ ಸಂಚಿನ ಭಾಗವಾಗಿಯೇ ಪ್ರಖ್ಯಾತ 'ಕೋಪ್ಲಾಂಡ್ ಪ್ಲಾನ್'ನ ಅಡಿಯಲ್ಲಿ ಬರ್ಮಾದ ತುಣುಕೊಂದನ್ನು ಸೇರಿಸಿಕೊಂಡು ಪ್ರತ್ಯೇಕ ಮತ್ತು ಅರೆ ಪ್ರತ್ಯೇಕ ಸ್ಥಳಗಳನ್ನು ಒಳಗೊಂಡ ಒಂದು ಕಾಪು ವಲಯವನ್ನು ಸೃಷ್ಟಿಸಲು ಪ್ರಯತ್ನಿಸಿದರು.

ಈ ಪ್ರಾಂತ್ಯದ ಎಲ್ಲಾ ಬುಡಕಟ್ಟು ಜನಸಮುದಾಯಗಳ ಸಹಬಾಳ್ವೆಗೆ ಪರಕೀಯರ ಆಡಳಿತವು ಉಂಟು ಮಾಡಿದ ಹಾನಿಯ ಅರಿವಿದ್ದೇ ಭಾರತ ಸರ್ಕಾರವು ಈ ಬಹುಭಾಷೀಯ ಜನರ ನಡುವೆ ಒಂದು ಪರಸ್ಪರ ಹೊಂದಾಣಿಕೆಯ ಅಂಶವನ್ನು ಪ್ರೋತ್ಸಾಹಿಸುವ ಅಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತಹ ದೂರದೃಷ್ಟಿಯಲ್ಲಿ ಹೊರಟಿದ್ದೇನೋ ನಿಜವೇ. ಆದರೆ ಬ್ರಿಟಿಷರು ತುಳಿದ ಹಾದಿಯಲ್ಲೇ ಮುಂದುವರೆದು ಈ ನೆಲದ ಸಂಪತ್ತನ್ನೆಲ್ಲಾ ದೋಚಿಕೊಳ್ಳುತ್ತಲೇ ಅದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದುದೇ ಇಲ್ಲಿಯ ಸಮಸ್ಯೆಯು ಬಗೆಹರಿಸಲಾಗದಷ್ಟು ಅಗಾಧವಾಗಿ ಬೆಳೆದು ನಿಲ್ಲಲು ಮುಖ್ಯ ಕಾರಣವಾಗಿದೆ.

ಇದಕ್ಕೆ ಕೆಲವು ಉದಾಹರಣೆಗಳು – ಸಾರ್ವಜನಿಕ ಕ್ಷೇತ್ರದಲ್ಲಿ ಒಂದು ಕಚ್ಚಾ ತೈಲ ಸಂಸ್ಕರಣ ಘಟಕವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಲು ಈ ಪ್ರಾಂತ್ಯದ ಜನರು ೧೯೫೭ರಲ್ಲಿ ಕೈಗೆತ್ತಿಕೊಂಡ ಬೃಹತ್ ಚಳುವಳಿ. ಅಸ್ಸಾಮಿನಲ್ಲೇ ಮೊದಲನೇ ತೈಲ ನಿಕ್ಷೇಪವನ್ನು ಕಂಡು ಹಿಡಿದಿದ್ದು, ಡಿಗ್ಬೋಯಿ ಎಂಬಲ್ಲಿ ಬ್ರಿಟಿಷ್ ಕಂಪನಿಯೊಂದು ರಿಫೈನರಿ ಒಂದನ್ನು ಸ್ಥಾಪಿಸಿತು. ಇದನ್ನು ಯಶಸ್ವಿಯಾಗಿ ಉಪಯೋಗಿಸಿಕೊಂಡ ನಂತರ ೧೯೬೨ ರಲ್ಲಿ ನಹರ್‌ಕೋಟಿಯಾ ಎಂಬಲ್ಲಿ ಇನ್ನೊಂದು ರಿಫೈನರಿಯನ್ನು ಸ್ಥಾಪಿಸಿಕೊಂಡು, ಅಪ್ಪರ್ ಅಸ್ಸಾಮಿನಲ್ಲಿ ಮತ್ತಷ್ಟು ತೈಲ ನಿಕ್ಷೇಪಗಳನ್ನು ಶೋಧಿಸಲಾಗಿತ್ತು. ಹೀಗಿದ್ದರೂ, ಜನರ ಸತತ ಪ್ರಯತ್ನದ ಹೊರತಾಗಿಯೂ ಸಾರ್ವಜನಿಕ ವಲಯದಲ್ಲಿ ಒಂದೂ ರಿಫೈನರಿ ಸ್ಥಾಪಿತವಾಗಿರಲಿಲ್ಲ. ಕೊನೆಗೂ, ಗೌಹಾಟಿ ರಿಫೈನರಿಯನ್ನು ಸ್ಥಾಪಿಸಬೇಕಾದರೆ ಜನರು ಒಂದು ದೊಡ್ಡ ಚಳುವಳಿಯನ್ನೇ ಹೂಡಬೇಕಾಗಿ ಬಂದಿತ್ತು.

ಅಸ್ಸಾಮಿನ ಚಹವು ಪ್ರಪಂಚದ ಚಹಾ ಉದ್ದಿಮೆಯ ಮ್ಯಾಪಿನಲ್ಲಿ ಒಂದು ಪ್ರತಿಷ್ಠಿತ ಸ್ಥಾನವನ್ನು ಪಡೆದಿದೆ. ಚಹಾ ರಫ್ತಿನಿಂದ ಭಾರತ ಸರಕಾರವು ಗಣನೀಯವಾದ ಫಾರಿನ್ ಎಕ್ಸಚೇಂಜನ್ನು ಪಡೆಯುತ್ತಿದ್ದರೂ ಆ ಪ್ರದೇಶದ ಸಾಮಾನ್ಯ ಜನರಿಗದು ಕೈಗೆಟುಕದ ಸಂಪತ್ತಾಗಿದೆ. ಜ್ಯೂಟ್ ಇನ್ನೊಂದು ಕೃಷಿ ಉತ್ಪನ್ನ. ಎಷ್ಟೋ ಕಾಲದಿಂದಲೂ ಸಮಗ್ರ ಅಸ್ಸಾಮಿನ ಭಾಗವೇ ಆಗಿದ್ದ ಈ ದೇಶದ ಒಟ್ಟು ಉತ್ಪಾದನೆಯಲ್ಲಿ ಅಸ್ಸಾಮಿನದೇ ಬಹುದೊಡ್ಡ ಪಾತ್ರ. ಆದರೆ ಈ ವಲಯವನ್ನು ಅಭಿವೃದ್ಧಿ ಪಡಿಸುವ ಮತ್ತು ಇನ್ನಷ್ಟು ಜ್ಯೂಟ್ ಮಿಲ್‌ಗಳಿಗಾಗಿ ಇರುವ ಬೇಡಿಕೆಯು ಬೇಡಿಕೆಯಾಗಿಯೇ ಉಳಿದಿದೆ.

ಇನ್ನು ಈ ಪ್ರಾಂತ್ಯದ ಪ್ರತಿ ಹೆಣ್ಣುಮಗಳೂ ಒಬ್ಬ ನುರಿತ ನೇಕಾರಳು ಎಂದೇ ಆಗಿರುವಾಗ ಕೈಮಗ್ಗ ವಲಯದಲ್ಲಿ ಈ ಪ್ರಾಂತ್ಯದ ಕೊಡುಗೆಯೇನು ಎಂದು ವಿಶೇಷವಾಗಿ ಹೇಳಬೇಕಾಗಿಲ್ಲ. ಮಾನವ ಸಂಗ್ರಹಾಲಯಕ್ಕೆ ಪ್ರತಿನಿಧಿಗಳಾಗಿ ಬಂದಿದ್ದ ಬಹುಮಟ್ಟಿಗಿನ ನೇಕಾರರು ಒಂದೋ ಆ ವೃತ್ತಿಯನ್ನು ಬಿಟ್ಟು ಬಹಳ ಹಿಂದೆಯೇ ಬೇರೆ ವೃತ್ತಿಯನ್ನು ಆಯ್ದುಕೊಂಡವರು ಇಲ್ಲವೇ ಬೇರೆ ವೃತ್ತಿಯ ನಿರೀಕ್ಷೆಯಲ್ಲಿದ್ದವರೇ ಆಗಿದ್ದರು ಎಂದರೆ, ಈ ವಲಯದಲ್ಲಿರುವ ಸಮಸ್ಯೆಯು ಎಷ್ಟು ಆಳವಾದದ್ದು ಎಂದು ಅರಿವಾಗುತ್ತದೆ.

ಭಾರತವು ಸ್ವತಂತ್ರ ಗಳಿಸಿಕೊಂಡ ತತ್‌ಕ್ಷಣವೇ ಈ ಬುಡಕಟ್ಟು ಪ್ರದೇಶದಲ್ಲಿ ರಾಜಕೀಯ ಪರಿಸ್ಥಿತಿಯು ಇದ್ದಕ್ಕಿದ್ದಂತೆಯೇ ಬದಲಾಗಿ ಹೋಯಿತು. ಬ್ರಿಟಿಷ್ ಸಾಮ್ರಾಜ್ಯದಿಂದ ಬಿಡುಗಡೆಗಾಗಿನ ಹೋರಾಟವು ಕಣಿವೆ ಪ್ರದೇಶಕ್ಕೆ ಸೀಮಿತವಾಗಿದ್ದರೂ, ಸ್ವತಂತ್ರದ ಮರುಕ್ಷಣವೇ ಪ್ರತಿಯೊಂದು ಬುಡಕಟ್ಟಿನವರಲ್ಲೂ ಎಚ್ಚೆತ್ತ ರಾಜಕೀಯ ಪ್ರಜ್ಞೆಯು ಕೇವಲ ದೇಶದಿಂದ ಮಾತ್ರವೇ ಅಲ್ಲದೇ ನೆರೆಹೊರೆಯ ಬುಡಕಟ್ಟು ಸಮುದಾಯದವರಿಂದಲೂ ಸಹ ಪ್ರತ್ಯೇಕವಾಗಬೇಕೆಂಬ ಮನೋಭಾವವನ್ನು ತುಂಬಿಸಿಬಿಟ್ಟಿತ್ತು. ನಾಗಾಗಳ ಚಳುವಳಿಯ ನಂತರ ಈ ಪ್ರತ್ಯೇಕತಾ ಮನೋಭಾವವು ಇತರೆ ಜಿಲ್ಲೆಗಳಿಗೂ ಹಬ್ಬಿತ್ತು. ಮತ್ತು ಇದೆಲ್ಲವೂ ಶತಮಾನಗಳಿಂದಲೂ ಸಮಗ್ರ ಅಸ್ಸಾಂನ ಭಾಗವೇ ಆಗಿದ್ದುಕೊಂಡು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕೊಡು–ಕೊಳ್ಳುವಿಕೆಯಲ್ಲಿ ಪರಸ್ಪರ ಹೊಂದಾಣಿಕೆಯಿಂದ ಬದುಕು ಕಟ್ಟಿಕೊಂಡು ಬಂದಿದ್ದ ಗುಂಪುಗಳೇ ಆಗಿದ್ದವು. ಯಾವ ಮತಧರ್ಮ ಪ್ರಚಾರಕರ ಸಂಚಿಗೂ ಒಳಗಾಗದಿದ್ದ ಅರುಣಾಚಲ ಪ್ರದೇಶವೂ ಪ್ರತ್ಯೇಕತೆಯನ್ನು ಬಯಸತೊಡಗಿತು.

ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲೆಂದೇ ಭಾರತ ಸರಕಾರವು ಈ ಗುಡ್ಡಗಾಡು ಜಿಲ್ಲೆಗಳಿಗೆ ಜಿಲ್ಲಾ ಮಟ್ಟದ ಸ್ವಯಂ ಆಡಳಿತವನ್ನು ಘೋಷಿಸಿತು. ಆದರೆ ಅಸಮಾಧಾನವು ಬೆಳೆಯುತ್ತಲೇ ಹೋಗಿ, ನಾಗಾಗಳು ೬ನೇ ಶೆಡ್ಯೂಲ್‌ನ ಡಿಸ್ಟ್ರಿಕ್ಟ್ ಕೌನ್ಸಲ್ ರಚನೆಗಳನ್ನು ನಿರಾಕರಿಸಿದರು. ಅಂತಿಮವಾಗಿ ಇದು ಇಡೀ ಈಶಾನ್ಯ ಪ್ರದೇಶದ ಪುನರ್ ರಚನೆಗೆ ಎಡೆ ಮಾಡಿಕೊಟ್ಟು ನಾಗಾಲ್ಯಾಂಡ್ ಮತ್ತು ಮೇಘಾಲಯಗಳು ಪ್ರತ್ಯೇಕ ರಾಜ್ಯಗಳೇ ಎಂದಾದವು. ಮಿಜೋರಾಂ ಮತ್ತು ಅರುಣಾಚಲ ಪ್ರದೇಶಗಳು ಯೂನಿಯನ್ ಟೆರಿಟರಿ ಸ್ಥಾನಗಳನ್ನು ಗಿಟ್ಟಿಸಿಕೊಂಡವು.

ಎಷ್ಟೋ ಕಾಲದಿಂದಲೂ ಸಮಗ್ರ ಅಸ್ಸಾಮಿನ ಭಾಗವೇ ಆಗಿದ್ದ ಈ ಪ್ರದೇಶಗಳನ್ನು ಈ ರೀತಿಯಾಗಿ ಒಡೆಯುವುದು ಅನಿವಾರ್ಯವೆಂದೆನ್ನಿಸಿದ್ದರೂ ಅದು ಉಲ್ಬಣಿಸಿದ ಸಮಸ್ಯೆಗೆ ಪರಿಹಾರವೇನೂ ಆಗಿರಲಿಲ್ಲ. ಭಾರತದಿಂದ ಎಲ್ಲಾ ಕೊಂಡಿಗಳನ್ನು ಕಳಚಿಕೊಳ್ಳುವುದರಿಂದ ಹಿಡಿದು ಸಾಮ್ಯತೆಗಳಿರುವ ಪ್ರತಿ ಗುಂಪುಗಳಿಗೂ ಬೇರೆ ಬೇರೆ ಆಡಳಿತ ಚೌಕಟ್ಟಿನ ರಚನೆಯಾಗಬೇಕೆನ್ನುವುದರ ತನಕ ಈ ಜನರ ರಾಜಕೀಯ ಆಸಕ್ತಿಗಳು ಬೆಳೆಯತೊಡಗಿದವು.

ಬ್ರಿಟಿಷರ ನಿರ್ಗಮನದ ನಂತರ ಈ ಸಂಕೀರ್ಣವಾದ ದೇಶವನ್ನು ಮುನ್ನಡೆಸುವ ಜವಾಬ್ದಾರಿಯ ನೊಗವನ್ನು ಹೊರುವುದು ಅತ್ಯಂತ ಕಷ್ಟಕರವಾದದ್ದು ಎಂದು ಅರ್ಥ ಮಾಡಿಕೊಳ್ಳಬಹುದಾದರೂ ಈ ದೂರದ ನೆಲದ ಮೇಲಿನ ಮುಂದುವರೆದ ನಿರ್ಲಕ್ಷತೆ ಮತ್ತು ಮಲತಾಯಿ ಧೋರಣೆಯೇ – ಅದು ಆ ನೆಲದ ಸಂಪನ್ಮೂಲಗಳ ಉಪಯೋಗವನ್ನು ಮಾಡಿಕೊಳ್ಳುತ್ತಲೇ – ಈ ಜನರ ಮನಸ್ಸಿಗಾದ ಗಾಯವು ಮತ್ತು ಅಸಮಾಧಾನವು ಮತ್ತಷ್ಟು ಗಂಭೀರ ಸ್ವರೂಪಕ್ಕೆ ತಲುಪುವಂತೆ ಮಾಡಿತ್ತು.

ಇದುವರೆಗೂ ಸ್ವಾವಲಂಬಿ ಆರ್ಥಿಕ ಚೌಕಟ್ಟಿನೊಳಗೆ ಬದುಕಿಕೊಂಡು ಇದ್ದ ಈ ಜನಾಂಗಗಳ ಮೇಲೆ ಆತುರಾತುರವಾಗಿ ಮತ್ತು ಸರಿಯಾದ ರೂಪು–ರೇಷೆಗಳಿಲ್ಲದೇ ಹೇರಿದ್ದ ಹಣ–ಆಧಾರಿತ ಆರ್ಥಿಕ ಚಟುವಟಿಕೆಗಳು ಅವರನ್ನು ಒಮ್ಮೆಗೆ ಗೊಂದಲದ ವಾತಾವರಣಕ್ಕೆ ತಳ್ಳಿಬಿಟ್ಟಿತ್ತು. ಮತ್ತು ಇದೆಲ್ಲವೂ ಪ್ರತಿ ಬುಡಕಟ್ಟಿನ ನಡುವಿನ ಅಂತರ್ ಕಲಹದ ರೂಪದಲ್ಲಿ ಹೊರಹೊಮ್ಮಿ ಪರಿಸ್ಥಿತಿ ಕೈ ಮೀರಿದಂತಹ ಹಿಂಸಾಚಾರದವರೆಗೂ ತಂದು ನಿಲ್ಲಿಸಿಬಿಟ್ಟಿದೆ.



ಗುಡ್ಡಗಾಡುಗಳಲ್ಲಿ ವಾಸಿಸುವ ಬುಡಕಟ್ಟು ಜನರು ಎರಡು ಗುಂಪುಗಳಾಗಿ ಒಡೆದು ಹೋದರು. ತಮ್ಮನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿ ಮಾಡಲಾಗಿದೆಯಾದ್ದರಿಂದ ತಾಯ್ನಾಡಿನೊಟ್ಟಿಗೆ ಸಂಪೂರ್ಣವಾದ ಪ್ರತ್ಯೇಕತೆಯನ್ನು ತಾವು ಬಯಸುತ್ತಿದ್ದೇವೆಂದು ಮೊದಲನೇ ಗುಂಪು ಪ್ರತಿಪಾದಿಸಿದರೆ ಎರಡನೆಯ ಗುಂಪು ಭಾರತದ ನೆಲದೊಂದಿಗೆ ಬೆಳೆಯಬೇಕೆಂಬ ಆಸೆಯನ್ನೇ ಹೊಂದಿದ್ದು, ತಮ್ಮ ಎಲ್ಲಾ ಸಂಪನ್ಮೂಲಗಳನ್ನು ಸಾರಾಸಗಟಾಗಿ ಒಪ್ಪಿಸಿಕೊಳ್ಳುವ ರೂಪದಲ್ಲಲ್ಲದೇ ಪರಸ್ಪರ ಹೊಂದಾಣಿಕೆಯ ಕೊಡು ಕೊಳ್ಳುವಿಕೆಯ ರೂಪದಲ್ಲಿ ಎಂದು ವಾದಿಸುತ್ತದೆ. ಬುಡಕಟ್ಟುಗಳ ನಡುವಿನ ಅಂತರ್ ಕಲಹವು ಈಗ ಪ್ರತ್ಯೇಕ ಖಾಸೀ – ಜೇಂತಿಯಾ ರಾಜ್ಯಕ್ಕಾಗಿ ಹೊಸ ಕೂಗನ್ನು ಎಬ್ಬಿಸಿದೆ. ಕೆಲವೇ ದಶಕಗಳ ಹಿಂದೆ ತಾವೆಲ್ಲರೂ ಒಂದೇ ಎಂಬಂತೆ ಬದುಕಿ ಬಂದಿದ್ದ ಇವರಲ್ಲಿ ಈಗ ಪರಸ್ಪರ ದ್ವೇಷವು, ಅನುಮಾನಗಳು ಹುಟ್ಟಿಕೊಂಡು ಪ್ರತಿಯೊಂದೂ ಗುಂಪು ಇನ್ನೊಂದು ಗುಂಪಿನಿಂದ ಪ್ರತ್ಯೇಕತೆಯನ್ನು ಬಯಸುತ್ತಿದೆ.

ಬ್ರಿಟಿಷರ ಅಡಿಯಲ್ಲಿ ಈ ಜನರಿಗಾದ ಅನುಭವವು ಮತ್ತು ಈ ಜನರ ವಿಶೇಷವಾದ ಗುಣ ಲಕ್ಷಣಗಳನ್ನು ಗಮನಕ್ಕೆ ತಂದುಕೊಳ್ಳದೇ ಆತುರಾತುರವಾಗಿಯೂ ಮತ್ತು ಅನಿರ್ಬಂಧಿತವಾಗಿ ಹೇರಲಾಗಿರುವ ಚಟುವಟಿಕೆಗಳಿಂದ ಈ ಜನರ ಸಾಮಾಜಿಕ ಚೌಕಟ್ಟಿಗೆ ಸರಿಪಡಿಸಲಾಗದ ಧಕ್ಕೆಯನ್ನು ಉಂಟು ಮಾಡಿದೆ. ಒಂದು ಶತಮಾನದುದ್ದಕ್ಕೂ ಆಳ್ವಿಕೆ ನಡೆಸಿದ ಬ್ರಿಟಿಷ್ ಸರಕಾರವು ಈ ಜನಾಂಗದ ಆಂತರಿಕ ವಿಷಯಗಳಲ್ಲಿ ತಲೆಹಾಕದಿರುವಷ್ಟು ಮತಿ ಉಳ್ಳದಾಗಿತ್ತು. ಈ ಯಾವ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಳ್ಳದೇ ಈ ಜನರ ಮೇಲೆ ಹೇರಲಾಗಿದ್ದ ಅನೇಕ ಚಟುವಟಿಕೆಗಳು ಈ ಜನರಲ್ಲಿ ವಿಶಿಷ್ಟವಾಗಿರುವ ಪರಸ್ಪರ ಹೊಂದಾಣಿಕೆ ಮತ್ತು ಸ್ವಾವಲಂಬಿ ಮನೋಧರ್ಮಕ್ಕೆ ದೊಡ್ಡ ಪೆಟ್ಟಾಗಿಸಿ ಈಗವರು ಪ್ರತಿಯೊಂದಕ್ಕೂ ಸರಕಾರವನ್ನೇ ಅವಲಂಬಿಸುವ ಹಂತಕ್ಕೆ ತಲುಪಿದ್ದಾರೆ. ಈಗ ಅವರನ್ನು ಮುಖ್ಯ ವಾಹಿನಿಗೆ ತರಲಿಕ್ಕಾಗಿ ಈ ಪ್ರಾಂತ್ಯದ ಉದ್ದಗಲಕ್ಕೂ ದೊಡ್ಡ ದೊಡ್ಡ ರಸ್ತೆಗಳನ್ನು ಮಾಡಲಾಗಿದೆ. ತಮ್ಮಲ್ಲಿದ್ದ ಪ್ರತಿಯೊಂದೂ ದರೋಡೆಯಾಗಿದ್ದ ಈ ಹಂತದಲ್ಲಿ ಈ ರಸ್ತೆಯಲ್ಲಿ ಪ್ರಯಾಣಿಸುವುದೊಂದೇ ಅವರಿಗೆ ಉಳಿದಿರುವುದು.

ಈ ಹಿನ್ನೆಲೆ ಇದ್ದ ನಲವತ್ತು ಮಂದಿ ನೇಕಾರರು ಮಾನವ ಸಂಗ್ರಹಾಲಯ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಭಾಗವಹಿಸಲು ಬಂದಿದ್ದರು. ನೇಕಾರಿಕೆಯಿಂದಲೇ ಬದುಕನ್ನು ರೂಪಿಸಿಕೊಳ್ಳಬೇಕಾದುದ್ದರ ಹಿಂದೆ ಇರುವ ದೊಡ್ಡ ಹೊರಾಟವು ಮತ್ತು ಈ ಸಂಪ್ರದಾಯವನ್ನು ಮುಂದಿನ ಪೀಳಿಗೆಗೆ ದಕ್ಕುವಂತೆ ಉಳಿಸಿ ಕಟ್ಟಿಕೊಡಬೇಕಾದ ಜವಾಬ್ದಾರಿಯು ಇವರ ಹೆಗಲ ಮೇಲೆ ಇತ್ತು.

ಮುಂದಿನ ಹತ್ತು ದಿನಗಳಲ್ಲಿ ಈಶಾನ್ಯ ಪ್ರದೇಶದ ಪ್ರಪಂಚವು ತೆರೆದುಕೊಂಡಿತ್ತು, ಮೊದ ಮೊದಲಿಗೆ ಇದರ ಕಣ್ಣುಕುಕ್ಕುವಂತಹ ಅಂಶಗಳಿಂದಲೂ ಮತ್ತು ಕ್ರಮೇಣ ತನ್ನೊಳಗಿನ ಎಲ್ಲ ಅಂಧಕಾರವನ್ನು ಬಿಚ್ಚಿಡುತ್ತಲೂ.

*

(೫ನೇ ಪುಟದಿಂದ)

ನನ್ನ ಚಪ್ಪಲಿ, ಬ್ಯಾಗ್‌ಗಳನ್ನು ಆಯ್ದುಕೊಂಡೆ. ಜನ ತುಂಬ್ಕೊಂಡ್ರು. ನೀರು ಕೊಟ್ರು, ಬಿದ್ದ ಅವಮಾನ, ಹೆದರಿಕೆ ತಾಳಲಾರದೆ, "ಏನೂ ಆಗಿಲ್ಲ, ಏನೂ ಆಗಿಲ್ಲ" ಅಂತ ಹೇಳ್ತಾ, ಸ್ಕೂಟರ್ ಹತ್ತಿ ಆಸ್ಪತ್ರೆಗೆ ಧಾವಿಸಿದೆವು. ವೇದಾವತಿ ಇದ್ದ ಕೊಠಡಿ ಸೇರಿ ಕೂತುಕೊಳ್ಳುವ ತನಕ ಕೈಕಾಲು ನಡುಕ ನಿಂತಿರಲಿಲ್ಲ. ಸೀರೆ ಸರಿಸಿ ನೋಡಿದ್ರೆ, ಕೈಕಾಲು ತರಚಿ ಹೋಗಿತ್ತು. ಅಲ್ಲೇ ತುರ್ತು ಚಿಕಿತ್ಸೆ ಪಡೆದು, ನೀರು ಕುಡ್ದು, ಸುಧಾರಿಸಿಕೊಂಡು, ಕಚೇರಿಗೆ ತೆರಳಿದ್ದೆ. ಇದಾದ ನಂತರ ಕೃಷ್ಣಪ್ಪ, ಸಂಜೆ ವೇಳೆ ಕರೆದುಕೊಂಡು ಹೋಗಲಿಕ್ಕೆ ಯಾವಗಲಾದರೊಮ್ಮೆ ಬರ್ತಿನಿ ಅಂತ ಹೇಳಿದ್ರೆ ನನಗೆ ನಡುಕ ಶುರುವಾಗಿರೋದು. ಇವ್ರು ಬರ್ದೇ ಇದ್ರೆ ಸಾಕು. ನನ್ನ ಪಾಡಿಗೆ ನಾನು ಬಸ್ಸಿನಲ್ಲಿ ಹೋಗಬಹುದು,ಇವರಿಗೆ ಏನಾದ್ರೂ ತುರ್ತುಕೆಲಸ ಬರಬಾರ್ದೆ; ಇವ್ರು ಅಲ್ಲೇ ಉಳ್ಕೊಳೋ ಹಂಗೆ ಆಗಬಾರ್ದೆ"– ಅಂತ ಮನಸ್ಸು ಎಣಿಕೆ ಹಾಕುತ್ತಿತ್ತು.

ಅಂತರ್ಜಾತೀಯ ವಿವಾಹವಾದವರು, ಸ್ಕೂಟರ್ ಅಪಘಾತದಲ್ಲಿ ಮರಣ ಹೊಂದಿದರೆ ಮಕ್ಕಳಗತಿಯೇನು? ಎರಡು ಕಡೆ ಕುಟುಂಬದ ಬೆಂಬಲವಿಲ್ಲದ ಮಕ್ಕಳು ಬೀದಿಪಾಲಾಗುವರು. ಆಂಥಸ್ಥಿತಿ ನಮ್ಮ ಮಕ್ಕಳಿಗೆ ಬರಬಾರ್ದು ಇಬ್ಬರಲ್ಲಿ ಒಬ್ಬರಾದ್ರು ಉಳುಕೊಂಡ್ರೆ, ಮಕ್ಕಳನ್ನು ಬೆಳಸಬಹುದು. ಇದರಿಂದ ಸಮಾಜದಲ್ಲಿ ಅಂತರ್ಜಾತೀಯ ವಿವಾಹ ಆಗಬಾರ್ದು ಅಂತ ಸಂದೇಶ ಹೋಗುತ್ತೆ ಅನ್ನೋ ವಿಚಾರವೇ ನನ್ನ ಮನಸ್ಸಿನ ದುಗುಡಕ್ಕೆ ಕಾರಣವಾಗುತ್ತಿತ್ತು. ಮೊದ ಮೊದಲಿನ ಸ್ಕೂಟರ್ ಪಯಣ ನನ್ನನ್ನು ಹೆದರಿಸಿದ್ರೂ, ನಂತರದ ದಿನಗಳಲ್ಲಿ, ಅವರೊಂದಿಗೆ ಸ್ಕೂಟರ್‌ನಲ್ಲಿ ಝುಂ ಅಂತ; ಸುತ್ತಾ ಕಾನನದ ನಡುವೆ ಏರಿಳಿತದ ರಸ್ತೆಯಲ್ಲಿ ಬಿ.ಆರ್.ಪಿಯ ರುದ್ರಪ್ಪ–ಗಾಯಿತ್ರಿ ಮನೆಗೆ ಹೋಗಲಿಕ್ಕೆ, ಶಿವಮೊಗ್ಗ–ಭದ್ರಾವತಿಯ ಆಗಿನ ವನಸಿರಿಯ, ತಂಪುಗಾಳಿಯ ರಸ್ತೆಯಲ್ಲಿನ ಸ್ಕೂಟರ್ ಪಯಣ ಈಗಲೂ ಮೆಲುಕು ಹಾಕುವಂತಿದೆ.

(ಮುಂದುವರೆಯುವುದು)

# ಹೆಗ್ಗೋಡಿನಲ್ಲಿ ಚರಕ ಉತ್ಸವ : ಸಹಕಾರಿ ತತ್ವಗಳ ಅವಲೋಕನ



**ಕ**ವಿಕಾವ್ಯ ಟ್ರಸ್ಟ್ ಹೆಗ್ಗೋಡಿನಲ್ಲಿ ಪ್ರತಿವರ್ಷ ನಡೆಸುವ ಚರಕ ಉತ್ಸವ ಈ ವರ್ಷ ೧೫, ೧೬ ಮಾರ್ಚ್ ೨೦೧೪ರಂದು ಎರಡು ದಿನಗಳ ಕಾಲ ನಡೆಯಿತು. ಉತ್ಸವವನ್ನು ಉದ್ಘಾಟಿಸಿದ ಗುಜರಾತಿನ ಸಂಪೂರ್ಣಕ್ರಾಂತಿ ವಿದ್ಯಾಲಯದ ಸಂಚಾಲಕಿ ಶ್ರೀಮತಿ ಸಂಘಮಿತ್ರ ಗಾಡೇಕರ್, ಚರಕ ಸಂಸ್ಥೆಯಲ್ಲಿ ಜೀವಂತವಾಗಿರುವ ಕೈಕಸುಬುಗಳನ್ನು ಮೆಚ್ಚಿಕೊಳ್ಳುತ್ತಾ, ಗುಜರಾತ್ ಗಲಭೆಯಲ್ಲಿ ಅನೇಕ ಮುಸ್ಲಿಮರು ಹತ್ಯೆಗೀಡಾಗಿ ಅವರ ಕುಟುಂಬಗಳು ನಿರ್ಗತಿಕವಾದಾಗ ಅವರನ್ನು ಪೊರೆದದ್ದು ಹಾಗೂ ಇಂದಿಗೂ ಜೀವನಾಸರೆಯಾಗಿರುವುದು ಇವೇ ಕೈಕಸುಬುಗಳು ಎಂದರು.

ಸಹಕಾರಿ ತತ್ವಗಳ ಕುರಿತ ಮೊದಲ ದಿನದ ಸಂವಾದವನ್ನು ನಡೆಸಿಕೊಟ್ಟ ಬಿ.ವಿ. ರವೀಂದ್ರನಾಥ್, ಕರ್ನಾಟಕದ ಯಶಸ್ವಿ ಸಹಕಾರಿ ಸಂಘಟನೆಗಳ ಕಾರ್ಯಶೈಲಿಯನ್ನು ವಿವರಿಸಿದರು. ಎರಡನೆ ದಿನದ ಗೋಷ್ಠಿ ಕತೆಗಾರರೂ ಮತ್ತು ಸಹಕಾರಿ ತತ್ವ ಚಿಂತಕರೂ ಆದ ಎಂ.ಎಸ್. ಶ್ರೀರಾಮ್ ಅಧ್ಯಕ್ಷತೆಯಲ್ಲಿ ನಡೆಯಿತು. ಎರಡೂ ದಿನಗಳ ಗೋಷ್ಠಿಗಳಲ್ಲಿ ವಿವಿಧ ಕೈಮಗ್ಗ ಮತ್ತು ಸಾಮಾಜಿಕ ಸಂಘಟನೆಗಳ ಪ್ರತಿನಿಧಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಸಂವಾದದಲ್ಲಿ ಪಾಲ್ಗೊಂಡರು. ಬೆಳೆಯುತ್ತಿರುವ ಜಾಗತೀಕರಣಕ್ಕೆ ಪರ್ಯಾಯವಾಗಿ ಮನುಷ್ಯ ಹೇಗೆ ಸಂಘಟಿತವಾಗಿ ಸಣ್ಣಸಣ್ಣ ಘಟಕಗಳಲ್ಲಿ ಕೆಲಸ ಮಾಡುತ್ತ ಸರಳ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು. ಆ ಮೂಲಕ ಪರಿಸರಕ್ಕೆ ಸ್ಪಂದಿಸುವ ಸಂವೇದನೆಯನ್ನು ಬೆಳೆಸಿಕೊಳ್ಳಬೇಕೆಂಬುದು ಎರಡೂ ಗೋಷ್ಠಿಗಳಲ್ಲಿ ಒಟ್ಟಾರೆ ಮೂಡಿಬಂದ ಅಭಿಪ್ರಾಯವಾಗಿತ್ತು.

೧೬ರಂದು ಚರಕ ಸಂಸ್ಥೆಯ ಕೆಲಸಗಾರರಿಗೆ ಕೊಡಮಾಡುವ ಕಾಯಕ ಪ್ರಶಸ್ತಿಯನ್ನು ಪ್ರದಾನ ಮಾಡಿ, ಸಮಾರೋಪ ಭಾಷಣ ಮಾಡಿದ ವಿಧಾನಸಭೆಯ ಅಧ್ಯಕ್ಷರಾದ ಕಾಗೋಡು ತಿಮ್ಮಪ್ಪನವರು, ರಾಜ್ಯದ ಪ್ರತಿಯೊಂದು ಪಂಚಾಯ್ತಿಯಲ್ಲೂ ಕನಿಷ್ಟ ೨೫ ಜನರಿಗೆ ಉದ್ಯೋಗ ಒದಗಿಸಬಲ್ಲ ಯೋಜನೆಯೊಂದನ್ನು ಜಾರಿಗೆ ತರಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು. ಸಮಾರಂಭದ ಮತ್ತೊಬ್ಬ ಅತಿಥಿಗಳಾದ ಚಾಮರಾಜನಗರದ ದೀನಬಂಧು ಸಂಸ್ಥೆಯ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ ಅವರು, ಗ್ರಾಮೀಣ ಪ್ರದೇಶದ ಬಡವರಿಗೆ ಸಹಕಾರ ತತ್ವದಡಿ ಬದುಕದೆ ಅನ್ಯಮಾರ್ಗವಿಲ್ಲ; ಈ ವಿಚಾರದಲ್ಲಿ ಚರಕ ಸಂಸ್ಥೆ ಒಂದು ಮಾದರಿಯಾಗಿದೆ ಎಂದರು.

ಎರಡೂ ದಿನ ಸಂಜೆ ಹೆಗ್ಗೋಡಿನಲ್ಲಿ ಮಾತ್ರವಲ್ಲದೆ, ಸುತ್ತಮುತ್ತಲ ನಾಲ್ಕೈದು ಗ್ರಾಮಗಳಲ್ಲೂ ಜನಪದ ಹಾಡು, ನಾಟಕ, ಯಕ್ಷಗಾನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಸಭೆ ಸಮಾರಂಭಗಳಿಗಿಂತ ಮುಖ್ಯವಾಗಿ ಚರಕದ ೩೦೦–೩೫೦ ಗ್ರಾಮೀಣ ಹೆಣ್ಣುಮಕ್ಕಳು ಉತ್ಸವದ ನೆವದಲ್ಲಿ ಆವರಣವನ್ನು ಸಿಂಗರಿಸುವ, ಊಟೋಪಚಾರ, ವೇದಿಕೆ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ತೋರುವ ಸಂಭ್ರಮದಲ್ಲಿಯೇ ಉತ್ಸವದ ಸಾರ್ಥಕತೆ ಇದೆ ಎನ್ನಬಹುದು.

(ವರದಿ: ಎನ್. ಎಂ. ಕುಲಕರ್ಣಿ)

## ಹೊಸ ಮನುಷ್ಯ ಓದುಗರಿಗೆ ರಿಯಾಯ್ತಿ ದರದಲ್ಲಿ ಎರಡು ಸಮಾಜವಾದಿ ಪುಸ್ತಕಗಳ ಕೊಡುಗೆ

ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಲೋಹಿಯಾರ ಹತ್ತು ಬಿಡಿ ಬರಹಗಳನ್ನು 'ಸಪ್ತಕ್ರಾಂತಿ, ಕಾಂಚನಮುಕ್ತಿ ಇತ್ಯಾದಿ' ಶೀರ್ಷಿಕೆಯಲ್ಲಿ (ಅನುವಾದ: ಹಸನ್ ನಯೀಂ ಸುರಕೋಡ) ಮತ್ತು ಗೀತಾಂಜಲಿ ಪುಸ್ತಕ ಪ್ರಕಾಶನವು ಡಿ.ಎಸ್. ನಾಗಭೂಷಣ ಅವರ ಮಾರ್ಕ್ಸ್–ಗಾಂಧಿ–ಲೋಹಿಯಾ–ಅಂಬೇಡ್ಕರ್‌ರನ್ನು ಕುರಿತ ಲೇಖನಗಳ ಸಂಗ್ರಹವನ್ನು 'ಲೋಹಿಯಾ ಜೊತೆಯಲ್ಲಿ...' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿವೆ. ಪುಸ್ತಕಗಳ ಬೆಲೆ ಕ್ರಮವಾಗಿ ರೂ. 175/– ಮತ್ತು ರೂ. 180/– ಆಗಿದ್ದು, 'ಹೊಸ ಮನುಷ್ಯ' ಓದುಗರಿಗೆ ವಿಶೇಷ ಕೊಡುಗೆಯಾಗಿ ಶೇ.25ರ ರಿಯಾಯ್ತಿಯಲ್ಲಿ ಅಂದರೆ ಎರಡೂ ಪುಸ್ತಕಗಳನ್ನು ಒಟ್ಟು ರೂ. 270/–ಕ್ಕೆ



ಒದಗಿಸಲಾಗುವುದು. ಅಂಚೆ ವೆಚ್ಚ ನಮ್ಮದು. ಆಸಕ್ತರು 'ಹೊಸ ಮನುಷ್ಯ' ಪತ್ರಿಕೆಯ ವಿಳಾಸ/ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ ಆದೇಶ ನೀಡಬಹುದು

–ಸಂಪಾದಕ

**ಸಮಕಾಲೀನ**

# ಮೋದಿ ಏಕೆ ಪ್ರಧಾನ ಮಂತ್ರಿಯಾಗಬಾರದು?



ಈಗ ರಾಷ್ಟ್ರಾದ್ಯಂತ ಮೋದಿ ಅಲೆ ಇದೆ; ಲಂಗರು ಕಳೆದುಕೊಂಡು ದಿಕ್ಕೆಟ್ಟಂತಿರುವ ಈ ದೇಶವನ್ನು ಒಂದು ನೆಲೆಗೊಯ್ದು ಬಲಿಷ್ಠ ರಾಷ್ಟ್ರವನ್ನಾಗಿಸುವ ಯೋಗ್ಯತೆ ಇರುವುದು ಮೋದಿಗೆ ಮಾತ್ರ ಎಂಬುದು ಈಗ ರಾಷ್ಟ್ರದ ಅರಿವಿಗೆ ಬಂದಿದೆ ಎಂಬ ಪ್ರಚಾರ ಪ್ರಚಲಿತವಾಗುತ್ತಿರುವ ಈ ಸಂದರ್ಭದಲ್ಲಿ 'ಮೋದಿ ಏಕೆ ಪ್ರಧಾನ ಮಂತ್ರಿಯಾಗಕೂಡದು?' ಎಂಬ ನಮ್ಮ ಪ್ರಶ್ನೆ ಹಲವರ ಹುಬ್ಬೇರಿಸಬಹುದು. ಇದೊಂದು ಮೋದಿಯವರ ರಾಜಕೀಯ ವಿರೋಧಿಗಳ ಅಪಪ್ರಚಾರದ ಪ್ರಯತ್ನವಾಗಿಯೂ ಕಾಣಬಹುದು. ಆದರೆ, ಈ ಪ್ರಶ್ನೆಯಲ್ಲಡಗಿರುವುದು ಬರೀ ರಾಜಕೀಯ ಪ್ರಶ್ನೆಯಲ್ಲ; ಅದನ್ನೂ ಮೀರಿದ ರಾಷ್ಟ್ರದ ಭವಿಷ್ಯದ ಪ್ರಶ್ನೆ. ನಾವು ಎಂತಹ ರಾಷ್ಟ್ರವನ್ನು ಕಟ್ಟ ಬಯಸಿದ್ದೇವೆ ಎಂಬ ಪ್ರಶ್ನೆ. ಮೋದಿ ಪ್ರತಿಪಾದಿಸುತ್ತಿರುವ 'ಅಭಿವೃದ್ಧಿಗೊಂಡ ಬಲಿಷ್ಠ ರಾಷ್ಟ್ರ'ವನ್ನು ಹೇಗೆ ಕಟ್ಟಲಾಗುವುದು ಮತ್ತು ಅದರ ಪರಿಣಾಮಗಳೇನು ಎಂಬ ಮುಖ್ಯ ಪ್ರಶ್ನೆ.

ಮೊದಲಾಗಿ ಬಿಜೆಪಿ ಮೋದಿಯವರನ್ನು ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಚುನಾವಣೆಗೆ ಮೊದಲೇ ಘೋಷಿಸಿ, ಈ ಒಕ್ಕೂಟ ರಾಷ್ಟ್ರಕ್ಕೆ ಸೂಕ್ತವೆಂದು ನಮ್ಮ ರಾಷ್ಟ್ರ ಪಿತೃಗಳು ಆಯ್ಕೆ ಮಾಡಿದ ಸಂಸದೀಯ ಪ್ರಜಾಪ್ರಭುತ್ವದ ಭಾವನೆಗೇ ಪೆಟ್ಟುಕೊಟ್ಟು ಈ ಚುನಾವಣೆಯನ್ನು ಜನರ ಪಾಲಿಗೆ ಪಕ್ಷಕ್ಕಿಂತ ವ್ಯಕ್ತಿಯ ಆಯ್ಕೆಯ ವೇದಿಕೆಯನ್ನಾಗಿ ಮಾರ್ಪಡಿಸಿಬಿಟ್ಟಿದೆ. ಮೋದಿ ಪ್ರಧಾನಿಯಾಗುವುದು ಏಕೆ ಬೇಡ ಎಂಬುದು ವೈಯುಕ್ತಿಕ ನೆಲೆಯ ಪ್ರಶ್ನೆಯಾಗಿ ಯಾರಿಗಾದರೂ ಕಂಡರೆ, ಅದಕ್ಕೆ ಅವರ ಪಕ್ಷವೇ ಕಾರಣವಾಗಿದೆ. ಪಕ್ಷದಿಂದ ಆಯ್ಕೆಯಾಗಬಹುದಾದ ಸದಸ್ಯರ ಆಯ್ಕೆಯ ಹಕ್ಕನ್ನೇ ಅದು ಕಸಿದು ಸಂಸದೀಯ ಪ್ರಜಾಪ್ರಭುತ್ವದ ಅಡಿಪಾಯವನ್ನೇ ಅಲುಗಾಡಿಸಿದೆ. ಇದರ ಹಿಂದೆ ಇರುವ ರಾಜಕಾರಣ ಯಾವುದು? ಮತ್ತು ಯಾರದು? ಇದೇ ಮೋದಿ ಏಕೆ ಪ್ರಧಾನಿಯಾಗಬಾರದು ಎಂಬ ಪ್ರಶ್ನೆ ಏಳಲು ಮೂಲ ಕಾರಣವಾಗಿದೆ.

ಭಾರತ ಜೀವಂತವಾಗಿ ಉಳಿದಿರುವುದೇ ತನ್ನ ಹಲವು ನೆಲೆಗಳ ವೈವಿಧ್ಯದಿಂದ ಎಂಬುದನ್ನು ಅರಿಯದ ಮತ್ತು ಒಪ್ಪದ ರಾಷ್ಟ್ರೀಯತೆಯ ಹೆಸರಿನಲ್ಲಿನ ಮತೀಯ ಪಟ್ಟಭದ್ರ ಹಿತಾಸಕ್ತಿಗಳ ಕೂಟವೊಂದು ಕಾಂಗ್ರೆಸ್ ಎಂಬ ಪಕ್ಷ ತನ್ನ ಬೇಜವಾಬ್ದಾರಿ ರಾಜಕಾರಣದಿಂದಾಗಿ ದೇಶವನ್ನು ಅಧ್ವಾನಗೊಳಿಸಿರುವ ಸಂದರ್ಭವನ್ನೇ ಬಳಸಿಕೊಂಡು, ಅದನ್ನು ಒಂದು ಏಕಾಕಾರದ ರಾಷ್ಟ್ರವನ್ನಾಗಿ ಮಾಡಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಭಯಂಕರ ರಾಜಕಾರಣವಿದು. ಈ ಏಕಾಕಾರವನ್ನು ಸಾಂಸ್ಕೃತಿಕ ರಾಜಕಾರಣದ ಮೂಲಕ ಸಾಧಿಸಲಾಗದ ಈ ಕೂಟ ಈಗ 'ಅಭಿವೃದ್ಧಿ'ಯ ರಾಜಕಾರಣವನ್ನು ಬಳಸಲು ಯತ್ನಿಸುತ್ತಿದೆ. ಹಾಗಾಗಿ ಇದೊಂದು ಮತೀಯ ಹಿತಾಸಕ್ತಿಗಳು ಮತ್ತು ಲಾಭಕೋರ ಉದ್ಯಮಿಗಳ ಮಾರಕ ಕೂಟವಾಗಿದೆ. ಇದರ ಲಾಂಛನ ಇವರ 'ಗುಜರಾತ್ ಪ್ರಯೋಗ'ವನ್ನು ಯಶಸ್ವಿಗೊಳಿಸಿರುವ ನೇತಾರ ಮೋದಿಯಲ್ಲದೆ ಇನ್ನಾರಾದಾರು?.

ಈ ದೇಶದಲ್ಲಿ ಕಳೆದ ೨೫ ವರ್ಷಗಳ ಅಭಿವೃದ್ಧಿಯ ಹೆಸರಿನಲ್ಲಿ ಒಂದಷ್ಟು ಜನ ದುಡ್ಡಿನ ರುಚಿ ನೋಡಿದ್ದನ್ನು ಕಂಡ ಇಡೀ ಜನಸ್ತೋಮ ತನ್ನ ಮತ್ತು ರಾಷ್ಟ್ರದ ವ್ಯಕ್ತಿತ್ವವೂ ಸೇರಿದಂತೆ ಎಲ್ಲವನ್ನೂ ಮರೆತು ದುಡ್ಡಿನ ಹಿಂದೆ, ಅದು ತಂದುಕೊಡುವ ಸುಖಗಳ ಹಿಂದೆ ಬಿದ್ದಿದೆ. ಆದರೆ ಅದು ತಂದೊಡ್ಡುತ್ತಿರುವ ತೆರತೆರನ ಹಿಂಸೆ ಅವರ ಹೃದಯಕ್ಕೆ ತಾಗುತ್ತಲೇ ಇಲ್ಲ. ಜನರ ಈ ದೌರ್ಬಲ್ಯದ ಆಧಾರದ ಮೇಲೇ ಇಂದು ಮೋದಿಯ ಪ್ರತಿಮೆಯನ್ನು ಆಕಾಶದೆತ್ತರಕ್ಕೆ ಕಟ್ಟಲಾಗುತ್ತಿರುವುದು. ಈ ದೇಶದ ಏಕಾಕಾರದಲ್ಲಷ್ಟೇ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸಾಧ್ಯವೆಂಬುದನ್ನು ಕಂಡುಕೊಂಡಿರುವ ಸನಾತನ ಸಂಪ್ರದಾಯವಾದಿ ಶಕ್ತಿಗಳು ಇಂದು ಲಾಭಕೋರ ಉದ್ಯಮಿಗಳ ಜೊತೆಗೂಡಿ ಮೋದಿಗೆ 'ಅಭಿವೃದ್ಧಿ'ಯ ಬಣ್ಣದ ಅಂಗಿ ತೊಡಿಸಿ ಜನರನ್ನು ಹುಚ್ಚೆಬ್ಬಿಸುವ ಪ್ರಯತ್ನ ಮಾಡುತ್ತಿದೆ. ಹೀಗೆ ಲಾಭಕೋರ ಉದ್ಯಮಿಗಳು ನಮ್ಮ ನೆಲ–ಜಲ–ಗಾಳಿ–ಖನಿಜಗಳನ್ನಷ್ಟೇ ಅಲ್ಲ, ಮಾನವ ಸಂಪನ್ಮೂಲಗಳನ್ನೂ–ಅವನ್ನು ನೈತಿಕವಾಗಿ ದಿವಾಳಿಯೆಬ್ಬಿಸುವ ಮೂಲಕ–ಸೂರೆಗೊಂಡು ಈ ದೇಶವನ್ನು ಏಕಾಕಾರಕ್ಕೆ 'ಅಭಿವೃದ್ಧಿ'ಗೊಳಿಸುವುದನ್ನೇ ಇವರು ಭಾರತವನ್ನು 'ಜಾಗತಿಕ ಶಕ್ತಿ'ಯನ್ನಾಗಿ ಮಾಡುವುದು ಎಂದು ಕರೆಯುವುದು! ಇಂತಹ ಒಂದು ಪ್ರಯತ್ನ ದೇಶವನ್ನು ಅಂತಿಮವಾಗಿ ಏನು ಮಾಡಿರುತ್ತದೆ, ಎಂತಹ ಭಯಂಕರ ಪೆಡಂಭೂತವೊಂದನ್ನು ಸೃಷ್ಟಿಸಿರುತ್ತದೆ ಎಂಬ ಕಲ್ಪನೆ ಬರೀ ದುಡ್ಡು ಮತ್ತು ಅದು ತರುವ ಸುಖಗಳ ಕಲ್ಪನೆಯೊಳಗೇ ಸಿಕ್ಕಿ ಹಾಕಿಕೊಂಡಿರುವ ಜನಸ್ತೋಮಕ್ಕೆ ಬರಲಾರದು. ಅದೇ ಇಂದಿನ ನಿಜವಾದ ದುರಂತ: 'ಭ್ರಷ್ಟ ಅಭಿವೃದ್ಧಿ'ಯಿಂದ 'ದುಷ್ಟ ಅಭಿವೃದ್ಧಿ'ಯ ಕಡೆಗೆ ಪಯಣ.

ಮೋದಿ ಗುಜರಾತ್‌ನಲ್ಲಿ ಸ್ವರ್ಗವನ್ನೇ ಸೃಷ್ಟಿಸಿದ್ದಾರಂತೆ. ಅದೆಷ್ಟು ಅಪ್ಪಟ ಸುಳ್ಳು ಎಂಬುದನ್ನು ಅಂಕಿ ಅಂಶಗಳೇ ಸಾರಿ ಹೇಳುತ್ತಿವೆ. ಆದರೆ ಗುಜರಾತ್‌ನಲ್ಲಿ ಲೂಟಿಯ ರುಚಿ ನೋಡಿರುವ ಅಂಬಾನಿ–ಅದಾನಿ ಮುಂತಾದ ಉದ್ಯಮಿಗಳು ಮೋದಿಗಾಗಿ ನೇಮಿಸಿರುವ ಜಗತ್ತಿನ ಅತ್ಯಂತ ದುಬಾರಿ ಸಾರ್ವಜನಿಕ ಸಂಪರ್ಕ ಸಂಸ್ಥೆ ಸುಳ್ಳು ಸತ್ಯಗಳ ನಡುವಣ ಗೆರೆಯನ್ನೇ ಅಳಿಸಿಹಾಕಬಲ್ಲ ಕೌಶಲ್ಯವನ್ನು ಹೊಂದಿದೆ. ಆದರೂ ಏಕೆ ಅಲ್ಲಿನ ಜನ ಅವರನ್ನೇ ಪದೇ ಪದೇ ಆರಿಸುತ್ತಾರೆ? ಮೊನ್ನೆ ಹೆಗ್ಗೋಡಿನಲ್ಲಿ ಚರಕೋತ್ಸವದ ಸಂದರ್ಭದಲ್ಲಿ ಭೇಟಿಯಾದ ಮಹಾತ್ಮ ಗಾಂಧಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರ ಮೊಮ್ಮಗಳು(ಗುಜರಾತ್ ವಿದ್ಯಾಪೀಠದ ಕುಲಪತಿ ನಾರಾಯಣ ದೇಸಾಯಿಯವರ ಮಗಳು) ಸಂಘಮಿತ್ರ ಗಾಡೇಕರ್ ಅವರ ಪ್ರಕಾರ ಅಲ್ಲಿ ಕಾಂಗ್ರೆಸ್ ನೈತಿಕವಾಗಿ ಎಷ್ಟು ಕುಸಿದು ಹೋಗಿದೆ ಎಂದರೆ ಅದು ಮೋದಿಯ ಆಕ್ರಮಣಕಾರಿ ತಂತ್ರಗಳ ಎದುರು ಸಾವರಿಸಿಕೊಳ್ಳಲೇ ಸಾಧ್ಯವಾಗದೆ. ನಿಶ್ಚೇಷ್ಟಿತವಾಗಿಬಿಟ್ಟಿದೆ. ಅಷ್ಟಾದರೂ, ಗುಜರಾತ್‌ನಲ್ಲಿ ಮೋದಿ ವಿರೋಧಿ ಮತ ಶೇ. ೪೦ಕ್ಕಿಂತ ಕಡಿಮೆಯಾಗಿಲ್ಲ ಮತ್ತು ಮೋದಿ ಗುಜರಾತನ್ನು ನಂದನವನ್ನೇ ಮಾಡಿದ್ದರೆ, ಅವರಿಗೆ ಇಷ್ಟು ವಿರೋಧ ದಾಖಲಾಗಲು ಕಾರಣವೇ ಇಲ್ಲ. ಮೊನ್ನೆ ಕೇಜ್ರಿವಾಲ್ ಗುಜರಾತ್ ಪ್ರವಾಸ ಮಾಡಿದಾಗ ಅವರಿಗೆ ಸಿಕ್ಕ ಸಂಭ್ರಮದ ಸ್ವಾಗತ ಮತ್ತು ವ್ಯಾಪಕ ಸ್ಪಂದನ ಗುಜರಾತ್ ಬಗ್ಗೆ ತಮ್ಮಲ್ಲಿ ಮತ್ತೆ ಆಶೆ ಹುಟ್ಟಿಸಿದೆ ಎಂದರು ಸಂಘಮಿತ್ರ.

ಈ ರಾಜ್ಯದ ೨೬ ಪೋಲೀಸ್ ಅಧಿಕಾರಿಗಳು ವಿವಿಧ ಆರೋಪಗಳ ಮೇಲೆ ಬಂಧನದಲ್ಲಿದ್ದರೆ, ಮೋದಿಯವರ ಮಾಜಿ ಗೃಹಮಂತ್ರಿ ಕೋಮು ದಂಗೆ ಪ್ರಚೋಸಿದ್ದಕ್ಕಾಗಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದಾರೆ. ಲೋಕಾಯುಕ್ತ ರಚನೆಯನ್ನು ಸತತವಾಗಿ ವಿರೋಧಿಸುತ್ತಾ ಬಂದ ಮೋದಿ ತಮ್ಮ ಸಂಪುಟದಲ್ಲಿ ಭ್ರಷ್ಟಾಚಾರಕ್ಕಾಗಿ ಶಿಕ್ಷೆಗೆ ಒಳಗಾಗಿರುವ ಇಬ್ಬರು ಸಚಿವರನ್ನು ರಕ್ಷಿಸಿಟ್ಟುಕೊಂಡಿದ್ದಾರೆ. ರಾಜ್ಯದ ವಿರೋಧ ಪಕ್ಷಗಳ ನಾಯಕರನ್ನಷ್ಟೇ ಅಲ್ಲ, ತನ್ನ ಪಕ್ಷದಲ್ಲಿನ ಎಲ್ಲ ನಾಯಕರನ್ನೂ ಮುಗಿಸಿ ಈಗ ರಾಷ್ಟ್ರೀಯ ಮಟ್ಟದ ನಾಯಕರನ್ನೂ ಮುಗಿಸತೊಡಗಿರುವ, ಎಂದೂ ವೇದಿಕೆಯಿಂದ ಇಳಿಯದ, ಜನರ ಮಧ್ಯೆ ಬರದ, ಯಾರ ಯಾವ ಪ್ರಶ್ನೆಗೂ ಉತ್ತರಿಸುವ ಗೋಜಿಗೆ ಹೋಗದ, ಒಂದು ಪತ್ರಿಕಾ ಗೋಷ್ಠಿಯನ್ನೂ ಎದುರಿಸದ, ದೇಶದ ಚರಿತ್ರೆಯನ್ನಾಗಲೀ, ಭೂಗೋಳವನ್ನಾಗಲೀ ಸರಿಯಾಗಿ ಅರಿಯದ, ಸದಾ ತನ್ನದೇ ಸುರಕ್ಷಿತ ಕೋಟೆಯಲ್ಲಿ ಅಡಗಿಕೊಂಡಿರುವ ಈ ಮನುಷ್ಯ ತಾನು ಕಟ್ಟಿಕೊಂಡ ಹೆಂಡತಿಯನ್ನು ತ್ಯಜಿಸಿರುವ ರೀತಿ ಮತ್ತು ಹಿನ್ನೆಲೆಯನ್ನು ಗಮನಿಸಿದಾಗ ಈತ ನಿಜವಾಗಿ ಎಷ್ಟು ಬಲಿಷ್ಠ ಮತ್ತು ವಿವೇಕಿ ಎಂಬ ಪ್ರಶ್ನೆ ಏಳುತ್ತದಲ್ಲವೇ? ಈ ಮನುಷ್ಯನಲ್ಲಿ ಏನೋ ಒಂದು ವಿಕ್ಷಿಪ್ತತೆ ಇದೆ ಅನ್ನಿಸುವುದಿಲ್ಲವೇ? ಇಂತಹ ಮನುಷ್ಯನ ಕೈಗೆ ದೇಶ ಸಿಕ್ಕರೆ ಏನಾಗಬಹುದು? ಕರ್ನಾಟಕದ ವಿವಿಧ ಕ್ಷೇತ್ರಗಳ ಹಿರಿ ಕಿರಿಯರು ಈ ಬಗ್ಗೆಯೆಲ್ಲ ಯೋಚಿಸಿ ಇಲ್ಲಿ ಬರೆದಿದ್ದಾರೆ. ಬಿಜೆಪಿಯ ಹಿತೈಷಿಗಳು ಕೂಡ ಮನ ತೆರೆದು ಇದನ್ನು ಓದಬೇಕು –ಸಂಪಾದಕ

## ಜಾಗತಿಕ ಯುದ್ಧಕುಂಡಕ್ಕೆ ತಳ್ಳುವರು

ಭಗವತ್ ಸೃಷ್ಟಿಯಲ್ಲಿ ಮಾನವ ಸೃಷ್ಟಿಯು ಮುಕುಟಮಣಿ ಎನ್ನುತ್ತಾರೆ. ವಿಕಾಸ ಕ್ರಮದಲ್ಲಿ ಜೀವ ಜಗತ್ತು, ಈಶ್ವರ ಇವರುಗಳಿಗಿರುವ ಸಂಬಂಧದ ಮಧ್ಯ ಬಿಂದು ಅವನು. ಜೀವಕ್ಕೂ ಈಶ್ವರನಿಗೂ ಒಂದು ಸೇತುವೆ. ಮಾನವನ ಮುಂದಿನ ಹೆಜ್ಜೆ ಭಗವದಭಿಮುಖವಾಗಿ ಸಾಗಬೇಕು. ಈಗ ಇರುವ ಮಾನವ ಹೊಸ ತಳಿಯ, ಹೊಸ ಮನುಷ್ಯ–ಅರ್ಥಾತ್ ಅತಿ ಮಾನವನಾಗಿ ವಿಕಾಸವಾಗಬೇಕು. ಇದು ಭಗವದಿಚ್ಛೆ. ಈ ಇಚ್ಛೆಯನ್ನು ಈಡೇರಿಸುವ ಉಪಕರಣವಾಗಬೇಕು, ಇಂದಿನ ಮಾನವರ ಮುಂದಾಳುಗಳು.

ಭರತ ಖಂಡ ಮಾನವನನ್ನು ಅತಿ ಮಾನವನನ್ನಾಗಿ ಮಾಡಲು ಬೇಕಾದ ಆಧ್ಯಾತ್ಮಿಕ ಶಕ್ತಿ, ಧಾರ್ಮಿಕ ಪ್ರವೃತ್ತಿ, ಸಾಂಸ್ಕೃತಿಕ ಔನ್ನತ್ಯ ಪರಂಪರೆ ಹೊಂದಿದೆ. ಇದರಲ್ಲಿ ದ್ವೇಷ, ಅಸೂಯೆ, ಮತ್ಸರ ಮುಂತಾದ ರಾಕ್ಷಸೀ ದುರ್ಗುಣಗಳಿಲ್ಲದ ಪರಮತ ಸಹಿಷ್ಣುತೆ ಸರ್ವ ಸಮಾನತೆಯ ದೃಷ್ಟಿ ಅಂತರ್ಗತವಾಗಿವೆ. ಆದರೆ ಮೋದಿಯು ಗುಜರಾತ್‌ನಲ್ಲಿ ಮಾಡಿದ ಆಡಳಿತ ವೈಖರಿಯನ್ನು ಈಗ ಪ್ರಧಾನಿ ಅಭ್ಯರ್ಥಿಯಾಗಿ ಆಡುತ್ತಿರುವ ಮಾತು, ಅವರ ಧ್ಯೇಯ, ಧೋರಣೆ ಎಲ್ಲವೂ ದ್ವೇಷ, ಮತ್ಸರ, ಅಸಹನೆ ಇತ್ಯಾದಿ ಅಮಾನುಷ ಗುಣಗಳಿಂದಲೇ ಕೂಡಿದೆ. ಗುಜರಾತಿನಲ್ಲಿ ಮಾಡಿರುವ ಅಭಿವೃದ್ಧಿಯಂತೆ ಇಡೀ ದೇಶದಲ್ಲೆಲ್ಲ ಅಭಿವೃದ್ಧಿಯನ್ನು ಸಾಧಿಸುವುದಾಗಿ ಹೇಳುತ್ತಾರೆ. ಇದುವರೆಗೆ ಅವರು ಗುಜರಾತಿನಲ್ಲಿ ಮಾಡಿರುವ ಅಭಿವೃದ್ಧಿಯ ಧೋರಣೆ ಬಹುಕೋಟಿ ಉದ್ಯಮಿಗಳಿಗೆ ಅನುಕೂಲತೆಗಳನ್ನು ಒದಗಿಸುವುದೇ ಆಗಿದೆ. ಬಡವರ ಭೂಮಿಯನ್ನು ಬಲಾತ್ಕಾರವಾಗಿ ಕಿತ್ತುಕೊಂಡು(ಅದಾನಿ ಎಂಭ ಉದ್ಯಮಿಗೆ ಒಂದು ರೂ.ಗೆ ಒಂದು ಚ.ಮೀ. ಭೂಮಿ ನೀಡಲಾಗಿದೆ) ಶ್ರೀಮಂತರ ಉದ್ಧಾರದ ಗೋಪುರವನ್ನು ಕಟ್ಟುವುದೇ ಆಗಿದೆ. ಇಂತಹವರು ಈ ದೇಶವನ್ನು ಶ್ರೀಮಂತರ ಮತ್ತು ಪರದೇಶದ ಪದತಳದಲ್ಲಿ ಹಾಕುತ್ತಾರೆ.



ಗೋಧ್ರಾ ಹತ್ಯಾಕಾಂಡದಲ್ಲಿನ ಮೋದಿ ಪಾತ್ರವನ್ನು ತಿಳಿಯಲು ನ್ಯಾ. ವಿ.ಆರ್. ಕೃಷ್ಣ ಅಯ್ಯರ್ ನೇತೃತ್ವದ ಸರ್ಕಾರೇತರ ಆಯೋಗ ಸಿದ್ಧಪಡಿಸಿರುವ Crime against Humanity ಎಂಬ ವರದಿಯನ್ನು ಓದಬೇಕು. ಈ ಕಾರಣದಿಂದಲೇ ಅಮೆರಿಕಾ ಸರ್ಕಾರ ಮೋದಿಗೆ ಪಾಸ್‌ಪೋರ್ಟನ್ನು ನಿರಾಕರಿಸಿರುವುದು.

ಭಾರತವು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗಾಗಿ ವಿದೇಶಾಂಗ ನೀತಿಯನ್ನೂ, ಪಂಚಶೀಲ ಸೂತ್ರವನ್ನು ರೂಪಿಸಿಕೊಂಡಿದೆ. ಆದರೆ ಮೋದಿ ಈಗಾಗಲೇ ಪಾಕಿಸ್ತಾನ, ಬಂಗ್ಲಾದೇಶ ಮುಂತಾದ ದೇಶಗಳೊಡನೆ ಈಗ ಭಾರತ ಅನುಸರಿಸುತ್ತಿರುವ ನೀತಿಯನ್ನು ತಿರಸ್ಕರಿಸಿ ಮಾತನಾಡುತ್ತಿದ್ದಾರೆ. ಅವರೇನಾದರೂ ಪ್ರಧಾನಿಯಾದರೆ ಭಾರತವನ್ನು ಜಾಗತಿಕ ಯುದ್ಧದ ಅಗ್ನಿಕುಂಡಕ್ಕೆ ತಳ್ಳುತ್ತಾರೆ.

ಈ ಎಲ್ಲ ಕಾರಣಗಳಿಂದಾಗಿ ಮೋದಿ ನಮ್ಮ ದೇಶದ ಪ್ರಧಾನಮಂತ್ರಿಯಾಗುವುದನ್ನು ನಾನು ಬಯಸುವುದಿಲ್ಲ.

**–ಕೋ. ಚೆನ್ನಬಸಪ್ಪ,**
ನಿವೃತ್ತ ನ್ಯಾಯಾಧೀಶರು ಹಾಗೂ ಲೇಖಕರು, ಬೆಂಗಳೂರು

## ಬಹಳ ಜಾಣ, ಹಿಟ್ಲರ್‌ನಂತೆ!



**ಜಾಣ** ಕೋಮುವಾದಿ; ಅಂದರೆ ತನ್ನ ಕಡೆಯವರ ಕುಕೃತ್ಯಗಳನ್ನು ಮುಚ್ಚಿಡಲು ೧೯೩೦ರ ದಶಕದ ಹಿಟ್ಲರ್‌ನಂತೆ ಸರ್ಕಾರದ ಎಲ್ಲ ಶಕ್ತಿಗಳನ್ನು ಚೆನ್ನಾಗಿ ಉಪಯೋಗಿಸಿಕೊಂಡವನು. ಉದಾಹರಣೆಗೆ ಹೇಳುವುದಾದರೆ,:ಹಾನಿ,ನೋವು, ಅತ್ಯಾಚಾರಕ್ಕೊಳಗಾದವರು ಪೋಲೀಸ್ ಸ್ಟೇಷನ್‌ಗೆ ಹೋದರೆ ಅಲ್ಲಿ ಎಫ್‌ಐಆರ್ ಕೊಡದಂತೆ ಮಾಡಿದಾತ. ಆ ದೆಸೆಯಿಂದ ಕೋರ್ಟ್‌ಗಳಿಗೆ ರುಜುವಾತು ಸಿಗದಂತೆ ಮಾಡಿದಾತ. ಅದಕ್ಕೇ ಆತ ಬಹಳ ಜಾಣ, ಹಿಟ್ಲರ್‌ನ ಹಾಗೆ.

ತನ್ನ ಧ್ಯೇಯ ಧೋರಣೆಗಳ ಬಗ್ಗೆ ಮಾತಾಡುವುದನ್ನಾಗಲಿ, ಚರ್ಚೆ ಮಾಡುವುದನ್ನಾಗಲಿ ನಿರಾಕರಿಸಿದಾತ. ಬೇಕಿದ್ದರೆ ಪತ್ರಕರ್ತರನ್ನು ಕೇಳಿ.

ಈತ ಹೇಳುವ ಡೆವಲಪ್‌ಮೆಂಟ್ ಯಾರದ್ದು? ಯಾರಿಗಾಗಿ?

ಈತ ಕ್ರೂರ ಅಹಂಭಾವದಲ್ಲಿಯೇ ಮಗ್ನ. ತನ್ನ ಹಿಂದಿನ ಬಡತನವನ್ನು ಈಗಿನ ಸ್ವ ವಿಜೃಂಭಣೆಗಾಗಿ ಉಪಯೋಗಿಸುತ್ತಾನೆ. ಕೊಚ್ಚುತ್ತ ಮೆರೆಯುತ್ತಿದ್ದಾನೆ.

ಈತ ಅವಿದ್ಯಾವಂತ. ಆದ್ದರಿಂದ ಧರ್ಮದ ಅಥವಾ ಪ್ರಜಾಪ್ರಭುತ್ವದ ನೈತಿಕತೆಯ ಸೂಕ್ಷ್ಮಾತಿಸೂಕ್ಷ್ಮಗಳ ಅರಿವೇ ಇಲ್ಲ. ಹಾಗಾಗಿ ಈತನಿಗೆ ತಳಮಟ್ಟದ ಮಾತು, ವಿಚಾರಗಳನ್ನು ಬಿಟ್ಟರೆ (ಮುಯ್ಯಿಗೆ ಮುಯ್ಯಿ, ಕಣ್ಣಿಗೆ ಕಣ್ಣು ಮಟ್ಟದ) ಬೇರೆ ಏನು ಹೇಳಿದರೂ ಗೊತ್ತಾಗುವುದಿಲ್ಲ. ತಿಳಿದುಕೊಳ್ಳಬೇಕೆಂಬ ಆಸೆಯೂ ಇಲ್ಲ; ವಿನಮ್ರತೆ ಮೊದಲೇ ಇಲ್ಲ.

**–ಪಂಡಿತ್ ರಾಜೀವ್ ತಾರಾನಾಥ್,**
ಖ್ಯಾತ ಸರೋದ್ ವಾದಕರು, ಮೈಸೂರು

## ಅಪಾಯಕಾರಿ ನಾಯಕನಂತೆ ಕಾಣುತ್ತಿದ್ದಾರೆ

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ರಾಜಕಾರಣದ ತತ್ವಗಳನ್ನು ತಿರಸ್ಕರಿಸಿರುವ ಮತ್ತು ದೇಶ ನಿರ್ಮಾಣದ ಅವರ ಕನಸನ್ನು ನುಚ್ಚು ನೂರಾಗಿಸಿರುವ ಇಂದಿನ ಎಲ್ಲ ರಾಜಕೀಯ ಪಕ್ಷಗಳು ಮತ್ತು ಅವುಗಳ ಮುಖಂಡರೆಲ್ಲರೂ ತಿರಸ್ಕಾರಕ್ಕೆ ಪಾತ್ರರಾಗಿರುವ ಸನ್ನಿವೇಶದಲ್ಲಿ ನರೇಂದ್ರ ಮೋದಿ ಪ್ರಧಾನಮಂತ್ರಿಯಾಗುವುದು ಏಕೆ ಬೇಡ ಎಂಬ ಪ್ರಶ್ನೆಗೆ ಪ್ರತ್ಯೇಕವಾಗಿ ಉತ್ತರಕೊಡುವುದು ಕಷ್ಟ.

ಆದರೆ... ನರೇಂದ್ರ ಮೋದಿ ಹಿಂದುತ್ವದೊಂದಿಗೆ ಪೂರ್ಣ ಪ್ರಮಾಣದಲ್ಲಿ ಗುರುತಿಸಿಕೊಳ್ಳಲು ಹೆದರುತ್ತಿದ್ದಾರೆ. ಮನದ ಆಳದಲ್ಲಿ ಹಿಂದುತ್ವದ ಬಗ್ಗೆ ಅಪಾರ ಪ್ರೀತಿ ಇದ್ದರೂ ಮತ ಬ್ಯಾಂಕಿನ ದೊಡ್ಡ ಆಸ್ತಿಯಾದ ಮುಸಲ್ಮಾನರನ್ನು ಓಲೈಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ರೀತಿ ಅವರು ಆಷಾಢಭೂತಿತನವನ್ನು ಪ್ರದರ್ಶಿಸುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಹಾಗೂ ಕಾರ್ಪೊರೇಟ್ ಸಂಸ್ಥೆಗಳಿಗೆ ಮಣೆಹಾಕುತ್ತಿದ್ದಾರೆ. ಗುಜರಾತ್ ಮಾದರಿ ಅಭಿವೃದ್ಧಿ ಎಂಬುದು ಯಾವ ರೀತಿ ಮತ್ತು ಹೇಗೆ ಎಂಬುದು ಬಹುಜನ ಮತದಾರರಿಗೆ ಗೊತ್ತಿಲ್ಲ. ಅದೇ ಮಾದರಿಯ ಅಭಿವೃದ್ಧಿಯನ್ನು ದೇಶಕ್ಕೆಲ್ಲಾ ಅನ್ವಯಿಸಲಾಗುವುದೆಂದು ಹೇಳುತ್ತಿದ್ದಾರೆ. ಆದರೆ 'ಅದನ್ನು ಕಣ್ಣಾರೆ ಕಂಡಿರುವ ಕೇಜ್ರೀವಾಲ್ ಆ ಅಭಿವೃದ್ಧಿ ಕೇವಲ ಶ್ರೀಮಂತರ ಅಭಿವೃದ್ಧಿ; ರೈತರ ಸಮಾಧಿಯ ಮೇಲಿನ ಅಭಿವೃದ್ಧಿ ಎಂದು ಹೇಳಿದ್ದಾರೆ. ಆದ್ದರಿಂದ ಮೋದಿ ಓರ್ವ ಅಪಾಯಕಾರಿ ನಾಯಕನಂತೆ ಕಾಣುತ್ತಿದ್ದಾರೆ.



ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿಯನ್ನೇ ಆದರ್ಶವೆಂದು ಭಾವಿಸಿರುವ ಮೋದಿಯ ಆರ್ಥಿಕ, ಕೈಗಾರಿಕಾ ನೀತಿಗಳನ್ನು ಸ್ವೀಕರಿಸುವುದನ್ನು ತಪ್ಪಿಸುವುದು ಅನಿವಾರ್ಯವಾಗಿದೆ.

ಎಲ್ಲರನ್ನೂ ಮತ್ತು ಎಲ್ಲವನ್ನೂ ಒಳಗೊಂಡ ಪರಿಸರ ಸ್ನೇಹಿ ಅಭಿವೃದ್ಧಿಯ ಮಾತನ್ನು ಯಾವ ಪಕ್ಷಗಳೂ ಹೇಳುತ್ತಿಲ್ಲವಾದ್ದರಿಂದ ಮೋದಿಯನ್ನೂ ಒಳಗೊಂಡಂತೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರನ್ನು ಸರ್ವೋದಯ ಸಿದ್ಧಾಂತದ ಹಿನ್ನೆಲೆಯಲ್ಲಿ ತಿರಸ್ಕರಿಸುವ ಮೂಲಕ ಹೊಸ ರೀತಿಯ ರಾಜಕಾರಣವನ್ನು ಪ್ರಾರಂಭಿಸಬೇಕಿದೆ.

**–ಸುರೇಂದ್ರ ಕೌಲಗಿ**
, ಸರ್ವೋದಯ ಮುಖಂಡರು, ಮೇಲುಕೋಟೆ

## 'ತಾನು ಮತ್ತು ತಾನು ಮಾತ್ರ' ಎಂಬ ಧೋರಣೆ

**ಭಾ**ರತ ಅಲ್ಪಸ್ವಲ್ಪವಾದರೂ ಪ್ರಕಾಶಿಸುತ್ತಿದ್ದರೆ, ಅದಕ್ಕೆ ಕಾರಣ, ಇದರಲ್ಲಿರುವ ಬಹುತ್ವ. ಜಾತಿ-ಮತ-ಭಾಷೆ-ಧಾರ್ಮಿಕ ಸಂಪ್ರದಾಯಗಳು-ಆಚಾರ ವಿಚಾರ, ಪ್ರಾದೇಶಿಕ ವಿಶಿಷ್ಟತೆಗಳು ಭಾರತವನ್ನು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಶ್ರೀಮಂತವಾಗಿಸಿದೆ. ಇವುಗಳಲ್ಲಿ ಯಾವುದನ್ನೇ ಮಾನ್ಯ ಮಾಡದಿದ್ದರೂ, ದ್ವಿತೀಯ ದರ್ಜೆಗಿಳಿಸಿದರೂ ಭಾರತ ಪ್ರಕಾಶಿಸಲಾರದು. ನರೇಂದ್ರ ಮೋದಿಯವರಲ್ಲಿ ಈ ಎಚ್ಚರ ಕಾಣಿಸುತ್ತಿಲ್ಲ. ಎಲ್ಲವನ್ನೂ ಶಕ್ತಿಯಿಂದ ದಬ್ಬಾಳಿಕೆಯಿಂದ ನಿಭಾಯಿಸಬಹುದು ಎನ್ನುವ ಹುಂಬತನ ಕಾಣುತ್ತದೆ. ಪ್ರಧಾನಿ ಪಟ್ಟಕ್ಕೆ ಅವರು ಸೂಕ್ತ ಅಭ್ಯರ್ಥಿಯಲ್ಲ ಎನ್ನಿಸಲು ಇದೂ ಒಂದು ಕಾರಣ.

ಒಂದು ಆಡಳಿತ ಯಂತ್ರಕ್ಕೆ ಇರಬೇಕಾದ ಪಾರದರ್ಶಕತೆ ಹಾಗೂ ಸಹನೆ ಅವರ ನೇತೃತ್ವದ ಗುಜರಾತ್ ಸರ್ಕಾರದಲ್ಲಿ ಕಂಡು ಬಂದಿಲ್ಲ. ಟೀಕಾಕಾರರನ್ನು ಭೀತಿಯ ನೆರಳಿನಲ್ಲಿಡುವುದು, ಟೀಕೆಗಳಿಗೆ ಕಿವಿಗೊಡದಿರುವುದು, ಸಾತ್ವಿಕವಾಗಿ, ಸಮಂಜಸವಾಗಿ ಉತ್ತರಿಸದಿರುವುದು- ಒಬ್ಬ ನೇತಾರ ಅಸಹನೆ ಬೆಳೆಸಿಕೊಳ್ಳುತ್ತಾ ಜನ ವಿರೋಧಿ/ಸಮುದಾಯ ವಿರೋಧಿ ಆಗುತ್ತಿರುವ ಲಕ್ಷಣ. ಭಿನ್ನಾಭಿಪ್ರಾಯಗಳಿಗೆ ಅವಕಾಶ ಕೊಡದ ನೇತಾರನಿಗೆ ಅಧಿಕಾರ ಮತ್ತು ಸಾಂಸ್ಥಿಕ ಬಲ ಎರಡೂ ಸಿಕ್ಕರೆ ಆತ ಕ್ಷಣ ಮಾತ್ರದಲ್ಲಿ ಸರ್ವಾಧಿಕಾರಿ ಮನೋಭಾವ ಬೆಳೆಸಿಕೊಳ್ಳುತ್ತಾನೆ. ಮೋದಿಯವರಲ್ಲಿ ಈ ಅಪಾಯವಿದೆ.



ಸರ್ವೋದಯ ನಮ್ಮ ಮಂತ್ರವಾಗಬೇಕಿತ್ತು. ಮೋದಿಯ ಅಭಿವೃದ್ಧಿಯ ಜಪದಲ್ಲಿ ಸಮಾಜದ ಮೇಲ್ವರ್ಗದ ಬಗ್ಗೆ ಮಾತ್ರ ಪದೇ ಪದೇ ಪ್ರಸ್ತಾಪ ಇರುತ್ತದೆ. ಇದು ಆತಂಕಕಾರಿ.

ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರಾಜತಂತ್ರ ನಿರೂಪಿಸುತ್ತಿದ್ದ ಕಾಲವೊಂದಿತ್ತು. ಅದು ಹೋಗಿ ತಮ್ಮ ಪಕ್ಷವನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕಾಲ ಬಂತು. ಮೋದಿಯವರ ಇತ್ತೀಚಿನ ನಡವಳಿಕೆ ಗಮನಿಸಿದರೆ ಅವರು ಸ್ವತಃ ಭಾಜಪವನ್ನೂ ಉಪೇಕ್ಷಿಸುತ್ತಿರುವುದು ಕಾಣಿಸುತ್ತಿದೆ. 'ತಾನು ಮತ್ತು ತಾನು ಮಾತ್ರ' ಎನ್ನುವ ಧೋರಣೆ ಆತ್ಮಹತ್ಯಾಕಾರಿ. ಈ ಕಾರಣಗಳಿಂದ ನಾನು ಮೋದಿ ಪ್ರಧಾನಿಯಾಗಬಾರದೆಂದು ಅಭಿಪ್ರಾಯಪಡುತ್ತೇನೆ.

**-ಗಿರೀಶ್ ಕಾಸರವಳ್ಳಿ,**
ಖ್ಯಾತ ಚಲನಚಿತ್ರ ನಿರ್ದೇಶಕರು, ಬೆಂಗಳೂರು

## ಅಪಾಯಕಾರಿಯಾದ ಶ್ರೇಷ್ಠತೆಯ ವ್ಯಸನ



**ನ**ನಗಿನ್ನೂ ನೆನಪಿದೆ. **ಅ**ದು 1977: ಚಿಕ್ಕಮಗಳೂರಿನಲ್ಲಿ ಮರುಚುನಾವಣೆ ನಡೆಯುತ್ತಿತ್ತು. ಕಾಂಗ್ರೆಸ್ ಪಕ್ಷದಿಂದ ಶ್ರೀಮತಿ ಇಂದಿರಾಗಾಂಧಿಯವರು ಚುನಾವಣಾ ಅಭ್ಯರ್ಥಿಯಾಗಿ ನಿಂತಿದ್ದರು. ಅಂದು ನಾವೆಲ್ಲರೂ-ಆರೆಸ್ಸೆಸ್ಸಿನವರೂ ಸೇರಿದಂತೆ, ಆಕೆಯನ್ನು ಸೋಲಿಸಲೆಂದು ಹೋರಾಡಿದ್ದೆವು. ಈ ದೇಶದ ಪ್ರಧಾನಿಯಾಗಿ ಶ್ರೀಮತಿ ಇಂದಿರಾ ಗಾಂಧಿ ಸರ್ವಾಧಿಕಾರಿ ಪ್ರವೃತ್ತಿಯನ್ನು ತೋರಿಸಿದ್ದರು ಎಂಬ ಕಾರಣಕ್ಕಾಗಿ ಹಾಗೆ ಮಾಡಿದ್ದೆವು. ಅಂದು ನಮ್ಮೊಟ್ಟಿಗೆ ಕೈಜೋಡಿಸಿ ಸರ್ವಾಧಿಕಾರಿ ಪ್ರವೃತ್ತಿಯ ವಿರುದ್ಧ ಹೋರಾಡಿದ್ದ ಆರೆಸ್ಸೆಸ್ ಇಂದು ಸರ್ವಾಧಿಕಾರದ ಗುಣಗಾನ ಮಾಡುತ್ತಿದೆ. ವಿಪರ್ಯಾಸವಲ್ಲವೆ? ಎಷ್ಟು ಬೇಗ ನಾವು ಚರಿತ್ರೆಯನ್ನು ಮರೆತುಬಿಡುತ್ತೇವೆ!

ಆರೆಸ್ಸೆಸ್ಸಿನ ರಾಜಕೀಯ ಹಸ್ತವಾದ ಬಿಜೆಪಿ, ನರೇಂದ್ರ ಮೋದಿಯವರನ್ನು ಭಾರತದ ಭಾವಿ ಪ್ರಧಾನಮಂತ್ರಿಯೆಂದು ಘೋಷಿಸಿದೆ. ಮೋದಿಯವರ ಪರವಾಗಿ ಬಿಜೆಪಿ ಬಳಸುತ್ತಿರುವ ಪ್ರಮುಖ ಸ್ಲೋಗನ್ ಈ ರೀತಿಯಲ್ಲಿದೆ: ಒಂದು ಲಕ್ಷ ಅದಕ್ಷರಿದ್ದರೇನಂತೆ, ಒಬ್ಬ ದಕ್ಷನಾಯಕ ಬೇಕು ಭಾರತ ದೇಶಕ್ಕೆ! ಹಿಟ್ಲರನೂ ಹಾಗೆಯೇ ಹೇಳಿದ್ದ; ಜನರು ಮೂಲತಃ ಅದಕ್ಷರು, ಅವರನ್ನು ಅಭಿವೃದ್ಧಿಯ ಹಾದಿಯಲ್ಲಿ ಕೊಂಡೊಯ್ಯಬೇಕೆಂದರೆ ಒಬ್ಬ ದಕ್ಷನಾಯಕ ಬೇಕೇ ಬೇಕು ಎಂದೇ ಫ್ಯಾಸಿಸ್ಟರು ನಂಬಿದ್ದರು. ಭಾರತದ ಇಂದಿನ ಮಧ್ಯಮವರ್ಗ ಕೂಡ ಹಾಗೆ ನಂಬಿದೆ; ಸರ್ವಾಧಿಕಾರಿಯಾದ ನಾಯಕ ಸರ್ವಶ್ರೇಷ್ಠನಾದವನು ಸರ್ವಜ್ಞನಾದವನು ಹಾಗೂ ಸರ್ವಶಕ್ತನಾದವನು ಆಗಿರುತ್ತಾನೆ ಎಂದೇ ಭಾರತೀಯ ಮಧ್ಯಮ ವರ್ಗ ನಂಬತೊಡಗಿದೆ. ನಾನು ಸರ್ವಾಧಿಕಾರವನ್ನು ಒಪ್ಪಲಾರೆ. ಪ್ರಾಯಶಃ ಅನೇಕ ಆರೆಸ್ಸೆಸ್ ನಾಯಕರೂ ಒಪ್ಪಲಿಕ್ಕಿಲ್ಲ. ಇಲ್ಲದಿದ್ದರೆ ಬಿಜೆಪಿಯ ಎಲ್.ಕೆ. ಅಡ್ವಾಣಿ, ಮುರುಳಿ ಮನೋಹರ ಜೋಶಿ, ಸುಷ್ಮಾ ಸ್ವರಾಜ್ ಇತ್ಯಾದಿ ನಾಯಕರ ಇರುಸು ಮುರುಸನ್ನು ಮತ್ತೆ ಹೇಗೆ ಅರ್ಥೈಸುತ್ತೀರಿ? ಬಿಜೆಪಿಯ ಆಂತರಿಕ ಆತಂಕಗಳು ಅದೇನೇ ಇರಲಿ, ಲಕ್ಷ ಲಕ್ಷ ಜನರು ಅದಕ್ಷರು ಎಂಬ ಮಾತೇ ಅಪಕ್ವವಾದದ್ದು ಹಾಗೂ ಅಪಾಯಕಾರಿಯಾದದ್ದು. ಇಂತಹ ವಿಚಾರಗಳನ್ನು ಕೆ.ವಿ.ಸುಬ್ಬಣ್ಣನವರು ಶ್ರೇಷ್ಠತೆಯ ವ್ಯಸನ ಎಂದು ಕರೆದಿದ್ದರು. ಹೌದು ಶ್ರೇಷ್ಠತೆಯೆಂಬುದು ಒಂದು ವ್ಯಸನವೇ ಸರಿ, ಮಾತ್ರವಲ್ಲ ಶ್ರೇಷ್ಠತೆಯೆಂಬುದು ಮೂಲತಃ ಬ್ರಾಹ್ಮಣ ವ್ಯಸನ. ಈಗ ಅದು ಹೆಚ್ಚು ವಿಸ್ತಾರಗೊಂಡು ನವ ಬ್ರಾಹ್ಮಣ ವ್ಯಸನವಾಗಿರುವುದು ಹೊಸ ಸಂಗತಿಯಷ್ಟೆ.

ಶ್ರೇಷ್ಠತೆಯ ವ್ಯಸನಕ್ಕೆ ಎರಡು ಮಗ್ಗುಲುಗಳಿವೆ; ಒಂದು ಮಗ್ಗುಲು ಅನಿರ್ಬಂಧಿತ ಅಭಿವೃದ್ಧಿಯ ಆಶಯವಾದರೆ, ಮತ್ತೊಂದು ಮಗ್ಗುಲು ಭ್ರಷ್ಟಾಚಾರದ ಬಗೆಗಿನ ಅತಿಯಾದ ಆತಂಕ. ನಮ್ಮ ಇಂದಿನ ರಾಜಕೀಯವು ಈ ಎರಡು ತುದಿಗಳ ನಡುವೆ ತೊನೆಯುತ್ತ, ಮಗ್ಗುಲು ಬದಲಿಸುತ್ತ, ತೀವ್ರ ಚಡಪಡಿಕೆ ಅನುಭವಿಸುತ್ತ ನಡೆದಿದೆ. ಮಾತ್ರವಲ್ಲ ಮಿಕ್ಕೆಲ್ಲ ಸಂಗತಿಗಳನ್ನೂ ಗೌಣವಾಗಿಸಲಾಗಿದೆ. ಸಮಾನತೆ, ಸಾಮಾಜಿಕ ನ್ಯಾಯ, ಸರಳ ಬದುಕು, ಹಿತಮಿತವಾದ ಬೆಳವಣಿಗೆ, ಪರಿಸರ ಪ್ರಜ್ಞೆ ಇತ್ಯಾದಿ ವಿಷಯಗಳಿಂದ ಜನರ ಗಮನವನ್ನು ಬೇಕೆಂದೇ ಬೇರೆಡೆಗೆ ಸೆಳೆಯಲಾಗುತ್ತಿದೆ.

ಇತ್ತ ಕಾಂಗ್ರೆಸ್ ಪಕ್ಷ ದಣಿದಿದೆ. ಮತ್ತಾರಾದರೂ ಅಧಿಕಾರಕ್ಕೆ ಬರಬೇಕು ಎಂದು ಜನ ಬಯಸತೊಡಗಿದ್ದಾರೆ. ಇದು ಬಿಜೆಪಿಗೆ ತಿಳಿದಿದೆ. ಆದರೆ ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ. ಸುಷ್ಮಾ ಸ್ವರಾಜ್, ಅಡ್ವಾಣಿ, ಮುರುಳಿ ಮನೋಹರ ಜೋಷಿ, ಜಸ್ವಂತ್ ಸಿಂಗ್ ಇತ್ಯಾದಿ ಹಿರಿಯ ನಾಯಕರನ್ನು ಕಡೆಗಣಿಸಿದರೆ ಬಿಜೆಪಿ ಬಿಜೆಪಿಯಾಗಿ ಉಳಿದೀತೆ ಎಂಬ ಪ್ರಶ್ನೆ ಆ ಪಕ್ಷದ ಕಾರ್ಯಕರ್ತರನ್ನು ಗಾಢವಾಗಿ ಕಾಡುತ್ತಿದೆ. ಇಷ್ಟಕ್ಕೂ ನರೇಂದ್ರ ಮೋದಿಯವರ ಪರ ಪ್ರಚಾರ ಮಾಡುತ್ತಿರುವವರು ಬಿಜೆಪಿ ಕಾರ್ಯಕರ್ತರಲ್ಲ, ನಮೋ ಬ್ರಿಗೇಡ್ ಎಂಬ ಹೊಸದೊಂದು ಮುಖಹೀನ ಗುಂಪು. ಈ ಗುಂಪಿನ ಅನೇಕರು, ತಾವು ಬಿಜೆಪಿ ಪರವಾಗಿಲ್ಲ ನರೇಂದ್ರಮೋದಿಯವರ ಪರವಾಗಿದ್ದೇವೆ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದಾರೆ. ಇಲ್ಲೂ ಹಿಟ್ಲರನ ನೆನಪು ಕಾಡದೆ ಬಿಡುವುದಿಲ್ಲ. ಹಿಟ್ಲರನ ಪ್ರಚಾರ ಮಾಡಿದ್ದು ಸಹ ಇಂತಹದ್ದೇ ಒಂದು ಮುಖಹೀನ ಬ್ರಿಗೇಡ್. ಹಿಟ್ಲರನು ಅಧಿಕಾರಕ್ಕೆ ಬಂದ ನಂತರ ನರಮೇಧ ನಡೆಸಿದ್ದು ಸಹ ಇಂತಹದ್ದೇ ಒಂದು ಬ್ರಿಗೇಡ್. ನನಗೆ ನರೇಂದ್ರ ಮೋದಿಯವರಲ್ಲಿ ಸರ್ವಾಧಿಕಾರಿ ಪ್ರವೃತ್ತಿ ಕಾಣಿಸುತ್ತಿರುವುದು ಈ ಎಲ್ಲ ಬೆಳವಣಿಗೆಯ ಹಿನ್ನಲೆಯಲ್ಲಿ. ಆದರೂ ನನಗೊಂದು ಆಶಯವಿದೆ. ಈ ದೇಶದ ಮಧ್ಯಮ ವರ್ಗ ಗೆಲ್ಲಲಾರದು ಎಂದು ನಾನು ಬಲವಾಗಿ ಆಶಿಸುತ್ತೇನೆ. ನೀವೂ ಆಶಿಸಿ.

**-ಪ್ರಸನ್ನ,** ಹಿರಿಯ ರಂಗಕರ್ಮಿ
ಹಾಗೂ ಚರಕದ ಸಂಚಾಲಕರು, ಹೊನ್ನೇಸರ

## ಸಂಸತ್ ಭವನದೊಳಕ್ಕೆ ಗೋಡ್ಸೆಗಳು ಬಂದಾರು!

೧. **ಆ**ತ್ಮಸಾಕ್ಷಿಯನ್ನು ಸುಟ್ಟು ಬೂದಿಮಾಡಿ, ತಾನು ನಿರಪರಾಧಿ ಎಂಬುದಕ್ಕೆ ನ್ಯಾಯಾಲಯ, ಎಸ್.ಐ.ಟಿ. ತನಿಖಾ ಸಮಿತಿಗಳ ತೀರ್ಪುಗಳನ್ನು ಎಗ್ಗಿಲ್ಲದೆ ಪ್ರದರ್ಶಿಸುವ ಒಬ್ಬ ವ್ಯಕ್ತಿ ನಮ್ಮ ಜನನಾಯಕ ಎಂದು ಒಪ್ಪಿಕೊಳ್ಳಲು ತೃಣದಷ್ಟೂ ಮನಸ್ಸು ಒಪ್ಪುವುದಿಲ್ಲ. ಇಂಥ ಮನುಷ್ಯನಿಂದ 'ಹಿಂದುತ್ವ'ವಾದರೂ ಹೇಗೆ ಉದ್ಧಾರವಾಗುತ್ತದೆ ಎಂಬುದನ್ನು ಅವರ ಪಕ್ಷದ ಧುರೀಣರೇ ಹೇಳಬೇಕು.

೨. ಮಧ್ಯಾಹ್ನ ೩.೩೦ರ ಸಮಯಕ್ಕೆ ಮಾಜಿ ಸಂಸದ ಎಷಾನ್ ಜಾನ್ರಿಯವರ ಅಮಾನುಷ ಹತ್ಯೆಯ ವಿಷಯ ಮುಖ್ಯ ಮಂತ್ರಿಯಾಗಿದ್ದ ತನಗೆ ರಾತ್ರಿ ೮.೩೦ ರವರೆಗೆ ತಿಳಿದೇ ಇರಲಿಲ್ಲ ಎಂದು ವಿಚಾರಣಾ ಮಂಡಳಿಗಳೆದುರು ಎಗ್ಗಿಲ್ಲದೆ ಸುಳ್ಳು ಹೇಳುವ ಮನುಷ್ಯ ಈ ಮೋದಿ ಎಂದು ಮರೆಯದಿರೋಣ.

೩. ಎಲ್ಲ ಧರ್ಮಗಳ ಜನರಿರುವ ರಾಜ್ಯವೊಂದರ ಮುಖ್ಯ ಮಂತ್ರಿಯಾಗಿದ್ದೂ *'ಹಮ್ ಪಾಂಚ್, ಹಮಾರಾ ಪಚೀಸ್'* ಎಂದು ಮುಸಲ್ಮಾನರನ್ನು ಸಾರ್ವಜನಿಕವಾಗಿ ಹಂಗಿಸುವ ಅವಮಾನಿಸುವ ಮನುಷ್ಯನೊಬ್ಬ ಪ್ರಜಾತಂತ್ರಕ್ಕೆ ಒಂದು ಕಳಂಕಪ್ರಾಯವಷ್ಟೆ.

೪. ಆರ್.ಎಸ್.ಎಸ್. ಕಟ್ಟಾಳಾದ ಮೋದಿ ಗುರು ಗುರೂಜಿಯವರ ಹೆಣ್ಣು, ಮದುವೆ, ಗೃಹಸ್ಥಾಶ್ರಮಗಳ ಕುರಿತಾದ ಅಸಹ್ಯ ವ್ಯಾಖ್ಯಾನಗಳಿಗೆ ಮರುಳಾಗಿ ತಾನೇ ಮದುವೆಯಾದ ಹುಡುಗಿ (ಯಶೋದಾ ಬೆನ್) ಎಂಬ ಹೆಣ್ಣು ಮಗಳಿಗೆ ಕಾನೂನು ರೀತ್ಯಾ ವಿಚ್ಛೇದನವನ್ನು ನೀಡದೆ, ಆಕೆ ಈಗ ಶೌಚಾಲಯವೂ ಇಲ್ಲದ ಮನೆ ಎಂದು ಕರೆಯಲಾದ ಒಂದೇ ಕೋಣೆಯಲ್ಲಿ ವಾಸಿಸುವ ಸ್ಥಿತಿಗೆ ತಂದಿರುವ ಈ ಮಹಾನ್ ಪುರುಷ ಮೋದಿ ಎಂಬುದನ್ನು ಮರೆಯದಿರೋಣ.



೫. ಇನ್ನು ರಾಷ್ಟ್ರದಲ್ಲಿ ಅಭಿವೃದ್ಧಿ ಪಥದಲ್ಲಿ ನಡೆಸಿ ಗುಜರಾತಿನ ಅಸ್ಮಿತೆಯನ್ನು ಎತ್ತಿ ಹಿಡಿದು 'ಮಾದರಿ ರಾಜ್ಯ' ಎಂದು ಬೀಗುತ್ತಿರುವ ಮೋದಿಯವರ ಸಾಧನೆಯನ್ನು ನೋಡೋಣ. ಮೋದಿ ಪರ ಅಥವಾ ವಿರೋಧಿಗಳ ಅಂಕಿ ಅಂಶಗಳನ್ನು ಅತ್ತ ಸರಿಸೋಣ. ಕಳೆದ ೫೦ ವರ್ಷಗಳ ಭಾರತದ ಅಭಿವೃದ್ಧಿ ರಾಜಕಾರಣದ ವ್ಯಾಪಕ ಅಧ್ಯಯನ ಮಾಡಿರುವ ಸೈಮನ್ ಡೆನ್ಯೆರ್ ಎಂಬ ವಿದೇಶಿ ಪತ್ರಕರ್ತ ಬರೆದಿರುವ Rogue Elephant ಎಂಬ ಇತ್ತೀಚಿನ ಪುಸ್ತಕದಲ್ಲಿ ಮೋದಿ ಅಭಿವೃದ್ಧಿಗೆ ಕೊಟ್ಟಿರುವ ಅಂಕಗಳು ಹೀಗಿವೆ: ಸಂಪನ್ಮೂಲ: ೬/೩೦, ಆರೋಗ್ಯ: ೯/೩೦, ಕಾನೂನು ಸುವ್ಯವಸ್ಥೆ: ೧೧/೩೦, ಶಿಕ್ಷಣ : ೧೨/೩೦.

೬. ಮೋದಿ ವಿರುದ್ಧ ಟೀಕೆ ಎಂದರೆ ಗುಜರಾತಿನಲ್ಲಿ ದೇಶದ್ರೋಹವೆಂದೇ ಅರ್ಥ. ಇದು ಅಲ್ಪಸಂಖ್ಯಾತರ ಕುರಿತಾದದ್ದಷ್ಟೇ ಅಲ್ಲ, ಹಿಂದೂಗಳೂ ಸೇರಿದ ಹಾಗೆ–ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿಂದ ಹಿಡಿದು ಸಾಮಾನ್ಯ ನಾಗರೀಕರವರೆವಿಗೂ–ಸತ್ಯ, ಇಡೀ ದೇಶಕ್ಕೆ ಇದು ವ್ಯಾಪಿಸಬೇಕೆ?

೭. ವಾಜಪೇಯಿಯವರ ಕಾಲದಲ್ಲಿ ವಿ.ಡಿ. ಸಾವರ್ಕರ್ ಸಂಸತ್ ಒಳಗೆ ನುಸುಳಿ ಭವನದ ಗೋಡೆಗಳನ್ನು ಅಲಂಕರಿಸಿದ ಮೇಲೆ ಊಹಿಸಲು ಕಷ್ಟವಾಗುವಂಥ ನಮ್ಮ ದುರಾದೃಷ್ಟಕ್ಕೆ ಮೋದಿಯ ಕಾಲವೆಂಬುದು ಬಂದರೆ, ಗೋಳ್ವಲ್ಕರ್ ಮತ್ತೆ ಅವರ ಹಿಂದೆ ಹಿಂದೆ ಗೋಡ್ಸೆಗಳೂ ಗೋಡೆಯನ್ನಲಂಕರಿಸದಿರಲು ಸಾಧ್ಯವೆ?

**– ಪ್ರೊ. ಜಿ.ಕೆ.ಗೋವಿಂದ ರಾವ್,** ನಿವೃತ್ತ ಅಧ್ಯಾಪಕರು, ಚಿಂತಕರು ಮತ್ತು ಹಿರಿಯ ನಟರು, **ಬೆಂಗಳೂರು**

## ಅತಿ ದೊಡ್ಡ ಸಾಲಗಾರ ರಾಜ್ಯ ಗುಜರಾತ್



**ಮೋ**ದಿ ಪ್ರಧಾನಿಯಾದರೆ ದೇಶದಲ್ಲೆಲ್ಲಾ ಗುಜರಾತ್ ಅಭಿವೃದ್ಧಿ ಮಾದರಿಯನ್ನು ಅಳವಡಿಸುವುದಾಗಿ ಭಾ.ಜ.ಪ. ಸಾರುತ್ತಿದೆ. ಹಾಗಾದರೆ ಮೋದಿ ಅಭಿವೃದ್ಧಿ ಮಾದರಿಯೆಂದರೇನು ಮತ್ತು ಅದರ ಪರಿಣಾಮಗಳೇನು?

ಗುಜರಾತಿನಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆಯ ದರ ಗಣನೀಯವಾಗಿ ಏರಿದ್ದರೂ ಅದರ ಪ್ರಯೋಜನ ಕೆಲವೇ ಖಾಸಗಿ ಉದ್ಯೋಗಪತಿಗಳಿಗೆ ಮತ್ತು ಆಡಳಿತ ಪಕ್ಷದಲ್ಲಿರುವ ರಾಜಕಾರಣಿಗಳಿಗೆ ಆಗಿದೆ

ಇಂದು ಮೋದಿ ಅಧಿವೃದ್ಧಿ ಮಾದರಿಯ ಪರಿಣಾಮವಾಗಿ ಗುಜರಾತಿನ ಜನತೆ ದೇಶದಲ್ಲೇ ಅತೀ ಹೆಚ್ಚು ತಲಾ ಸಾಲವನ್ನು ಹೊರುವಂತಾಗಿದೆ. ೬ ಕೋಟಿ ಗುಜರಾತಿಗಳ ಪ್ರತಿಯೊಬ್ಬರ ತಲೆಯ ಮೇಲೂ ಇಂದು ರೂ ೨೩,೧೬೩ ಸಾಲದ ಹೊರೆ ಇದೆ.

ಇಲ್ಲಿ ಯಾರ ನಿಯಂತ್ರಣವೂ ಇಲ್ಲದೆ ಖಾಸಗಿ ಉದ್ಯಮಗಳು ಬಂಡವಾಳ ಹೂಡಬಹುದಾದ್ದರಿಂದ ಮತ್ತು ಹೆಚ್ಚು ಲಾಭಗಳಿಸುವುದೇ ಈ ಉದ್ಯಮಗಳ ಗುರಿಯಾಗಿರುವುದರಿಂದ, ಪರಿಸರ ಮಾಲಿನ್ಯದ ಸಮಸ್ಯೆ ಗುಜರಾತಿನಲ್ಲಿ ಹೆಚ್ಚಾಗಿದೆ. ಇದರಿಂದಾಗಿ ಅಲ್ಲಿನ ರೈತರ, ಮೀನುಗಾರರ, ಬಡವರ, ಮಕ್ಕಳು ಮತ್ತು ಮಹಿಳೆಯರ ಆರೋಗ್ಯ ಹದಗೆಡುತ್ತಿದ್ದು ಇವರು ಉಸಿರಾಟದ ತೊಂದರೆ, ಬೇಧಿ, ಕ್ಯಾನ್ಸರ್ ಮುಂತಾದ ರೋಗಗಳಿಂದ ಬಳಲುತ್ತಿದ್ದಾರೆ.

ಜಾಗತಿಕ ಹಸಿವಿನ ಸೂಚ್ಯಂಕ ವರದಿ ಪ್ರಕಾರ ಗುಜರಾತ್ ಭಾರತದ ೨೬ ದೊಡ್ಡ ರಾಜ್ಯಗಳ ಪೈಕಿ ೧೩ನೇ ಸ್ಥಾನದಲ್ಲಿದ್ದು, ಮಧ್ಯಪ್ರದೇಶ, ಜಾರ್ಖಂಡ್ ಮತ್ತು ಬಿಹಾರಗಳ ಜೊತೆಯಲ್ಲಿ 'ಅಪಾಯದ ಅಂಚಿನಲ್ಲಿರುವ' ರಾಜ್ಯವಾಗಿದೆ.

ಮೋದಿ ಆಡಳಿತಾವಧಿಯ ಗುಜರಾತಿನಲ್ಲಿ ಅಪೌಷ್ಟಿಕತೆ ಹೆಚ್ಚಿದ್ದು ಮೋದಿಯ ಪ್ರಕಾರ ಇದಕ್ಕೆ ಮೂಲ ಕಾರಣ ಬಹುತೇಕ ಗುಜರಾತಿಗಳು ಸಸ್ಯಾಹಾರಿಗಳಾಗಿರುವುದಂತೆ! ಈ ವಾದ ಸರಿಯಿದ್ದರೆ, ಗುಜರಾತಿನಲ್ಲಿರುವ ಆನೆ ಮತ್ತು ಗೂಳಿಗಳೂ ಅಪೌಷ್ಟಿಕತೆಯಿಂದ ಬಳಲುತ್ತಿರಬೇಕು! ಅಲ್ಲದೆ ಮೋದಿ ಹೇಳುವುದೇನೆಂದರೆ ಗುಜರಾತಿ ಮಹಿಳೆಯರ ಅಪೌಷ್ಟಿಕತೆಗೆ ಅವರ ಸೌಂದರ್ಯ ಪ್ರಜ್ಞೆಯೇ ಕಾರಣ!! ವಾಸ್ತವವೇನೆಂದರೆ ಗುಜರಾಥ್ ಆರೋಗ್ಯದ ಮೇಲೆ ಹಣ ಖರ್ಚು ಮಾಡುವ ವಿಷಯದಲ್ಲಿ ಎಲ್ಲ ರಾಜ್ಯಗಳಿಗಿಂತ ತಳಗಿನ ಸ್ಥಾನದಲ್ಲಿದೆ.

ಮೋದಿಯ ಹತ್ತು ವರ್ಷಗಳ ಅಭಿವೃದ್ಧಿ ಮಾದರಿಯ ಇನ್ನೊಂದು ಜ್ವಲಂತ ಕೊಡುಗೆಯೆಂದರೆ ಇಂದಿಗೂ ೬೫% ಗುಜರಾತಿಗಳು ತಮ್ಮ ಶೌಚ ಕಾರ್ಯಗಳನ್ನು ಮಾಡಲು ಬಯಲನ್ನೇ ಅವಲಂಬಿಸುತ್ತಾರೆ.

ಈ ರಾಜ್ಯದ ಒಟ್ಟು ೨೨೫ ಬ್ಲಾಕ್‌ಗಳ ಪೈಕಿ ೫೭ ಬ್ಲಾಕ್‌ಗಳಲ್ಲಿ ವಿದ್ಯುತ್ತೇ ಬಂದಿಲ್ಲ! ಆದರೂ ರಾಜ್ಯಾದ್ಯಂತ ೨೪ ತಾಸುಗಳ ವಿದ್ಯುತ್ ಪೂರೈಕೆಯ ಬೊಬ್ಬೆ ಹೊಡೆಯಲಾಗುತ್ತಿದೆ.

ಗುಜರಾತಿನಲ್ಲಿ ರೈತರು ಅತ್ಯಂತ ದಾರುಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅಂಬಾನಿ, ಅದಾನಿಗಳು ಮತ್ತು ರಾಜಕಾರಣಿಗಳು ರೈತರ ಭೂ ಕಬಳಿಸಿ ರೈತರನ್ನು ಬಡತನಕ್ಕೆ ತಳ್ಳುತ್ತಿದ್ದಾರೆ. ಕಳೆದ ಹತ್ತು ವರ್ಷಗಳ ಮೋದಿ ಆಳ್ವಿಕೆಯ ಕಾಲದಲ್ಲಿ ಸುಮಾರು ೮೦೦ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ೪ ಲಕ್ಷ ರೈತರಿಗೆ ಇನ್ನೂ ವಿದ್ಯುತ್ತಿನ ಪೂರೈಕೆಯಾಗಿಲ್ಲ. ಸುಮಾರು ೬೦,೦೦೦ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮೋದಿ ಆಡಳಿತಾವಧಿಯಲ್ಲಿ ಮುಚ್ಚಲ್ಪಟ್ಟಿದ್ದು ಗುಜರಾತಿನಲ್ಲಿ ನಿರುದ್ಯೋಗ ಸಮಸ್ಯೆಯೇ ಇಲ್ಲ ಎಂಬುದು ಶುದ್ಧ ಸುಳ್ಳಾಗಿದೆ.

ಮತದಾರರೇ ಜೋಕೆ! ಮೋದಿ ಪ್ರಧಾನಿಯಾಗಲು ಮತ ಹಾಕಬೇಡಿ. ಆತ ಇಡೀ ಭಾರತವನ್ನು ಗುಜರಾತ್ ಮಾಡಲು ಬಿಡಬೇಡಿ.

**–ಡಾ. ಎಚ್.ಎ. ಶಂಕರನಾರಾಯಣ.**
ಮ್ಯಾನೇಜ್‌ಮೆಂಟ್ ತಜ್ಞರು, ಬೆಂಗಳೂರು

## ಮನುಷ್ಯನನ್ನು ಪ್ರಾಣಿ ನೆಲೆಗೆ ಇಳಿಸುವ ಪ್ರಯತ್ನ

೧. ಇದು ಕೇವಲ ಒಬ್ಬ ವ್ಯಕ್ತಿಯ ಪ್ರಶ್ನೆಯಲ್ಲ. ಅವರು ಪ್ರತಿನಿಧಿಸುವ ಪಕ್ಷ, ಆ ಪಕ್ಷದೊಳಗೆ ಅವರು ತಳೆದಿರುವ ನಿಲುವುಗಳು ಮತ್ತು ಅವುಗಳನ್ನು ಜಾರಿಗೆ ತರಲು ಅವರು ಬಳಸುತ್ತಿರುವ ಚಾಣಾಕ್ಷವೂ ನಿರ್ಲಜ್ಜವೂ ಆದ ವಿಧಾನಗಳ ಪ್ರಶ್ನೆ. ಮೋದಿಯವರನ್ನು ಆರಿಸಿದ ಜನಸಮುದಾಯಗಳು, ಅಂತೆಯೇ ನಮ್ಮೊಳಗೂ ಇರುವ ಅವರದೇ ಬೀಜಗಳು ಹಾಗೂ ಆಧುನಿಕ ಮನುಷ್ಯನ ಬದುಕನ್ನು ತುಂಬಿಕೊಂಡಿರುವ ಸ್ವಾರ್ಥಗಳು ಕೂಡ ಗಮನೀಯವೇ.

೨. 'ನೈತಿಕತೆ'ಗಿಂತ 'ಎಫಿಶಿಯೆನ್ಸಿ' ಮುಖ್ಯವೆನ್ನುವ, ಸಂಪನ್ಮೂಲಗಳ 'ಹಂಚಿಕೆ'ಗಿಂತ ಅವುಗಳ 'ಸೃಷ್ಟಿ'ಯು ಮುಖ್ಯವೆನ್ನುವ, ಪರಂಪರೆಯ ಬಗ್ಗೆ ಮಾತನಾಡುತ್ತಲೇ 'ಆಧುನಿಕತೆ'ಯ 'ಅನಿಷ್ಟ'ಗಳನ್ನು ಮಾತ್ರ ಅಳವಡಿಸಿಕೊಳ್ಳುವ ಅವರ ಮತ್ತು ಅವರ ಹಿಂಬಾಲಕರ ಧೋರಣೆಯನ್ನು ಒಪ್ಪುವುದು ಹೇಗೆ?

೩. ಆಡಳಿತ ಪಕ್ಷ ಯಾವುದೇ ಇರಲಿ, ಕೇಂದ್ರ ಸರ್ಕಾರದ ಮೇಲೆ ಸಂಪೂರ್ಣವಾದ ಹಿಡಿತವನ್ನು ಹೊಂದಿರುವ ಬಂಡವಾಳಶಾಹಿಗಳಿಗೆ ಮತ್ತು 'ಹೊಸ ಬಂಡವಾಳ'ವನ್ನು ರೂಪಿಸುತ್ತಿರುವ ಐ.ಟಿ./ಬಿ.ಟಿ ಮತ್ತು ಮಲ್ಟಿನ್ಯಾಷನಲ್ ಕಂಪನಿಗಳಿಗೆ ಮೋದಿಯವರ ಸಂಗಡ ವ್ಯವಹಾರ ನಡೆಸುವುದು ಇನ್ನಷ್ಟು ಸುಲಭ. ನಿಜ, ಈ ನೆಲೆಯಲ್ಲಿ ನಮಗೆ ಪರ್ಯಾಯಗಳೇ ಇಲ್ಲದಂತಹ ಬಿಕ್ಕಟ್ಟುಗಳಿವೆ. ಆದರೆ, ಜನರ ಕೋಪವನ್ನು 'ದೇಶಭಕ್ತಿ'ಯ ಅಣಕವಾಗಿ ಬದಲಾಯಿಸುವ, ಅವರ ಆತ್ಮಸಾಕ್ಷಿಯ ಜಾಗದಲ್ಲಿ ಲೋಲುಪತೆ/ಲಂಪಟತೆಗಳೇ ಸರಿಯೆಂದು ಹೇಳುವ ಸರ್ಕಾರ ಬಹಳ ಅಪಾಯಕರ.

೪. ಈಗ ಇಡೀ ಲೋಕವನ್ನೇ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತಿರುವ, 'ಅಭಿವೃದ್ಧಿ ಮಾದರಿ'ಯನ್ನು ದೇಶದಿಂದ ಹೊರಗಿಡುವುದು ಕಡುಕಷ್ಟ. ಹೊರಗಿನ ಮತ್ತು ಒಳಗಿನ ಬಂಡವಾಳಶಾಹಿಗಳ ಹುನ್ನಾರದಿಂದ, ವೈಯಕ್ತಿಕ/ಸಾಮುದಾಯಿಕ ನೆಲೆಗಳಲ್ಲಿ ಬಿಡಿಸಿಕೊಳ್ಳುವುದು ಸರಿಯಾದ ಶಿಕ್ಷಣದಿಂದ ಮಾತ್ರ ಸಾಧ್ಯ. ಯಾವ ಸರ್ಕಾರವೂ ಅದನ್ನು ಕೊಡುತ್ತಿಲ್ಲ/ಕೊಡುವುದಿಲ್ಲ. ಆದರೆ, ಮೋದಿಯವರು ತರಬಹುದಾದ ಸರ್ಕಾರವು ಯೋಜನಾಬದ್ಧವಾಗಿ ಅದಕ್ಕೆ ವಿರುದ್ಧವಾದ ಶಿಕ್ಷಣದ ಬೀಜಗಳನ್ನು ಬಿತ್ತುತ್ತದೆ. ಮುರಳಿಮನೋಹರ ಜೋಷಿಯವರ ಕಾಲದಲ್ಲಿಯೂ ಹೀಗೆಯೇ ಆಯಿತು.



೫. ದಲಿತರು ಮತ್ತು ಹಿಂದುಳಿದವರನ್ನು, ಮಧ್ಯಮವರ್ಗದವರು ಮತ್ತು ಮಹಿಳೆಯರನ್ನು, ಹಿಂಸೆಗೆ ಹೇಸದ, ಕೋಮುವಾದದ ಪ್ರತಿಪಾದಕರಾಗಿ ಬದಲಾಯಿಸಿದ ನೇತಾರರನ್ನು ಒಪ್ಪಿಕೊಳ್ಳುವುದು ಹೇಗೆ ಸಾಧ್ಯ? ಧರ್ಮಮೂಲವಲ್ಲದ ಸಂಸ್ಕೃತಿಯು ಬೆಳೆಸಿಕೊಂಡು ಬಂದಿದ್ದ ಸಹಬಾಳ್ವೆ/ಸಂಯಮಗಳ ಕಡಿವಾಣವನ್ನು ಕಳಚಿ ಮನುಷ್ಯನನ್ನು ಪ್ರಾಣಿ ನೆಲೆಗೆ ಇಳಿಸುವ ಈ ಪ್ರಯತ್ನದ ಉದ್ದೇಶ ಅಧಿಕಾರ ದಾಹವೇ ಆಗಿತ್ತು. ಹೀಗೆ ಮಾಡಿದ್ದರ ಬಗ್ಗೆ ಪಶ್ಚಾತ್ತಾಪವೇ ಇಲ್ಲದವರನ್ನು ನಾಯಕರನ್ನಾಗಿ ಆರಿಸಿಕೊಳ್ಳುವುದು ಕಷ್ಟ. ಅದರಲ್ಲಿಯೂ ಬಹುಮತವುಳ್ಳ ಪಕ್ಷವಾಗಿ ಹೊರಹೊಮ್ಮಿದರಂತೂ ಈ ಆಳ್ವಿಕೆ ಇನ್ನಷ್ಟು ಕ್ರೂರವಾಗುತ್ತದೆ. ಇಷ್ಟಕ್ಕೂ ಬಿ.ಜೆ.ಪಿ.ಯ ಸಹವರ್ತಿಗಳಾಗಬಹುದಾದ ಪಕ್ಷಗಳ ಚಾರಿತ್ರ್ಯವೂ ಪರಿಶುದ್ಧವಲ್ಲ.

೬. ಇಷ್ಟು ಹೇಳುವುದರ ಸಂಗಡವೇ ನಿರ್ದಿಷ್ಟವಾಗಿ ಮೋದಿಯವರು ಪ್ರಧಾನಮಂತ್ರಿ ಆಗಬಾರದೆಂದು ಖಚಿತವಾಗಿ ಹೇಳುತ್ತೇನೆ. ಏಕೆಂದರೆ ಅವರು ಪ್ರತಿಪಾದಿಸುತ್ತಿರುವ ಪ್ರತಿಯೊಂದು ಮೌಲ್ಯವೂ ವೈಯಕ್ತಿಕ ನಂಬಿಕೆಗಳಿಗೆ ವಿರುದ್ಧವಾಗಿವೆ. ಬಿ.ಜೆ.ಪಿ.ಯ ಚೌಕಟ್ಟಿನಲ್ಲಿಯೂ ಅವರು ದುಷ್ಟವಾದುದನ್ನು ಪ್ರತಿನಿಧಿಸುತ್ತಾರೆ.

೭. ಕೊನೆಗೂ ಮುಖ್ಯವಾಗುವುದು ಪರ್ಯಾಯ ಯಾವುದು ಎಂಬ ಪ್ರಶ್ನೆ. ನನಗೆ ತೋರುವುದು ಕರ್ಪೂರೀ ಠಾಕೂರ್, ಜ್ಯೋತಿ ಬಸು ಮತ್ತು ದೇವರಾಜ ಅರಸು ಅವರ ಅತ್ಯುತ್ತಮ ಗುಣಗಳನ್ನು ಒಗ್ಗೂಡಿಸಿಕೊಂಡ ನಾಯಕ ಮಾತ್ರ ದೇಶವನ್ನು ಆಳಬಲ್ಲನೆಂದು. ಅಂಥ ನಾಯಕರನ್ನು ಎಲ್ಲಿಂದ ತರೋಣ? ತಂದರೂ ಅವರನ್ನು ಗೆಲ್ಲಿಸುವುದು ಹೇಗೆ??

**–ಡಾ. ಎಚ್.ಎಸ್. ರಾಘವೇಂದ್ರ ರಾವ್**
ನಿವೃತ್ತ ಪ್ರಾಧ್ಯಾಪಕರು ಮತ್ತು ಲೇಖಕರು, ಬೆಂಗಳೂರು

---

## ಅವರ ಭಾಷಣದಲ್ಲಿ ಬೀಭತ್ಸ ಎದ್ದು ಕಾಣುತ್ತಿದೆ



**ಸಂ**ವಿಧಾನದ ಆಶಯವನ್ನು ಅರ್ಥ ಮಾಡಿಕೊಳ್ಳದ ಯಾರೇ ಪ್ರಧಾನಿಯಾದರೂ ಸಂವಿಧಾನದ ಸರ್ವಸಮಾನತೆಯ ಆಶೋತ್ತರಗಳು ನಾಶವಾಗುತ್ತವೆ. ಅದರಲ್ಲೂ ಆರ್ ಎಸ್ ಎಸ್, ಭಜರಂಗದಳ, ಶ್ರೀರಾಮ ಸೇನೆ, ವಿ.ಎಚ್.ಪಿ, ಶಿವಸೇನಾದಂಥ ಶಕ್ತಿಗಳು ಜಾತಿ , ಧರ್ಮ, ಸಂಪ್ರದಾಯಗಳ ಹೆಸರಿನಲ್ಲಿ ಜನರನ್ನು ಹಿಂದಕ್ಕೆ ತೆಗೆದುಕೊಂಡು ಹೋಗಲು ದಾರಿ ನಿರಾತಂಕವಾಗುತ್ತದೆ. ಮನು ಸಂಸ್ಕೃತಿ ನಮಗರಿವಿಲ್ಲದಂತೆ ನಮ್ಮನ್ನಾವರಿಸಿಕೊಳ್ಳುತ್ತದೆ ಮೋದಿಯಂಥವರು ಪ್ರಧಾನಿಯಾದರೆ. ಜನ ವಿರೋಧಿ ತತ್ವ ಸಿದ್ಧಾಂತಗಳಿಂದ ಜನರನ್ನು ಮತ್ತೂ ತುಳಿತಕ್ಕೆ ಒಳಪಡಿಸುತ್ತಾರೆ. ಏಕೆಂದರೆ, ಅವರ ಭಾಷಣದಲ್ಲಿ ಬೀಭತ್ಸ ಎದ್ದು ಕಾಣುತ್ತಿದೆ. ದೇಶಕ್ಕಾಗಿ ತಾನು ಏನು ಮಾಡುವೆನೆಂಬುದನ್ನು ಹೇಳುವುದಕ್ಕಿಂತ ಇತರರನ್ನು ಚುಚ್ಚಿ ಪ್ರಚೋದಿಸುವುದೇ ಅವರ ಉದ್ದೇಶವಾಗಿದೆ.

ಇನ್ನು ಮಹಿಳೆಯರ ಕಥೆಯಂತೂ ಹೇಳುವುದೇ ಬೇಡ. ಗೋಧ್ರಾ ಘಟನೆಯಲ್ಲಿ ನಡೆದ ಗರ್ಭಿಣಿ ಮಹಿಳೆಯ ಹೊಟ್ಟೆ ಸೀಳಿ ಆ ಮಗುವನ್ನು ಬೆಂಕಿಗೆಸೆಯುವಂತಹ ಕೃತ್ಯ ಇನ್ಯಾವ ದೇಶದಲ್ಲಿಯೂ ಅಥವಾ ನಮ್ಮ ದೇಶದ ಬೇರಾವ ರಾಜ್ಯದಲ್ಲಿಯೂ ಬೇರಾವ ಮುಖ್ಯಮಂತ್ರಿಯ ಆಡಳಿತದಲ್ಲೂ ನಡೆದಿರಲಾರದು.

ಜಾತ್ಯಾತೀತ ಸಂವಿಧಾನ ಜಾರಿಯಲ್ಲಿರುವಾಗಲೇ ಮನು ಸಂಸ್ಕೃತಿಯನ್ನು ಪಾಲನೆ ಮಾಡಿಕೊಂಡು ಬರುವ ಇವರು ಅವಕಾಶ ಸಿಕ್ಕಿದ ತಕ್ಷಣ ದೇಶದ ಸಂವಿಧಾನವನ್ನೇ ತಿರುಚುವುದಿಲ್ಲ ಎಂಬ ಖಾತ್ರಿ ಏನು? ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರಿಗೆಂದು ಮೀಸಲಿಟ್ಟ ಹಣ ಇವರ ಸರ್ಕಾರದಲ್ಲಿ ಆ ಉದ್ದೇಶಕ್ಕೆ ವಿನಿಯೋಗವಾಗುವುದೇ? ಕರ್ನಾಟಕದ ಅನುಭವದ ಹಿನ್ನೆಲೆಯಲ್ಲಿ ಈ ಅನುಮಾನ. ಇಂತಹ ಸರ್ಕಾರ ಬಂದರೆ. ಅವರನ್ನು ಮುಖ್ಯವಾಹಿನಿಗೆ ಕರೆತರುವ ಎಲ್ಲಾ ವ್ಯವಸ್ಥೆಗಳಿಂದ, ಸುಧಾರಣೆಗಳಿಂದ ಅವರನ್ನು ಖಂಡಿತ ದೂರವಿಡಲಾಗುತ್ತದೆ. ಹೆಣ್ಣುಮಕ್ಕಳಿಗೆ ತನ್ನದೇ ಕಲ್ಪನೆಯ ವಸ್ತ್ರಸಂಹಿತೆಯನ್ನು ಜಾರಿಗೊಳಿಸುವ ಮೂಲಕ ಅವರನ್ನು ದಮನ ಮಾಡುವಲ್ಲಿ ಈ ಸರ್ಕಾರ ತನ್ನ ಪ್ರಭಾವವನ್ನು ಖಂಡಿತ ಬೀರುತ್ತದೆ. ಮನುಷ್ಯ ಮನುಷ್ಯರ ನಡುವೆ, ಹೆಣ್ಣು–ಗಂಡುಗಳ ನಡುವೆ ತಾರತಮ್ಯವೆಂಬ ಗೋಡೆಗಳನ್ನು ಸೃಷ್ಟಿಸುವ ಜಾತಿಧರ್ಮ, ಮೇಲು–ಕೀಳು ಇವು ವಿಜೃಂಭಿಸಬೇಕೇ?

ಈ ಎಲ್ಲಾ ಕಾರಣಗಳಿಗಾಗಿ ಗಾಂಧಿನಾಡಿನಲ್ಲಿ ಮಾನವೀಯ ಮೌಲ್ಯಗಳು ನಾಮಾವಶೇಷವಾಗಬೇಕೇ? ಬೇಡ, ಖಂಡಿತ ನಮಗೆ ಮೋದಿಯಂತಹ ಧಾರ್ಮಿಕ ಮೂಲಭೂತವಾದಿ, ಫ್ಯಾಸಿಸ್ಟ್ ವ್ಯಕ್ತಿ ಬೇಡ.

**–ಬಿ. ಅನುಸೂಯಮ್ಮ,** ರೈತ ನಾಯಕರು ಮತ್ತು ಟ್ರಸ್ಟೀ, ಡಾ. ಲೋಹಿಯಾ ಸಮತಾ ವಿದ್ಯಾಲಯ, ಅರಳಾಳುಸಂದ್ರ

## ಹುದುಗಿ ಬರಲಿರುವ ಟೈಂ ಬಾಂಬ್!

**ಮೋ**ದಿ ಹುಸಿ ಯಶಸ್ಸಿನ ಮಾರಾಟಗಾರ. ಸಂತೆ ವ್ಯಾಪಾರಿಯ ಹಾಗೆ ಜನಗಳನ್ನು ನಂಬಿಸಿ ನಕಲಿ ಮಾಲನ್ನು ಅಸಲಿಮಾಲಿಗಿಂತ ಹೆಚ್ಚು ಬೆಲೆ ಕಟ್ಟಿ ಮಾರುವ ಕಲೆ ಇವರಿಗೆ ಗೊತ್ತು. ಇಂದಿನ ಮಿತಿ ಮೀರಿದ ಭ್ರಷ್ಟಾಚಾರ- ಹಿಡಿತ ತಪ್ಪಿದ ಆಡಳಿತಗಳಿಂದ ಜನ ರೋಸಿ ಹೋಗಿರುವುದನ್ನೇ ಬಂಡವಾಳ ಮಾಡಿಕೊಂಡು ಹೊಸ ಬದಲಾವಣೆಯ, ಅಭಿವೃದ್ಧಿಯ ಹರಿಕಾರ ತಾನೆಂದು ಜನಗಳನ್ನು ನಂಬಿಸುತ್ತಾ, ಮಾತಿನಲ್ಲೆ ಮಹಲುಗಳನ್ನು ಕಟ್ಟುತ್ತಿದ್ದಾರೆ.

ಇಷ್ಟಕ್ಕೂ ಇವರು ಕೊಡಬಯಸುತ್ತಿರುವ ಅಭಿವೃದ್ಧಿ ಯಾವುದು? ಅದು ಇವರದೇ ಅಳತೆಯನ್ನು ಮೀರದ ಗುಜರಾತ್ ಮಾದರಿಯ ಅಭಿವೃದ್ಧಿ. ಸಮಾಜದ ಎಲ್ಲ ಜಾತಿಗಳ, ಎಲ್ಲ ಧರ್ಮಗಳ, ಎಲ್ಲ ವರ್ಗಗಳ ಶೋಷಕರನ್ನು ಓಲೈಸುವ ಅಭಿವೃದ್ಧಿ ಇದು. ಹಿಂದಕ್ಕುಳಿದ ಎಲ್ಲ ದುರದೃಷ್ಟಶಾಲಿಗಳು, ದುರ್ಬಲರು ಮೈಮರೆತು ಉಳ್ಳವರಿಗೆ ದಕ್ಕಿದ ವೈಭವವನ್ನು ಸಂಭ್ರಮಿಸುತ್ತ, ತಮಗೂ ಒಂದು ದಿನ ಇದು ದಕ್ಕುವುದೆಂದು ಭ್ರಮಿಸುತ್ತಾ ಮೋದಿಗೇ ಜೈಕಾರ ಹಾಕುವಂತೆ ಒಂದು ಭ್ರಮೆಯನ್ನು ಸೃಷ್ಟಿಸುತ್ತಿರುವುದೇ ಮೋದಿಯ ಯಶಸ್ಸು.

ಮೋದಿಯ ರಾಜಕೀಯ, ಧಾರ್ಮಿಕ, ಆರ್ಥಿಕ ದೃಷ್ಟಿಕೋನವನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಅಲ್ಲಿ ಸಮಷ್ಟಿಯ ಹಿತ ಮುಖ್ಯವಾಗಿ ಅಂಚಿನಲ್ಲುಳಿದವರ ಹಿತ ಎಳ್ಳಷ್ಟೂ ಇಲ್ಲ. ಅವರಿಗಾಗಿ ಕೇವಲ ಹುಸಿ ಮಾತುಗಳು, ಆಶ್ವಾಸನೆಗಳು ಮಾತ್ರ ಇವೆ. ಒಂದು ಕೈಯಿಂದ ಹಿಂದೂಗಳಿಗೆ ಬೇಕಾದ ಹಿಂದುತ್ವದೊಳಗೆ ಆರ್. ಎಸ್. ಎಸ್. ಹೂರಣ ತುಂಬಿ ಕೊಡುತ್ತ ಮತ್ತೊಂದು ಕೈಯಿಂದ ಮುಸ್ಲಿಮರ ಕಣ್ಣೀರೊರೆಸಿ ತಮ್ಮ ತಂತ್ರಗಾರಿಕೆಯಿಂದ ಮರು ಪ್ರಶ್ನೆಗಳಿಗೆ ಅವಕಾಶವಿಲ್ಲದಂತೆ ಪರಿಸ್ಥಿತಿಯನ್ನು ನಿಭಾಯಿಸಬಲ್ಲರು, ಎಲ್ಲೋ ಕೆಲವರನ್ನು ತಮ್ಮೆಡೆಗೆ ಸೆಳೆದು ಕೊಳ್ಳಬಲ್ಲರು. ಆದರೆ ಬಹು ಸಂಖ್ಯಾತ ಮುಸ್ಲಿಮರು ನಿಸ್ಸಹಾಯಕರಾಗಿ ನುಂಗಿಕೊಂಡ, ಮನದೊಳಗೇ ಉಳಿಯುವ ಈ ಅಸಮಾಧಾನ ಒಳಗೇ ಹುದುಗು ಬಂದು ಟೈಂಬಾಂಬ್ ಆಗುವುದು ಖಚಿತ. ಮೋದಿ ಗದ್ದುಗೇರಿದ ಮೇಲೆ ದೊಡ್ಡದಾಗಿ ಸಿಡಿಯುವುದು ಖಚಿತ. ಈ ಎಲ್ಲ ಅನಿಷ್ಟ ಪರಂಪರೆಗೆ ಕಾರಣವಾಗಬಹುದಾದ ಮೋದಿ ನಮಗೆ ಬೇಡ.



**–ಜಿ.ಎಸ್.ಜಯದೇವ**, ಚಿಂತಕರು ಮತ್ತು ದೀನಬಂಧು ಅನಾಥಾಶ್ರಮದ ಗೌರವ ಕಾರ್ಯದರ್ಶಿ, ಚಾಮರಾಜನಗರ

## ಮೋದಿ ಎಂಬ ಕರಗದ ಕಲ್ಲುಬಂಡೆ



**ಗ**ಳಿಗೆಗೊಮ್ಮೆ ಗಂಟೆಗೊಮ್ಮೆ ಬಟ್ಟೆ ಬದಲಾಯಿಸುವುದು, ಕಿರೀಟ, ಕೊಂಬು ಕಹಳೆ, ಖಡ್ಗ-ಸದಾ ನಾಟಕವಾಡುವ ಮಂದಿಯಿಂದ ಸುತ್ತುವರೆದುಕೊಂಡಿರುವುದು, ಧ್ವನಿಯನ್ನು ಏರಿಳಿಸಿ ನಾಟಕದ ಶೈಲಿಯಲ್ಲಿ ಮಾತನಾಡುವುದು, ಆಂಗಿಕ ಅಭಿನಯ ಮಾಡಿ ಮೋಡಿ ಮಾಡುವುದು ಈ ರಾಜಕೀಯ ನಾಟಕ ನನಗೆ ಹಿಡಿಸುವುದಿಲ್ಲ. ನಮ್ಮ ದೇಶವನ್ನು ಮುನ್ನಡೆಸಲು ಬೇಕಾಗಿರುವುದು ನಿಸ್ಪೃಹ ವ್ಯಕ್ತಿಯೇ ಹೊರತು ಓಟಿಗಾಗಿ ನಾಟಕ ಮಾಡುವ ನಟನಲ್ಲ. ಹಾಗಾಗಿ ಮೋದಿ ಪ್ರಧಾನಿಯಾಗಬಾರದು.

ಮೋದಿ ಅಭಿವೃದ್ಧಿಯ ಮಂತ್ರ ಜಪಿಸುವರು. ನಾನಂತೂ ಕರ್ನಾಟಕದಲ್ಲಾಗಿರುವ ಅಭಿವೃದ್ಧಿಯಿಂದ ಹೈರಾಣಾಗಿ ಹೋಗಿದ್ದೇನೆ. ನೆಲವಿಲ್ಲ, ಜಲವಿಲ್ಲ, ಮರವಿಲ್ಲ, ನೆರಳಿಲ್ಲ, ಗಾಳಿ ಬೆಳಕು ಎಲ್ಲವೂ ಮಲಿನಗೊಂಡಿದೆ. ಉಸಿರಾಡಲು ಕಷ್ಟವಾಗುತ್ತಿದೆ. ಬಿಸಿಲಿನ ಝಳ ತಾಳಲಾಗುತ್ತಿಲ್ಲ. ಅಭಿವೃದ್ಧಿಯ ಫಲ ಅನಾರೋಗ್ಯ! ಮನುಷ್ಯರು ಆಹಾರಕ್ಕಿಂತ ಹೆಚ್ಚಾಗಿ ಮಾತ್ರೆಗಳನ್ನು ನುಂಗುತ್ತಿದ್ದಾರೆ. ಬೇಕಾದ್ದಷ್ಟು ಗಳಿಸಿದರೂ ತಿನ್ನುವ ಹಾಗಿಲ್ಲ. ಒತ್ತಡದಿಂದ ನಿದ್ರೆಯಿಲ್ಲ. ಒಟ್ಟಾರೆ ಯಾರಿಗೇ ಕೇಳಿ, ನೆಮ್ಮದಿ ಇಲ್ಲ. ದೇಹವೂ ಮನಸ್ಸೂ ಅನಾರೋಗ್ಯದಿಂದ ತತ್ತರಿಸುತ್ತಿದೆ. ಮೋದಿ ಮತ್ತಷ್ಟು, ಮಗದಷ್ಟು ಅಭಿವೃದ್ಧಿಯನ್ನು ಹೇಳುತ್ತಾರೆ?! ನಾನು ಅವರ ಈ ಅಭಿವೃದ್ಧಿ ಮಂತ್ರದ ವಿರೋಧಿಯಾಗಿರುವುದರಿಂದಲೇ ಅವರು ಪ್ರಧಾನಿಯಾಗಬಾರದು.

ಮೋದಿಯವರನ್ನು ಸುತ್ತುವರೆದುಕೊಂಡಿರುವವರೆಲ್ಲ ಕಾರ್ಪೋರೇಟ್ ಕುಳಗಳು., ಹೊಟ್ಟೆ ತುಂಬಿರುವ ಭಟ್ಟಂಗಿಗಳು. ಮೋದಿ ಪ್ರಧಾನಿಯಾದರೆ, ಅವರನ್ನು ಪೊರೆಯಬಹುದೇ ಹೊರತು ನನ್ನಂತಹ ಸಾಮಾನ್ಯ ಪ್ರಜೆಯನ್ನಲ್ಲ. ನನ್ನಂತಹವರನ್ನು ಅವರು ಕಣ್ಣೆತ್ತಿ ಕೂಡ ನೋಡಲಾರರು. ನಮ್ಮ ಮಾತನ್ನು ಕೇಳಿಸಿಕೊಳ್ಳಲಾರರು. ಹೀಗಿರುವಾಗ ಅವರೇಕೆ ಪ್ರಧಾನಿಯಾಗಬೇಕು?

ನಾವು ಇತ್ತೀಚೆಗೆ ಗುಜರಾತ್-ರಾಜಸ್ಥಾನದ ಪ್ರವಾಸದಲ್ಲಿದ್ದಾಗ ಅಕ್ಷರ ಧಾಮ ನೋಡಲೆಂದು ಗಾಂಧಿನಗರದಲ್ಲಿ ಹಾದು ಹೋಗುವಾಗ ನಮ್ಮ ಟ್ಯಾಕ್ಸಿಯ ಚಾಲಕ ಬಲಗಡೆಯಿದೆಯಲ್ಲ, ಅದು ಮೋದಿಯವರ ಮನೆ ಎಂದ. ಹೆಚ್ಚು ಹೊತ್ತು ಕಣ್ಣು ಕೀಲಿಸಬೇಡಿ, ಕೈ ತೋರಿಸಬೇಡಿ, ಒಳಗೆ ಹಾಕುತ್ತಾರೆ ಎಂದ. ಆದರೂ ವಾಪಸ್ ಬರುವಾಗ ಕುತೂಹಲದಿಂದ 'ನೋಡ್ರಿ ಮೋದಿ ಮನೆ' ಎಂದು ಕೈದೋರಿದ್ದಕ್ಕೆ ನಮ್ಮನ್ನು ಗದರಿಸಿ ಎತ್ತಿದ್ದ ಕೈಯನ್ನು ಒರಟಾಗಿ ಹಿಡಿದೆಳೆದು ಬೈದ. ನಮಗೆ ದಿಗಿಲಾಯಿತು. ನಾವೇನು ಭಯೋತ್ಪಾದಕರೇ? ನಮಗೆ ಅಭಯ ನೀಡುವವರು ಪ್ರಧಾನಿಯಾಗಬೇಕೇ ಹೊರತು ಭಯ ಹುಟ್ಟಿಸುವವರಲ್ಲ. ಹಾಗಾಗಿ ಮೋದಿ ಪ್ರಧಾನಿಯಾಗಬಾರದು.

ನಾನು ನೋಡಿರುವಂತೆಯೇ ನನ್ನ ಕಣ್ಣಮುಂದೆ ಅನೇಕ ಸರ್ಕಾರಗಳು ಬಂದು ಹೋಗಿವೆ. ವೈವಿಧ್ಯತೆಯೇ ಭಾರತದ ಜೀವಾಳ. ಈತನಕ ಈ ದೇಶವು ಯಾರ ಹಿಡಿತಕ್ಕೂ ಸಿಕ್ಕಿಲ್ಲ. ಇದನ್ನು ರಿಪೇರಿ ಮಾಡಲು ಸಾಧ್ಯವಾಗಿಲ್ಲ. ಹೊಡೆದಾಡುತ್ತಾ ಬಡಿದಾಡುತ್ತಾ ಸರ್ಕಾರವನ್ನು ಹಿಗ್ಗಾಮುಗ್ಗಾ ಬೈಯುತ್ತಲೇ ಎರಡು ತುತ್ತು ಊಟ ಮಾಡಿಕೊಂಡು ಒಗ್ಗಟ್ಟಿನಿಂದ ಬಾಳುವೆ ಮಾಡಿಕೊಂಡಿದ್ದೇವೆ. ಈ ದೇಶವನ್ನು ಬೇರೆ ರೀತಿಯೇ ಕಟ್ಟುತ್ತೇನೆ, ಚಿತ್ರವನ್ನು ಸಂಪೂರ್ಣ ಬದಲಾಯಿಸುತ್ತೇನೆ ಎಂದು ಮೋದಿಯವರು ದೊಡ್ಡ ಮಾತುಗಳನ್ನಾಡುತ್ತಿದ್ದಾರೆ. ಇವರು ಏನಾದರೂ ಮಾಡಿಯೇ ತೀರುವರು ಎಂದು ಭಯವಾಗುತ್ತಿದೆ. ಹಾಗಾಗಿ ಮೋದಿ ಪ್ರಧಾನಿಯಾಗಬಾರದು.

ಗುಜರಾತ್ ನರಮೇಧ ಮೋದಿಯವರ ಕಣ್ಗಾವಲಿನಲ್ಲೇ ನಡೆದಿದೆ ಎಂದು ಸ್ವತಃ ಮೋದಿಯವರಿಗೇ ಗೊತ್ತು. ತನ್ನಿಂದ ತಪ್ಪೇ ಆಗಿಲ್ಲ ಎಂದು ವಾದಿಸುವ ಪರಿ ನೋಡಿದರೆ ಜಿಗುಪ್ಸೆ ಆಗುತ್ತದೆ. ಮನುಷ್ಯ ಮಾತ್ರನಾದವನು ತಪ್ಪು ಮಾಡಬಲ್ಲ, ಕ್ಷಮೆಯೂ ಕೋರಬಲ್ಲ. ಆದರೆ ಮೋದಿ ಈ ವಿಷಯದಲ್ಲಿ ಕಲ್ಲುಬಂಡೆಯಂತಹ ಮೌನ ತೋರಿಸಿದ್ದಾರೆ. ಕಲ್ಲೂ ಕೂಡ ಕರಗಬಹುದಂತೆ. ಆದರೆ ಮೋದಿ ಕರಗಲಿಲ್ಲ. ಕರಗದ ಮನುಷ್ಯ ಮನುಷ್ಯನೇ ಅಲ್ಲ. ಹಾಗಾಗಿ ಮೋದಿ ಪ್ರಧಾನಿಯಾಗಬಾರದು.

ಮೋದಿ ನನ್ನಂತೆಯೇ ಈ ದೇಶದ ಪ್ರಜೆ. ಅವರು ಪ್ರಧಾನಿ ಆಗಬಾರದು ಎಂದಿದ್ದರೂ, ಒಂದು ವೇಳೆ ಪ್ರಧಾನಿಯಾದುದೇ ಆದಲ್ಲಿ 'ಟೀ ಮಾರುವ ಹುಡುಗ ಪ್ರಧಾನಿಯಾದರಲ್ಲ' ಎಂದು ಪ್ರಜಾಪ್ರಭುತ್ವದ ಶಕ್ತಿ-ಸಾಧ್ಯತೆಗಳ ಬಗ್ಗೆ ಅಚ್ಚರಿ ಪಡುವೆನು. ಆಗ ಅವರು ತಮ್ಮ ಸರ್ವಾಧಿಕಾರತ್ವವನ್ನು ತೊರೆದು, ಅವರು ಪ್ರಧಾನಿಯಾಗಬಾರದು ಎಂದು ಬಯಸುತ್ತಿರುವವರ ಮಾತಿಗೆ ಕಿವಿಗೊಡಲಿ, ಆ ಬಗ್ಗೆ ಆಳವಾಗಿ ಚಿಂತಿಸಲಿ ಎಂದು ಆಶೆ ಪಡುವೆನು.

**–ಸವಿತಾ ನಾಗಭೂಷಣ,** ಕವಯಿತ್ರಿ, ಶಿವಮೊಗ್ಗ

## ಒಳ್ಳೆಯ ತಂತ್ರಗಾರ, ಆದರೆ ಜನತಂತ್ರಗಾರನಲ್ಲ



೨೭ನೇ ಮೇ ೧೯೬೪ ರಂದು ನಮ್ಮ ಚಿಕ್ಕಪ್ಪನ ಮಗನ ಮದುವೆ ಮುಗಿಸಿಕೊಂಡು ನಾವು ಬೆಳಗಾವಿಯಿಂದ ಗೋಕಾಕಕ್ಕೆ ನಡೆದಿದ್ದೆವು. ಬಸ್ಸು ಖನಗಾವಿಗೆ ಬಂದಾಗ ನೆಹರೂ ತೀರಿಕೊಂಡ ಸಮಾಚಾರ ತಿಳಿದ ಬಹಳಷ್ಟು ಜನ ಪ್ರಯಾಣ ಮುಂದುವರಿಸದೆ ಮೌನವಾಗಿ ಇಳಿದು ಹೋಗಿದ್ದರು. ಮುಂದೆ ಶಾಸ್ತ್ರೀಜಿ ಪ್ರಧಾನಿಯಾಗಿದ್ದಾಗ ದೇಶಕ್ಕಾಗಿ ಪ್ರತಿ ಸೋಮವಾರ ಒಪ್ಪತ್ತು ಊಟ ಬಿಡುವಂತೆ ಕರೆ ಕೊಟ್ಟಿದ್ದರು. ನಾನು ಹಟ ಹಿಡಿದು ೨-೩ ವಾರ ಒಪ್ಪತ್ತನ್ನಾಚರಿಸಿದೆ. ಹಳ್ಳಿಯಲ್ಲಿದ್ದ ನನಗಾಗ ಸುಮಾರು ೧೧-೧೨ ವರ್ಷ ವಯಸ್ಸು. ಗುಜರಾತ್ ಗಲಭೆಗಳ ಸಂದರ್ಭದಲ್ಲಿ ಪ್ರಧಾನಿಯಾಗಿದ್ದ ವಾಜಪೇಯಿ ತಮ್ಮದೇ ಪಕ್ಷದ ನರೇಂದ್ರ ಮೋದಿಗೆ ರಾಜಧರ್ಮ ಪಾಲಿಸುವಂತೆ ಗಟ್ಟಿಯಾಗಿ ಹೇಳಿದ್ದರು. ಈ ವ್ಯಕ್ತಿತ್ವಗಳು ಇಡೀ ಸಮುದಾಯದ ಮೇಲೆ ಬೀರುತ್ತಿದ್ದ ಪ್ರಭಾವ ಅದ್ಭುತವಾಗಿರುತ್ತಿತ್ತು.

ನರೇಂದ್ರ ಮೋದಿಯವರನ್ನು ನಾವಿಂದು ಇಂಥವರೊಂದಿಗೆ ಹೋಲಿಸಲಾದೀತೇ? ಅಥವಾ ಅವರದೇ ಪಕ್ಷದ ಪರಿಪಕ್ವತೆಯೆಡೆಗೆ ಸಾಗಿದ ಆಡ್ವಾಣಿಯವರೊಡನಾದರೂ ಹೋಲಿಸಲಾದೀತೇ? ಈ ತಲೆಮಾರಿನ ಬಹುಸಂಖ್ಯೆಯ ರಾಜಕಾರಣಿಗಳಂತೆ ನರೇಂದ್ರ ಮೋದಿ ಕೂಡ ಎಲ್ಲ ಸಮುದಾಯಗಳನ್ನೂ ಜೊತೆ ಜೊತೆಗೆ ಕರೆದುಕೊಂಡು ಹೋಗುವ ಯೋಗ್ಯತೆ ಹೊಂದಿಲ್ಲ. 'ಹಿಂದೂ ರಾಷ್ಟ್ರ'ದಂಥ ಅಸಾಂವಿಧಾನಿಕ ವಿಷಯಗಳನ್ನು ಸಾಂದರ್ಭಿಕವಾಗಿ, ಪ್ರತ್ಯಕ್ಷ ಪರೋಕ್ಷವಾಗಿ, ಕೇವಲ ಮತಕ್ಕಾಗಿ ಎತ್ತುತ್ತಲೇ ಇರುತ್ತಾರೆ. ತಮ್ಮದೇ ರೀತಿಯಲ್ಲಿ ಗಲಭೆಗಳನ್ನು ಸೃಷ್ಟಿಸುವುದು ಪ್ರಚೋದಿಸುವುದು ಹಾಗೂ ಬೇಕೆಂದಾಗ ನಿಯಂತ್ರಿಸುವುದನ್ನು ಇವರು ಚೆನ್ನಾಗಿ ಬಲ್ಲರು. 'ರಾಷ್ಟ್ರವಾದೀ ನಾಯಕತ್ವ' ಗುಣಕ್ಕೆ ಇದು ಪೂರ್ತಿ ಹೊರತಾದದ್ದು. 'ನಿಮ್ಮ ರಾಜ್ಯದ ಅಸಂಖ್ಯಾತ ಜನರನ್ನು ಕೊಂದದ್ದೇಕೆ' ಎಂದು ಕೇಳಿದರೆ, 'ಕಾಂಗ್ರೆಸ್ಸಿಗರು ಸಿಖ್ಖರನ್ನು ಕೊಲ್ಲಲಿಲ್ಲವೇ?' ಎಂಬಂತಹ ಉತ್ತರ ಹೇಳುತ್ತಾರೆ. ಅಭಿವೃದ್ಧಿ ಎಂದರೆ ಮೋದಿ ಹೆಸರು ಹೇಳುವ ಮಾಧ್ಯಮಗಳು ಗುಜರಾತ್‌ನಲ್ಲಾದ ನೈಜ ಅಭಿವೃದ್ಧಿಯ ಕಾರ್ಯಗಳೇನು ಹಾಗೂ ಅದರ ಫಲಾನುಭವಿಗಳಾರು ಎಂಬುದನ್ನು ವಿವರವಾಗಿ ಹೇಳುವುದೇ ಇಲ್ಲ.

ನರೇಂದ್ರ ಮೋದಿ ಒಳ್ಳೆಯ ತಂತ್ರಗಾರ. ಜನತಂತ್ರಗಾರನಲ್ಲ. ನೆಹರೂ, ವಿ. ಪಿ. ಸಿಂಗ್, ವಾಜಪೇಯಿ, ಗುಜ್ರಾಲ್ ಮುಂತಾದವರಂತೆ ಓದು-ಬರೆಹದ ಮನುಷ್ಯನಲ್ಲ. ಚಹಾ ಮಾರಿದ್ದು ಕೀಳು ಕಾರ್ಯವಲ್ಲ ಹಾಗೂ ಅದು ತಂತಾನೇ ಒಂದು ಅರ್ಹತೆಯೂ ಅಲ್ಲ. ಇಡೀ ದೇಶದ ವರ್ತಮಾನ - ಭವಿಷ್ಯಗಳ ಹಿತ ಕಾಪಾಡುವವ ನಿಜವಾದ ನಾಯಕ. ಒಂದು ಗುಂಪಿನ ನಾಯಕ ಕೇವಲ ಪಾಳೇಗಾರನಾಗಬಹುದು. ಅಂಥವನಿಗೆ ದೊಡ್ಡ ಆಲೋಚನೆ, ಆದರ್ಶಗಳಿರುವುದಿಲ್ಲ.

ವಿನಯ, ಸಂಕೋಚ, ಕೇಳಿಸಿಕೊಳ್ಳುವ ಗುಣ, ಒಳ್ಳೆಯ ಮಾತು, ಕ್ಷಮಾಗುಣ, ಪ್ರಾಮಾಣಿಕ ಆಡಳಿತ ಇಂದು ಬಹುಪಾಲು ರಾಜಕಾರಣಿಗಳಲ್ಲಿಲ್ಲ. ಚಿಲ್ಲರೆ ಮಾತು - ನಡತೆ; ಕಾಲು ಕೆದರಿ ಜಗಳ ತೆಗೆಯುವ ರೀತಿ, ದೊಡ್ಡ ಬಾಯಿ, ಸವಾಲು ಹಾಕುತ್ತ ಸಾಗುವ ಪರಿ, ಮೋದಿಯವರ ಈ ಅವಗುಣಗಳನ್ನು ಗಮನಿಸಿದರೆ ಇವರು ನಮಗೇಕೆ ಬೇಡ ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯ ಬೀಳುವುದಿಲ್ಲ.

**-ವಿಜಯೇಂದ್ರ ಪಾಟೀಲ,**
ನಿವೃತ್ತ ಬ್ಯಾಂಕ್ ಮ್ಯಾನೇಜರ್ ಮತ್ತು ಲೇಖಕರು, ಗೋಕಾಕ

## ಸಮಾನತೆ, ಜನತಂತ್ರಗಳಿಗೆ ಇಲ್ಲಿ ಬೆಲೆಯಿಲ್ಲ



ಬಹುಮತ ಪಡೆದ ರಾಜಕೀಯ ಪಕ್ಷದ ಸಂಸದೀಯ ಸಮಿತಿ ಆಯ್ಕೆ ಮಾಡಿದ ವ್ಯಕ್ತಿ ಪ್ರಧಾನಿಯಾಗುವುದು ನಮ್ಮ ಜನತಂತ್ರದ ಸತ್‌ಸಂಪ್ರದಾಯ. ಆದರೆ ಬಿಜೆಪಿ ತನ್ನ ಅಭ್ಯರ್ಥಿಯನ್ನು ತನ್ನ ಮೈತ್ರಿಕೂಟವಾದ ಎನ್.ಡಿ.ಎ.ಯ ಸಂಗಪಕ್ಷಗಳನ್ನೂ ಕೇಳದೆ ಚುನಾವಣೆಗೆ ಮೊದಲೇ ಘೋಷಿಸಿ ದೊಡ್ಡಣ್ಣನ ಧಿಮಾಕನ್ನು ತೋರಿಸಿ ಜನತಂತ್ರದ ಬುನಾದಿಗೇ ಆಘಾತ ಉಂಟುಮಾಡಿದೆ.

ಬಿ.ಜೆ.ಪಿ.ಈಗಿನ ರಾಜಕೀಯ ವ್ಯವಸ್ಥೆಯಲ್ಲಿ ಕಾರ್ಯನಿರತವಾಗಿದ್ದರೂ ಅದರ ರಾಜಕೀಯ ಗುಪ್ತ ಸಿದ್ಧಾಂತ ಹಿಂದುತ್ವವಾಗಿದೆ. ಅದರ ಗುರಿ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಘೋಷಿಸುವುದು. ಅದಕ್ಕೆ ನರೇಂದ್ರ ಮೋದಿ ಹೇಳಿ ಮಾಡಿಸಿದ ಶಿಲ್ಪಿಯಾಗಿದ್ದಾರೆ. ಬಿ.ಜೆ.ಪಿ.ಯ ಪ್ರಕಾರ ಹಿಂದೂಗಳು ಎಂದರೆ ಹಿಂದುಳಿದ ಜಾತಿಗಳು, ಅಸ್ಪೃಶ್ಯ ಜನಾಂಗವಲ್ಲ.

ಬಿ.ಜೆ.ಪಿ.ಯು ಬಂಡವಾಳಶಾಹಿ ಆರ್ಥಿಕ ಕೇಂದ್ರೀಕರಣವನ್ನೇ ತನ್ನ ಆರ್ಥಿಕ ಸಿದ್ಧಾಂತ ಎಂದು ಪ್ರತಿಪಾದಿಸುತ್ತಿದೆಯೇ ಹೊರತು ಆರ್ಥಿಕ ಶಕ್ತಿಯನ್ನು ಜನರ ಕೈಗೆ ಹಸ್ತಾಂತರಿಸುವ ಬಗ್ಗೆ ಅದು ತಲೆ ಕೆಡಿಸಿಕೊಂಡಿಲ್ಲ. ಇದೇ ನರೇಂದ್ರ ಮೋದಿಯವರ ಗುಜರಾತ್ ಅಭಿವೃದ್ಧಿ ಮಾದರಿ.

ಹಾಗಾಗಿ ಅಸಮಾನತೆಯನ್ನು ಎತ್ತಿ ಹಿಡಿಯುವ, ಜನತಾಂತ್ರಿಕ ಮೌಲ್ಯಗಳನ್ನು ಗಾಳಿಗೆ ತೂರುವ ಬಿ.ಜೆ.ಪಿ.ಯ ಪ್ರಧಾನಿ ಅಭ್ಯರ್ಥಿ ಮೋದಿಯನ್ನು ಪರಾಭವಗೊಳಿಸಿ, ಕೋಮು ಸೌಹಾರ್ದತೆ, ಧರ್ಮ ನಿರಪೇಕ್ಷತೆಯನ್ನು ಎತ್ತಿ ಹಿಡಿಯಬೇಕೆಂದು ನಮ್ಮ ಅಭಿಲಾಷೆ.

**-ಪ್ರೊ. ಹನುಮಂತ,**
ಸಮಾಜವಾದಿ ಅಧ್ಯಯನ ಕೇಂದ್ರ, ಬೆಂಗಳೂರು

## ಎಲ್ಲ ಜನವರ್ಗಗಳ ನಾಯಕನಲ್ಲ



ಜಾತಿ ವಿಜಾತಿಗಳಲ್ಲಿ ಈ ದೇಶವನ್ನು ತುಂಡು ಮಾಡಿ ಅನ್ಯರ ಆಕ್ರಮಣಕ್ಕೆ ತುತ್ತಾಗುವಂತೆ ಮಾಡಿದ್ದು ಹಿಂದೂವಾದ. ಮಾನವರನ್ನು ಮೇಲು ಕೀಳು ಮಾಡಿ ಆತ್ಮಸ್ಥೈರ್ಯ ಕುಗ್ಗಿಸಿ ಗುಲಾಮಗಿರಿಗೆ ತಳ್ಳಿದ್ದು ಈ ಹಿಂದೂವಾದ. ಇಂತಹ ಹಿಂದೂವಾದದ ಮೂಸೆಯಲ್ಲಿ ತಯಾರಾದ ನರೇಂದ್ರ ಮೋದಿ ಜಾತಿವಾದಿಯೇ ಹೌದು.

ಆತನ ಗುಜರಾತ್ ಅಭಿವೃದ್ಧಿ ಮಾದರಿ ಎಂಬುದು ಕೇವಲ ಉದ್ಯಮಿಗಳಿಗೆ, ವ್ಯಾಪಾರಿಗಳಿಗೆ, ಬಂಡವಾಳಶಾಹಿಗಳಿಗೆ ಮಾತ್ರ ಸಹಾಯಕಾರಿಯಾಗಿದೆ ಎಂಬುದು ಈಗ ಜಗಜ್ಜಾಹೀರಾಗಿದೆ. ಹೀಗಿರುವಾಗ ಈತ ಪ್ರಧಾನಿಯಾದರೆ ಬಡಬಗ್ಗರ ಕಡೆ ನೋಡುವ ಮತ್ತು ದೇಶದ ಎಲ್ಲರ ಭಾವನೆಗಳಿಗೆ ಬೆಲೆ ಕೊಡುವ ಸಾಧ್ಯತೆ ಕಡಿಮೆ. ಮತ್ತೆ ಈತ ಮತ್ತು ಈತನ ಪಕ್ಷ ಹಿಂದುತ್ವ-ರಾಮ ಮಂದಿರದ ಜಪ ಶುರು ಮಾಡಿದರೆ ದೇಶದ ಗತಿ ಏನು?

ಈ ದೇಶಕ್ಕೆ ವಿಶಾಲ ಹೃದಯದ, ಕೈ ಬಾಯಿ ಶುದ್ಧವಿರುವ, ಎಲ್ಲ ಜನವರ್ಗಗಳ ಕಷ್ಟ ಸುಖಗಳಿಗೆ ಸ್ಪಂದಿಸುವಂತಹ ವ್ಯಕ್ತಿ ಪ್ರಧಾನಿಯಾಗಬೇಕು. ಅಂತಹ ಗುಣಗಳು ಮೋದಿಯಲ್ಲಿ ಕಾಣುತ್ತಿಲ್ಲ. ಹಾಗಾಗಿ ಮೋದಿ ಈ ದೇಶಕ್ಕೆ ಪ್ರಧಾನಿಯಾಗಬಾರದು.

**-ಡಾ. ಬಸವಪ್ರಭು ಪಾಟೀಲ,**
ವೈದ್ಯರು ಹಾಗೂ ಲೇಖಕರು, ಮಾನ್ವಿ

## ಈ ಏಕವ್ಯಕ್ತಿ ವೈಭವೀಕರಣ ಮಾರಕ

**ಭಾ**ರತದ ರಾಜಕಾರಣ ಪ್ರಜಾಪ್ರಭುತ್ವ ಪದ್ಧತಿಯನ್ನು ಒಪ್ಪಿಕೊಂಡು ಬರುತ್ತಿದ್ದರೂ ಅದರ ಆಂತರ್ಯದಲ್ಲಿ ಮೇಲು-ಕೀಳು, ಯಜಮಾನ - ಆಳು, ರಾಜ - ಪ್ರಜೆ, ಶೋಷಕ - ಶೋಷಿತ ಇವುಗಳಿಂದ ಮುಕ್ತವಾಗಿಲ್ಲ. ಮಾತಿನಲ್ಲಿ ಈ ಎಲ್ಲ ಅಂತರ್ಗತ ವೈರುಧ್ಯಗಳನ್ನು ಹೋಗಲಾಡಿಸುವ ಯೋಜನೆಗಳನ್ನು ರೂಪಿಸಿಕೊಂಡು ಹೋರಾಡುತ್ತಿದ್ದರೂ ಈ ದಿಕ್ಕಿನಲ್ಲಿ ಸಾಧಿಸಿರುವ ಪ್ರಗತಿ ಕಳೆದ ೬೬ ವರ್ಷಗಳ ಸ್ವಯಮಾಡಳಿತದಲ್ಲಿ ಏನೇನೂ ಆಗಿಲ್ಲ. ಅದಕ್ಕೆ ಮುಖ್ಯ ಕಾರಣ ನಾವು ಒಪ್ಪಿಕೊಂಡು ಬಂದಿರುವ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ. ಈ ಹಿನ್ನೆಲೆಯಲ್ಲಿ ಚುನಾವಣೆಯ ಈ ಸಂದರ್ಭದಲ್ಲಿ ಪ್ರತಿಯೊಂದು ಪಕ್ಷವೂ ತನ್ನ ಆರ್ಥಿಕ-ಸಾಮಾಜಿಕ ನೀತಿ ಮತ್ತು ಕಾರ್ಯಕ್ರಮಗಳನ್ನು ಜನರ ಮುಂದೆ ಚರ್ಚೆಗಿಟ್ಟು ಮತ ಯಾಚಿಸಬೇಕಾಗುತ್ತದೆ.

ಆದರೆ ಇಂದು ಯಾವ ಪಕ್ಷವೂ ಅದನ್ನು ಮಾಡುತ್ತಿಲ್ಲ. ಬಿಜೆಪಿಯಂತೂ ಚುನಾವಣೆಗೆ ಮೊದಲೇ ತನ್ನ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಎಂದು ಘೋಷಿಸಿ ಅವರ ವ್ಯಕ್ತಿತ್ವವನ್ನು ವೈಭವೀಕರಿಸಿ, ಪ್ರಚಾರ ಮಾಡುತ್ತಿದೆ. ಮತ್ತು ಆತನಿಂದಲೇ ಸದೃಢ ಭಾರತ ನಿರ್ಮಾಣ ಸಾಧ್ಯ ಎಂದು ಪ್ರತಿಪಾದಿಸುತ್ತಿದೆ. ಆದರೆ ಇದಕ್ಕೆ ಯಾವ ಸದೃಢ ಆಧಾರಗಳೂ ಇಲ್ಲ ಎಂಬುದನ್ನು ಹೇಳಬೇಕಾದ ಮಾಧ್ಯಮಗಳೇ ಇಂದು ಮೋದಿ ಗೆದ್ದೇ ಬಿಟ್ಟು ಪ್ರಧಾನಿಯಾದ ಹಾಗೆ ಭ್ರಮೆ ಹುಟ್ಟಿಸುವ ಕೆಲಸದಲ್ಲಿ ತೊಡಗಿರುವುದು ಮಾತ್ರ ವಿಪರ್ಯಾಸದ ಸಂಗತಿ.



ಏಕವ್ಯಕ್ತಿ ವೈಭವೀಕರಣ ಪ್ರಜಾಪ್ರಭುತ್ವಕ್ಕೆ ಯಾವಾಗಲೂ ಮಾರಕವೇ. ಇದನ್ನು ಹಿಂದೊಮ್ಮೆ ನೋಡಿದ್ದೇವೆ. ಹಾಗಾಗಿ ನಮ್ಮ ದೇಶದ ವೈವಿಧ್ಯಮಯ ಸಂಸ್ಕೃತಿ, ಭಾಷೆ, ಸಾಮಾಜಿಕ ಜನ ಸಮೂಹವನ್ನು ಒಟ್ಟಾಗಿ ಕರೆದೊಯ್ಯುವ ಮಾನವೀಯ ಮೌಲ್ಯಗಳ ಪ್ರತಿಪಾದಕರನ್ನು ಈ ಉನ್ನತ ಹುದ್ದೆಗೆ ಆಯ್ಕೆ ಮಾಡುವುದು ಹಾಗೂ ದೇಶದ ಎಲ್ಲ ಪ್ರಜಾಪ್ರಭುತ್ವ ಪ್ರೇಮಿಗಳು ಸಂಘಟಿತ ಹೋರಾಟ ಮಾಡಿ ಮೋದಿಯನ್ನು ಈ ಹುದ್ದೆಯಿಂದ ದೂರವಿಡುವುದು ದೇಶದ ಹಿತ ದೃಷ್ಟಿಯಿಂದ ಅವಶ್ಯಕವಾಗಿದೆ.

**-ರುದ್ರಪ್ಪ ಹನಗವಾಡಿ,** ನಿವೃತ್ತ ಕೆ.ಎ.ಎಸ್. ಅಧಿಕಾರಿ ಹಾಗೂ ಟ್ರಸ್ಟೀ, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು

---

**ಸಾಹಿತ್ಯ-ಸಂಸ್ಕೃತಿ-ಪ್ರವಾಸ ಇತ್ಯಾದಿ**

## ಬಸವ ಕಲ್ಯಾಣದಲ್ಲಿ ಬಸವನನ್ನು ಹುಡುಕುತ್ತಾ...

ನಾನು ಹೋದ ತಿಂಗಳು ಅನ್ಯಕಾರ್ಯ ನಿಮಿತ್ತ ಗುಲ್ಬರ್ಗದ ಕಡೆ ಹೋಗಿದ್ದಾಗ ಬಸವ ಕಲ್ಯಾಣಕ್ಕೆ ಹೋಗಿ ಬಂದೆ. ಬಸವ ಕಲ್ಯಾಣ ಬಸವಣ್ಣನ ಕ್ರಾಂತಿ ಭೂಮಿ. ಕನ್ನಡ ಪ್ರಜ್ಞೆಯ ಜಾಗೃತ ಸ್ಥಳ. ಬಸವನೊಡನೆ ಅಲ್ಲಮ ಅಕ್ಕ ಇತ್ಯಾದಿ ಶರಣ ಮಹಾಮಹಿಮರು ನಡೆದಾಡಿದ, ಉಸಿರಾಡಿದ ಪವಿತ್ರ ಜಾಗವದು. ಅಷ್ಟು ದೂರ ಗುಲ್ಬರ್ಗಕ್ಕೆ ಹೋದವನು ಕನ್ನಡಿಗನಾಗಿ ಅಲ್ಲಿಗೆ ಹತ್ತಿರದ ಈ ಪವಿತ್ರ ಜಾಗದಲ್ಲೊಮ್ಮೆ ನಡೆದಾಡಿ ಉಸಿರಾಡಿ ಬರುವ ತವಕ ನನ್ನದು.

ಆದರೆ ಅಲ್ಲಿಗೆ ಹೋದೊಡನೆ ನನ್ನ ತವಕ-ತಲ್ಲಣಗಳೆಲ್ಲ ನಿಧಾನವಾಗಿಮಾಯವಾಗತೊಡಗಿದವು. ಊರೇನೋ ಪ್ರಾಚೀನವಾದದ್ದೇ. ಗಾರೆ ಗೋಡೆಗಳ ಹಳೆ ಮನೆಗಳ ಓಣಿಗಳು. ಮಧ್ಯೆ ಇತ್ತೀಚೆಗೆ ಮನೆಗಳನ್ನು ಒಡೆದು ಅಗಲಗೊಳಿಸಿದ ಒಂದೆರಡು ವಿಶಾಲ ರಸ್ತೆಗಳು. ಊರಿಗೆ ಕಾಲಿಟ್ಟೊಡನೆ ಕನ್ನಡ ಮಾತಾಡಿದರೂ ಉರ್ದುವಿನಲ್ಲಿ ಉತ್ತರ ಕೊಡುವ ಕನ್ನಡದ ಜನ! ಬಿಜ್ಜಳನ ಕೋಟೆ ಎಂದು ಹೋದರೆ ಅದರಲ್ಲಿ ಮಸೀದಿ ಕಂಡು ಬೆಚ್ಚಿ ಬೀಳುವಂತಾಗುತ್ತದೆ.ಅದು ಚಾಲುಕ್ಯರ ಕಾಲದ ನಂತರ ಎಷ್ಟೋ ದೊರೆಗಳ ಆಳ್ವಿಕೆಗೆ ಸಿಕ್ಕು ತನ್ನ ಚಹರೆಗಳನ್ನು ಪೂರ್ತಿ ಬದಲಾಯಿಸಿಕೊಂಡಿದೆ. ಅಲ್ಲಿ ಬಸವ-ಬಿಜ್ಜಳರನ್ನು ಹುಡುಕುವುದು ವ್ಯರ್ಥ.

ಇನ್ನು ಊರ ಹೊರಗೆ ಶರಣರ ಗುಹೆಗಳಿವೆ ಎಂದು ಕೇಳಿ ಹೋದರೆ, ಅಲ್ಲಿ ಎಲ್ಲವೂ ಬಸವ ಕಲ್ಯಾಣ ಪ್ರಾಧಿಕಾರದ ಕೋಟಿ ಕೋಟಿ ರೂಪಾಯಿಗಳ ಬಜೆಟ್ಟಿನಡಿಗೆ ಸಿಕ್ಕಿ ಕಾಂಕ್ರೀಟ್-ಗ್ರಾನೈಟುಗಳ ಅಲಂಕಾರಗಳಲ್ಲಿ ತಮ್ಮ ಪ್ರಾಚೀನ ಸೌಂದರ್ಯ ಮತ್ತು ಪಾವಿತ್ರ್ಯಗಳನ್ನು ಕಳೆದುಕೊಂಡು ಜಡತೆಯೇ ಅಲ್ಲಿ ಮೈವೆತ್ತಂತೆ ಭಾಸವಾಗುತ್ತದೆ. ಅಕ್ಕ, ಹರಳಯ್ಯ ಇತ್ಯಾದಿ ಶರಣರು ಧ್ಯಾನ ಮಾಡಿದರೆಂದು ಹೇಳಲಾದ ಗುಹೆಗಳು ಸಿಮೆಂಟಿನ ಹಸಿ ವಾಸನೆಯೊಂದಿಗೆ ನಮ್ಮನ್ನು ದೂರ ತಳ್ಳುತ್ತವೆ. ಮಡಿವಾಳ ಮಾಚಯ್ಯನ ಹೊಂಡ ಎಂದು ಹೋದರೆ, ಆ ಹೊಂಡದಲ್ಲಿ ತುಂಬಿಕೊಂಡಿರುವ ಜೊಂಡನ್ನೂ ಕೀಳದೆ ಸುತ್ತ ಗ್ರಾನೈಟ್ ಕಾಲು ಹಾದಿ ನಿರ್ಮಿಸಿ ಮಾಚಯ್ಯನನ್ನು ಕಬ್ಬಿಣ-ಕಾಂಕ್ರೀಟಿನ ಮಹಾದ್ವಾರದ ಭವ್ಯ ಸಂಕೀರ್ಣದಲ್ಲಿ ಬಂಧಿಸಿಡುವ ಸನ್ನಾಹ ನಡೆದಿರುವುದನ್ನು ಕಂಡು ಜಿಗುಪ್ಸೆ ಹುಟ್ಟುತ್ತದೆ. ಈಗಲೂ ಅಲ್ಲಿ ಮಾಚಯ್ಯನ ಜೀವ ಆಡುತ್ತಿರುವುದನ್ನು ಅಲ್ಲಿ ಇನ್ನೂ ಉಳಿದಿರುವ ಹಳೆಯ ಮರ ಗಿಡಗಳ ಕೆಳಗೆ ಒಂದರೆಕ್ಷಣ ಕೂತಾಗ ನೀವು ಅನುಭವಿಸಬಹುದು. ಅದರೆ ಇದು ಬಹುಕಾಲ ಉಳಿಯುವುದಿಲ್ಲ. ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಜಲ್ಲಿ ಮರಳು-ಗ್ರಾನೈಟ್ ತುಂಬಿದ ಲಾರಿಗಳು ಅಲ್ಲಿ ಹರಿದಾಡತೊಗಿಡವೆ.



ಇಡೀ ಬಸವ ಕಲ್ಯಾಣದಲ್ಲಿ ನಮಗೊಂದಿಷ್ಟು ವಚನ ಕಾಲದ ಸ್ಪಂದನ ಸಿಕ್ಕಿದ್ದು, ಯಾರೋ ಒಬ್ಬ ಬಡ ಶರಣರ ಸುಪರ್ದಿಯಲ್ಲೇ ಉಳಿದುಕೊಂಡು ಬಂದು ಅಭಿವೃದ್ಧಿ ಪ್ರಾಧಿಕಾರದ ಹದ್ದಿನ ಕಣ್ಣಿಗೆ ಇನ್ನೂ ಬೀಳದಿರುವ ಅಲ್ಲಮನ ಗದ್ದುಗೆ ಎಂದು ಕರೆಯಲಾಗುವ ಹಳೆಯ ಒಮಾರತ್ತೊಂದರಲ್ಲಿ. ನಾಲ್ಕಾರು ಮರಗಳ ಮರ್ಮರದಲ್ಲಿ ಸ್ಪಂದಿಸುವ ಆ ಒಳ ಬಯಲು ಆವರಣದಲ್ಲಿ ಗದ್ದುಗೆ ಇದೆ. ಅದು ಬಹುಶಃ ಅಲ್ಲಮ ಕಲ್ಯಾಣದಲ್ಲಿದ್ದಾಗ ಏಕಾಂತ ಧ್ಯಾನ ಮಾಡುತ್ತಿದ್ದ ಜಾಗವಿರಬಹುದು. ಅಲ್ಲಿ ನಾವು ಒಂದರೆಕ್ಷಣ ಕೂತು ಆವರೆಗೆ ನೋಡಿ ಬಂದ ಅಭಿವೃದ್ಧಿಯ ಸುಸ್ತನ್ನು ಸುಧಾರಿಸಿಕೊಂಡೆವು. ನಾನಂತೂ ಆ ಅರೆ ಕ್ಷಣದಲ್ಲಿ ಅಲ್ಲಿನ ಬಡ ಶರಣರಲ್ಲಿ ಅಲ್ಲಮನನ್ನೇ ಕಂಡೆ. ಬಸವ ಕಲ್ಯಾಣದಲ್ಲಿ ಅದೊಂದೇ ಧನ್ಯತೆಯ ಕ್ಷಣ.

ಅಲ್ಲಿಂದ ಊಟ ಹುಡುಕಿಕೊಂಡು ಹೊರಟ ನಮಗೆ ಬಸವ ಕಲ್ಯಾಣದ ಅಂಚಿನಲ್ಲಿ ಈ ಎಲ್ಲ ಅಭಿವೃದ್ಧಿಯ ನಿವೇಶನಗಳಿಗೆ ತಾಕಿಕೊಂಡಂತೇ ಇರುವ ಮತ್ತು ಇದರ ವಿಸ್ತರಣೆಯೇ ಅದು ಇದ್ದಂತಿರುವ ಬಸವ ಕಲ್ಯಾಣದ ಶ್ರೀಮಂತ ವ್ಯಾಪಾರಿಗಳ ಕಾಲೋನಿ ನಮ್ಮ ಕಣ್ಣು ಕುಕ್ಕಿತು. ಶರಣರ ನಿವೇಶನಗಳ ಆಧುನೀಕರಣದ ಅಧ್ವಾನಗಳ ಸೆಲೆ ಸಿಕ್ಕಂತಾಗಿ ಮನಸ್ಸು ಮುದುಡಿತು.

ಇದೆಲ್ಲದಕ್ಕೆ ಕಳಶವಿಟ್ಟಂತೆ ಅಲ್ಲೇ ಒಂದಿಷ್ಟು ದೂರದಲ್ಲಿ ಮಾತೆ ಮಹಾದೇವಿ 'ಬಸವಣ್ಣನ ನೂರು ನಾಲ್ಕು ಅಡಿ ಎತ್ತರದ ಕಾಂಕ್ರೀಟ್ ಪ್ರತಿಮೆ ಸ್ಥಾಪಿಸಿ ಅದರ ಸುತ್ತ ಬಹುಶಃ ನೂರಾರು ಎಕರೆ ಜಾಗದಲ್ಲಿ ನಿರ್ಮಿಸುತ್ತಿರುವ ಬಸವ ಸಂಕೀರ್ಣ ಕಂಡು ಅಯ್ಯೋ ನಾನು ಬಸವಣ್ಣನನ್ನು ಹುಡುಕಿಕೊಂಡು ಇಲ್ಲಿಗೇಕೆ ಬಂದೆ ಎಂದು ಮನಸ್ಸು ಪರಿತಪಿಸತೊಡಗಿತು. ಕನ್ನಡದ ಮನಸ್ಸೇಕೆ ಇಷ್ಟು ಅಭಿರುಚಿಹೀನವಾಗುತ್ತಿದೆ ಎಂದು ನನ್ನ ಮನಸ್ಸು ವ್ಯಾಕುಲಗೊಂಡಿತು.

**-ಡಿ.ಎಸ್.ನಾಗಭೂಷಣ**

## ಪುಸ್ತಕಾವಲೋಕನ

ಪುಸ್ತಕ: **ಗಾಂಧಿಯೊಂದಿಗೆ ಒಬ್ಬ ನಾಸ್ತಿಕ** ಮೂಲ: **ಗೋರಾ** ಕನ್ನಡಕ್ಕೆ: **ವೆಂಕಟೇಶ ಮಾಚಕನೂರ** ಪ್ರ: **ಲೋಹಿಯಾ ಪ್ರಕಾಶನ, ಬಳ್ಳಾರಿ. ಪು:೭೬ ಬೆಲೆ: ರೂ. ೩೦/-**

### ಗಾಂಧೀಜಿಯ ಆಸ್ತಿಕತೆಯ ಪರೀಕ್ಷೆ




**ಗಾ**ಂಧಿ ಅವರ ತತ್ವಾದರ್ಶಗಳನ್ನು ತಿಳಿಸುವ ಪುಸ್ತಕಗಳು ಕನ್ನಡದಲ್ಲಿ ವಿಪುಲವಾಗಿ ಬಂದಿವೆ. ದೇವರು, ಧಾರ್ಮಿಕ ವಿಚಾರಗಳಲ್ಲಿ ಅತ್ಯಂತ ಶ್ರದ್ಧೆ, ಆಚರಣೆಗಳ ಸಂದರ್ಭಗಳಲ್ಲಿ ನಿಷ್ಠೆಯಿಂದಿದ್ದ ಗಾಂಧಿಯವರು ನಾಸ್ತಿಕವಾದದ ಬಗ್ಗೆ ಕುತೂಹಲ ತಾಳುವುದೇ ಒಂದು ಆಶ್ಚರ್ಯದ ವಿಷಯ. ಅವರು ಇಂತಹ ಆಸಕ್ತಿ ತಾಳುವಂತೆ ಮಾಡಿದ 'ಗೋರಾ' (ಜಿ.ರಾಮಚಂದ್ರರಾವ್) ಅವರ ತಾಳ್ಮೆ, ಗಟ್ಟಿಯಾದ ವೈಚಾರಿಕ ಬದ್ಧತೆಗಳು ಈ ಪುಸ್ತಕದಲ್ಲಿ ಸ್ಪಷ್ಟವಾಗುತ್ತದೆ.

ಗೋರಾ ಅವರು ಗಾಂಧೀಜಿಯ ನೈಜ ಅನುಯಾಯಿ. ಆದರೆ ಅವರದು ನಾಸ್ತಿಕವಾದದ ದಾರಿ. ಇವರಿಬ್ಬರ ಪರಸ್ಪರ ಸಂಪರ್ಕದ ಪ್ರಾರಂಭದಲ್ಲಿ ತಮ್ಮ ವಿಭಿನ್ನ ಸಿದ್ಧಾಂತಗಳ ಬಗ್ಗೆ ಚರ್ಚೆ ನಡೆಯುತ್ತದೆ; ಎಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುವುದೋ ಎನಿಸುತ್ತದೆ. ಆದರೆ ಗಾಂಧೀಯವರ ಉದಾರ ಮನೋಭಾವ ಈ ಸಂಶಯಕ್ಕೆ ತೆರೆ ಎಳೆಯುತ್ತದೆ.

ಗೋರಾ ಅವರ ಮೇಲೆ ಪರಿಣಾಮ ಬೀರಿದ ಮತಾಂತರ ಪ್ರಕ್ರಿಯೆಗಳು 'ಮತ' 'ಧರ್ಮ', 'ದೇವರು' ಗಳ ಬಗ್ಗೆ ಅವರು ಗಾಢವಾಗಿ ಚಿಂತಿಸುವಂತೆ ಮಾಡುತ್ತವೆ. ಜಾತಿ–ಜಾತಿಗಳಲ್ಲಿ, ಮೇಲು–ಕೀಳು, ಮತಗಳ ನಡುವಿನ ಹೋರಾಟಗಳು– ಇವುಗಳ ಮೂಲ ಬೀಜವೆಂದರೆ 'ದೇವರು' ಎಂಬುದನ್ನು ಅವರು ಕಂಡುಕೊಳ್ಳುತ್ತಾರೆ.

ಆದರೆ 'ನಿರೀಶ್ವರವಾದ'ದ ವಾಸ್ತವಿಕತೆಯನ್ನು ಗಾಂಧೀಜಿಗೆ ಮುಟ್ಟಿಸುವುದು ಅಷ್ಟು ಸುಲಭವಾಗಿರಲಿಲ್ಲ. ೧೯೩೦ರಿಂದ ಇದಕ್ಕಾಗಿ ಯತ್ನಿಸುತ್ತಾರೆ. ಪ್ರಾರಂಭದಲ್ಲೇ ಗಾಂಧೀಜಿ 'ದೇವರು ಮನುಷ್ಯನ ತಿಳುವಳಿಕೆಗೆ ಅತೀತ. ಯಾವುದೇ ಗುರಿ ಸಾಧನೆಗೆ ಉತ್ಸಾಹ, ಸಾಮರ್ಥ್ಯದೊಂದಿಗೆ ದೇವರಲ್ಲಿ ನಂಬಿಕೆ ಇರಬೇಕು. ದೇವರನ್ನು ಕುರಿತು ಹೇಳುವವರು ಅದಕ್ಕೆ ತದ್ವಿರುದ್ಧವಾಗಿರುವುದರಿಂದಲೇ ದೇವರ ಬಗ್ಗೆ ಅತೃಪ್ತಿಯಿಂದ ಮಾತನಾಡುತ್ತಾರೆ' ಎಂದು ಆಸ್ತಿಕವಾದವನ್ನು ಸಮರ್ಥಿಸುತ್ತಾರೆ. ದೇವರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ತಮ್ಮ ಆಶ್ರಮಕ್ಕೆ ಗೋರಾರವರನ್ನು ಆಹ್ವಾನಿಸುತ್ತಾರೆ.

ಮುಂದೆ ಅನೇಕ ಸಂದರ್ಭಗಳಲ್ಲಿ ಇವರಿಬ್ಬರ ನಡುವೆ ನಡೆಯುವ ಮಾತುಕತೆಗಳಿಂದ ಈ ಎರಡೂ ತತ್ವಗಳನ್ನು ಪರಸ್ಪರ ಅರ್ಥ ಮಾಡಿಕೊಳ್ಳುವ ಮುಕ್ತ ಮನಸ್ಸುಗಳ ವಿಶಾಲತೆ ತಿಳಿಯುತ್ತದೆ.

ನಾಸ್ತಿಕವಾದ ಎಂದರೆ ಆತ್ಮ ವಿಶ್ವಾಸ ಮತ್ತು ಮುಕ್ತ ಚಿಂತನೆ. ದೇವರ ನಂಬಿಕೆಯು ಮನುಷ್ಯನನ್ನು ಅಧೀನಗೊಳಿಸಿಕೊಳ್ಳುತ್ತದೆ. ಸ್ವತಂತ್ರ ಚಿಂತನೆ – ಬದುಕಿಗೆ ಅವಕಾಶ ನೀಡುವುದಿಲ್ಲ. ನಿರೀಶ್ವರವಾದ ಸಕಾರಾತ್ಮಕ ಬದುಕಿಗೆ ಅನುವು ಮಾಡಿಕೊಡುತ್ತದೆ– ಎಂಬುದನ್ನು ಗಾಂಧೀಜಿಯವರಿಗೆ ಗೋರಾ ತಿಳಿಸುತ್ತಾರೆ.

ಈ ರೀತಿಯ ವಿಭಿನ್ನ ನಿಲುವುಗಳಿದ್ದರೂ, ಗೋರಾರವರು ಗಾಂಧೀಜಿಯವರ ಸಾಮಾಜಿಕ ಕಾರ್ಯಕ್ರಮಗಳಾದ ಅಸ್ಪೃಶ್ಯತೆ ನಿವಾರಣೆ, ವಯಸ್ಕರ ಶಿಕ್ಷಣ, ಭೂ ಸುಧಾರಣೆ, ಆರ್ಥಿಕ ಸಮಾನತೆ, ಜಾತಿ ರಹಿತ ಸಮಾಜ ನಿರ್ಮಾಣದಂತಹ ಚಟುವಟಿಕೆಗಳಲ್ಲಿ ನಿಷ್ಠೆಯಿಂದ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಮತ್ತು ಈ ಕಾರಣದಿಂದ ಗಾಂಧೀಜಿಗೆ ಹತ್ತಿರವಾಗುತ್ತಾರೆ.

೧೯೪೫ರಲ್ಲಿ, ಗಾಂಧೀಜಿಯೊಂದಿಗೆ ನಿರೀಶ್ವರವಾದ–ಸತ್ಯ–ನೈತಿಕತೆ–ಧರ್ಮ ಇವುಗಳ ಬಗೆಗೆ ಒಂದು ಸುದೀರ್ಘ ಸಂದರ್ಶನ ನಡೆಯುತ್ತದೆ. ನಿಜವಾದ, ಪ್ರಮಾಣಿಕವಾದ 'ಮಾನವ ಧರ್ಮ' ದ ಆಚರಣೆ 'ದೇವರು' ಎಂಬುದನ್ನು ಮೀರಿದುದು ಎಂದು ಗೋರಾ ಸ್ಪಷ್ಟಪಡಿಸುತ್ತಾರೆ. ದಿನದಿಂದ ದಿನಕ್ಕೆ ತಮ್ಮ ಹೃದಯಕ್ಕೆ ಹತ್ತಿರವಾದ ಗೋರಾರವರನ್ನು ಗಾಂಧೀಜಿ "ನೀವು ನನ್ನ ಕುಟುಂಬದ ಸದಸ್ಯರು" ಎನ್ನುತ್ತಾರೆ. ಒಂದು ಸಂದರ್ಭದಲ್ಲಿ "ನಾನೇನು ಅಂಧಶ್ರದ್ಧೆಯವನೇ? ನಾನು ಪರಮ ನಿರೀಶ್ವರವಾದಿ" ಎನ್ನುತ್ತಾರೆ. ಗೋರಾರವರ ಮಗಳ ಅಂತರ್ಜಾತೀಯ ವಿವಾಹವನ್ನು ಗಾಂಧೀಜಿ ತಮ್ಮ ಆಶ್ರಮದಲ್ಲೇ ಒಬ್ಬ ಹರಿಜನ ವ್ಯಕ್ತಿಯ ನೇತೃತ್ವದಲ್ಲಿ ನೆರವೇರಿಸುತ್ತಾರೆ. "ದೇವರ ಹೆಸರಿನಲ್ಲಿ" ಎಂಬುದಕ್ಕೆ ಬದಲಾಗಿ "ಸತ್ಯದ ಹೆಸರಿನಲ್ಲಿ" ಎಂದು ಮದುವೆ ನಡೆಯುತ್ತದೆ.

ನೈತಿಕತೆಯ ಆಧಾರದ ಮೇಲಿನ ನಾಸ್ತಿಕವಾದವನ್ನು ಗಾಂಧೀಜಿಯವರು ಗ್ರಹಿಸುತ್ತಿರುವ ಹಂತದಲ್ಲೆ ಅವರ ಹತ್ಯೆಯಾಗುತ್ತದೆ.

"ಗಾಂಧೀಜಿಯ ಹತ್ಯೆ ನಾಗರೀಕತೆಗೆ ಆದ ದೊಡ್ಡ ಹಾನಿ, ಅಂತೆಯೇ ನಿರೀಶ್ವರವಾದಕ್ಕೂ ಕೂಡ" ಎಂದು ಗೋರಾ ಅವರು ಈ ಕೃತಿಯ ಕೊನೆಯಲ್ಲಿ ಹೇಳುತ್ತಾರೆ.

'ದೇವರು'– ಬಗ್ಗೆ ಕೇವಲ ಒಣ ಪಾಂಡಿತ್ಯಕ್ಕೆ ಕಟ್ಟು ಬೀಳದ ಉದಾರ ಮನೋಭಾವದ ಗಾಂಧೀ ಅವರ ವ್ಯಕ್ತಿತ್ವ ಇಲ್ಲಿ ಸ್ಪಷ್ಟವಾಗುತ್ತದೆ. ಸ್ವಾತಂತ್ರ್ಯ ಚಳುವಳಿಯೊಂದಿಗೆ ನಮ್ಮ ಸಮಾಜದ ಪರಿವರ್ತನೆಯ ಬಗ್ಗೆ ಇವರಿಬ್ಬರಿಗೂ ಇದ್ದ ಪ್ರಯೋಗ ಶೀಲ ಮನಸ್ಸು ಹೇಗಿತ್ತೆಂದು ಈ ಕೃತಿ ಹೇಳುತ್ತದೆ.

ಅನಿವಾರ್ಯವಾಗಿ ಅರ್ಧಾಂತವಾಗಿರುವ ಇವರಿಬ್ಬರ ಸಂವಾದವೇ ಸಾಕಷ್ಟು ಚಿಂತನಾರ್ಹವಾಗಿದೆ; ನಿರೀಶ್ವರವಾದದ ಹಾದಿಗೆ ಹೊಸ ಬೆಳಕು ಚೆಲ್ಲುತ್ತದೆ. ಕೊರತೆಯೆಂದರೆ ಈ ಸಂವಾದದ ಹಾದಿ ಮತ್ತಷ್ಟು ತಿರುವು ಪಡೆಯಬೇಕಿತ್ತು ಎನ್ನುವುದು. ಆದರೆ ಧರ್ಮಾಂಧರ ಕೃತ್ಯ?– ಅನೇಕ ಅರ್ಥಪೂರ್ಣ ಸಂವಾದಗಳ್ನು ನಾಶಪಡಿಸುತ್ತದೆ. ಈ ಅಂಶವನ್ನು ಈ ಚಿಕ್ಕ ಕೃತಿ ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಗಾಂಧೀಜಿ ವಿಚಾರಗಳ ಗ್ರಂಥ ಸಮೂಹಕ್ಕೆ ಈ ಕೃತಿ ಒಂದು ಅಮೂಲ್ಯ ಸೇರ್ಪಡೆಯಾಗಿದೆ.

ಮಾಚಕನೂರರ ಅನುವಾದ ಸರಳವಾಗಿದೆ, ಸಾರ್ಥಕ ಕಾರ್ಯವಾಗಿದೆ.

**– ಎಂ.ಬಿ.ನಟರಾಜ್**

**ಪ್ರಿಯ ಓದುಗರೇ,**

**'ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು ಸಂಪಾದಕರು, ಹೊಸ ಮನುಷ್ಯ–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ(IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ಸಂಪಾದಕರಿಗೆ ತಿಳಿಸಬೇಕು. ಚಂದಾ ವಿವರ ಹಾಗೂ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.**–ಸಂಪಾದಕ

ಇತ್ತೀಚೆಗೆ ನಿಧನರಾದ ಹಿರಿಯ ನಟ ಸಿ.ಆರ್. ಸಿಂಹ ಮತ್ತು ಕನ್ನಡದ ಶ್ರೇಷ್ಠ ಕಥನಕಾರ ಹಾಗೂ ಚಿಂತಕ ಯಶವಂತ ಚಿತ್ತಾಲರ ನಿಧನಕ್ಕೆ ಪತ್ರಿಕೆ ಈ ಮೂಲಕ ತನ್ನ ಸಂತಾಪಗಳನ್ನು ಸೂಚಿಸುತ್ತದೆ. –ಸಂಪಾದಕ

**ಹೊಸ ಮನುಷ್ಯ ಓದುಗರೆಲ್ಲರಿಗೆ**
**ಹಾರ್ದಿಕ ಶುಭಾಶಯಗಳು**



– –ಲೋಕೇಶ ಅಗಸನ ಕಟ್ಟೆ
ಹಾಗೂ ಕುಟುಂಬ
ಚಿತ್ರದುರ್ಗ

**ಹೊಸ ಮನುಷ್ಯ ಓದುಗರೆಲ್ಲರಿಗೆ**
**ಹಾರ್ದಿಕ ಶುಭಾಶಯಗಳು**



– ಚಿ. ಪ್ರೀತಿ ಆರ್. ಪ್ರತಿಭಾ
ಹಾಗೂ
ಚಿ. ಪೂರ್ಣಚಂದ್ರ ಆರ್.. ಲೋಹಿಯಾ
ಇವರ ತಂದೆ ತಾಯಿಗಳು

**'ಹೊಸ ಮನುಷ್ಯ'ದ ಓದುಗರಿಗೆ**

**ಹೃತ್ಪೂರ್ವಕ ಶುಭಾಶಯಗಳು**



**–ಚಿ. ಆರುಷ್ ತೇಜಸ್ವಿ**

**ಹಾಗೂ ಚಿ. ಆದಿತಿ**

**ಇವರ ತಾತ ಮತ್ತು ಅಜ್ಜಿ**

## ತಿಂಗಳ ಸಾಲುಗಳು...



"ಹರ್ಷ ಮತ್ತು ನೆಮ್ಮದಿಯನ್ನು ಪಡೆಯಲು ಪ್ರಯತ್ನಗಳನ್ನು ನಡೆಸಿಯೇ ಮನುಷ್ಯರು ಅವುಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದರಲ್ಲಿಯೇ ನೈಸರ್ಗಿಕ ಕೃಷಿಯ ತಿರುಳು ಅಡಗಿದೆ. ಕೃಷಿಯ ಅಂತಿಮ ಗುರಿ, ಬರಿ ಹೊಲ ಗದ್ದೆಗಳಲ್ಲಿ ಬೆಳೆ ಬೆಳೆಯುವುದಲ್ಲ, ಮಾನವತೆಯ ಬೆಳೆ ತೆಗೆಯುವುದೇ ಆಗಿದೆ ಮತ್ತು ಅದನ್ನು ಉತ್ತಮಪಡಿಸುತ್ತಾ ಹೋಗುವುದೇ ಆಗಿದೆ"

**-ಫುಕುವೋಕಾ**

**ಪತ್ರಿಕೆಗೆ ಶುಭ ಕೋರುತ್ತಾ...**

**ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn., Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568

Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204 (Karnataka)